Editor: NITYANANDASWAMI Publisher: U. BASAVARAJA

RNI No. KARKAN/2006/17926

# ಜನಶಕ್ತಿ ಕನ್ನಡ ವಾರ ಪತ್ರಿಕೆ


ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 44 | ಅಕ್ಟೋಬರ್ 24–30, 2022 | ಪುಟ 16 | ರೂ.10/-

Volume: 16 Issue: 44 October 24-30, 2022 Pages: 16 Price: 10/-

https://janashakthi.wordpress.com e-mail : js_weekly@yahoo.com



## ಟೋಲ್ ಸಂಗ್ರಹದ ಲೂಟಿಗೆ ಸರಕಾರದ್ದೇ ಕುಮ್ಮಕ್ಕು



## ಸರ್ಕಾರಿ ಶಾಲೆಗಳಿಗೂ ಹಬ್ಬಿದ ಡೊನೇಶನ್ ಪಿಡುಗು



## ಹಸಿವಿನ ಸೂಚ್ಯಂಕದ ಸುತ್ತ ಅಸಂಗತ ನಾಟಕ



## ಸಂಕಷ್ಟದಲ್ಲಿರುವ ಕಾಂಗ್ರೆಸ್ಸಿಗೆ ಖರ್ಗೆಯವರ ಸಾರಥ್ಯ

# ಗುಜರಾತ್ ಚುನಾವಣಾ ಆಯುಕ್ತರು ಸಹಿ ಮಾಡಿದ ಎಂಒಯುಗಳನ್ನು ರದ್ದು ಮಾಡಬೇಕು–ಮುಖ್ಯ ಚುನಾವಣಾ ಅಯುಕ್ತರಿಗೆ ಯೆಚುರಿ ಪತ್ರ

ಗುಜರಾತ್ ಚುನಾವಣಾ ಆಯುಕ್ತರು ಕೈಗಾರಿಕಾ ಘಟಕಗಳೊಂದಿಗೆ ಅವು ತಮ್ಮ ಉದ್ಯೋಗಿಗಳ ಚುನಾವಣಾ ಭಾಗವಹಿಸುವಿಕೆಯ ಮೇಲ್ವಿಚಾರಣೆ ನಡೆಸುವುದಾಗಿ ಒಪ್ಪುವ ಎಂಒಯುಗಳನ್ನು ಮಾಡಿಕೊಂಡಿದ್ದಾರೆಂಬ ಸುದ್ದಿ ಅತ್ಯಂತ ಆಘಾತಕಾರಿ ಮತ್ತು ಆಕ್ರೋಶಕಾರಿ, ಆ ಎಂಒಯುಗಳನ್ನು ರದ್ದುಗೊಳಿಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಆಗ್ರಹಿಸಿದ್ದಾರೆ. ಈ ಕುರಿತು ಅವರು ಭಾರತದ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಿಗೆ ಅಕ್ಟೋಬರ್ 19ರಂದು ಬರೆದ ಪತ್ರದಲ್ಲಿ 326 ನೇ ವಿಧಿಯ ಅಡಿಯಲ್ಲಿ ಭಾರತದ ಸಂವಿಧಾನವು ಮತದಾನದ ಹಕ್ಕನ್ನು ಖಾತರಿಪಡಿಸುತ್ತದೆ ಎಂಬುದನ್ನು ಆಯೋಗಕ್ಕೆ ನೆನಪಿಸಬೇಕಾಗಿರುವುದು ದುರದೃಷ್ಟಕರ ಎಂದಿದ್ದಾರೆ; ಮತದಾನದ ಹಕ್ಕು ಮತದಾನ ಮಾಡದಿರುವ ಹಕ್ಕನ್ನು ಕೂಡ ಒಳಗೊಂಡಿದೆ ಎಂದೂ ಕೇಂದ್ರ ಸರ್ಕಾರ ವಾದಿಸಿತ್ತು ಮತ್ತು ಮತದಾನದ ಹಕ್ಕನ್ನು ಮೂಲಭೂತ ಕರ್ತವ್ಯವಾಗಿ ಹೇರಲು ಸಾಧ್ಯವಿಲ್ಲ ಎಂದು ಚುನಾವಣಾ ಸುಧಾರಣೆಗಳ ಕುರಿತ ಕಾನೂನು ಆಯೋಗ ಗಮನಿಸಿತ್ತು ಎಂಬ ಸಂಗತಿಯತ್ತವೂ ಚುನಾವಣಾ ಆಯೋಗದ ಗಮನ ಸೆಳೆಯುತ್ತ ಅವರು ಮತದಾನದ ಹಕ್ಕನ್ನು ಮೂಲಭೂತ ಕರ್ತವ್ಯವಾಗಿ ಜಾರಿಗೊಳಿಸುವಲ್ಲಿ ಕಾರ್ಪೊರೇಟ್‌ಗಳನ್ನು ತೊಡಗಿಸಿಕೊಳ್ಳುವ ಚುನಾವಣಾ ಆಯೋಗದ ಪ್ರಸ್ತುತ ಕ್ರಮವು ಸಂಪೂರ್ಣವಾಗಿ ಅಸಾಂವಿಧಾನಿಕವಾಗಿದೆ ಮತ್ತು ರಹಸ್ಯ ಮತದಾನದ ಅಪಹಾಸ್ಯಕ್ಕೆ ಕಾರಣವಾಗುತ್ತದೆ ಎಂದು ಹೇಳಿದ್ದಾರೆ.

ಈ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಮಾನ್ಯರೇ,

ತಮ್ಮ ಗಮನವನ್ನು "ಮೊದಲ ಬಾರಿಗೆ, ಗುಜರಾತ್‌ನಲ್ಲಿ 1,000 ಕ್ಕೂ ಹೆಚ್ಚು ಕಾರ್ಪೊರೇಟ್ ಸಂಸ್ಥೆಗಳು ಚುನಾವಣಾ ಆಯೋಗದೊಂದಿಗೆ 'ತಮ್ಮ ಉದ್ಯೋಗಿಗಳ ಚುನಾವಣಾ ಭಾಗವಹಿಸುವಿಕೆ'ಯ ಮೇಲ್ವಿಚಾರಣೆ ಮತ್ತು ಮತ ಚಲಾಯಿಸದವರ ಹೆಸರುಗಳನ್ನು ತಮ್ಮ ವೆಬ್‌ಸೈಟ್‌ಗಳು ಅಥವಾ ಕಚೇರಿ ಸೂಚನಾ ಫಲಕಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುವುದಾಗಿ ಹೇಳುವ ಒಪ್ಪಂದಗಳಿಗೆ ಸಹಿ ಮಾಡಿವೆ...... ಎಂಒಯುಗಳಿಗೆ ಪ್ರತ್ಯೇಕ ಘಟಕಗಳು ಹಾಗೂ ಉದ್ಯಮ ಸಂಸ್ಥೆಗಳೊಂದಿಗೆ ಸಹಿ ಹಾಕಲಾಗಿದ್ದು, ಮತದಾನದ ದಿನದವರೆಗೂ ಇನ್ನಷ್ಟು ಘಟಕಗಳಿಂದ ಇದನ್ನು ಪಡೆಯುವ ಪ್ರಯತ್ನ ಮುಂದುವರಿಯಲಿದೆ. ಈ ವರ್ಷದ ಕೊನೆಯಲ್ಲಿ ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿವೆ"(ಇಂಡಿಯನ್ ಎಕ್ಸ್‌ಪ್ರೆಸ್) ಎಂಬ ಅತ್ಯಂತ ಆಘಾತಕಾರಿ ಸುದ್ದಿ ವರದಿಯತ್ತ ಸೆಳೆಯುವುದಕ್ಕಾಗಿ ಈ ಪತ್ರ.

ಇದು ಅತಿರೇಕದ ಸಂಗತಿಯಲ್ಲದೆ ಬೇರೇನೂ ಅಲ್ಲ ಎಂದು ನಾವು ಬಲವಾಗಿ ಭಾವಿಸುತ್ತೇವೆ. ಇದು ಮತದಾರರ ನಿರಾಸಕ್ತಿ ನಿವಾರಿಸುವ ಒಂದು ಪ್ರಯತ್ನ ಎಂದು ಚುನಾವಣಾ ಆಯೋಗ ಹೇಳಿಕೊಂಡಿದೆ, ಆದರೆ ಮತದಾನ ಮಾಡದವರನ್ನು ಹೆಸರಿಸುವ ಮತ್ತು ನಾಚಿಕೆಗೇಡು ಮಾಡುವ ಕ್ರಮವು ಕಡ್ಡಾಯ ಮತದಾನದ ಕಡೆಗೆ ಬಲವಂತ ಮಾಡುವ ಹೆಜ್ಜೆಯಾಗಿದೆ. ವರದಿಯು ವಾಸ್ತವವಾಗಿ –"ನಾವು ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಜಾರಿಗೊಳಿಸಲು ಸಹಾಯ ಮಾಡುವ 233 ಎಂಒಯುಗಳಿಗೆ (ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್–ತಿಳುವಳಿಕೆ ಪತ್ರ) ಸಹಿ ಹಾಕಿದ್ದೇವೆ. ಗುಜರಾತ್‌ನಲ್ಲಿ ನಾವು ಮೊದಲ ಬಾರಿಗೆ, 1,017 ಕೈಗಾರಿಕಾ ಘಟಕಗಳಿಗೆ ಸೇರಿದ ಕಾರ್ಮಿಕರ ಚುನಾವಣಾ ಭಾಗವಹಿಸುವಿಕೆಯ ಮೇಲ್ವಿಚಾರಣೆಯನ್ನು ಮಾಡುತ್ತೇವೆ" ಎಂದು ಗುಜರಾತ್ ಮುಖ್ಯ ಚುನಾವಣಾ ಅಧಿಕಾರಿಯನ್ನು ಉಲ್ಲೇಖಿಸುತ್ತದೆ.

326 ನೇ ವಿಧಿಯ ಅಡಿಯಲ್ಲಿ ಭಾರತದ ಸಂವಿಧಾನವು ಮತದಾನದ ಹಕ್ಕನ್ನು ಖಾತರಿಪಡಿಸುತ್ತದೆ ಎಂಬುದನ್ನು ನಾವು ನಿಮಗೆ ನೆನಪಿಸಬೇಕಾಗಿರುವುದು ದುರದೃಷ್ಟಕರ.

ಕಡ್ಡಾಯ ಮತದಾನದ ಹಕ್ಕಿನ ಬಗ್ಗೆ ಪರಿಶೀಲಿಸುವಾಗ, ಸುಪ್ರೀಂ ಕೋರ್ಟ್ ಪ್ರತಿಕ್ರಿಯೆಯನ್ನು ಸಲ್ಲಿಸಲು ಕೇಂದ್ರವನ್ನು ಕೇಳಿತ್ತು ಎಂಬುದನ್ನು ನಾವು ನಿಮಗೆ ನೆನಪಿಸುತ್ತೇವೆ. 2015 ರಲ್ಲಿ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವರು ಸಲ್ಲಿಸಿದ ಪ್ರತಿಕ್ರಿಯೆಯಲ್ಲಿ ಕಡ್ಡಾಯ ಮತದಾನದ ವ್ಯವಸ್ಥೆಯನ್ನು ತಂದರೆ, ಅದು ದೇಶದಲ್ಲಿ ಪ್ರಜಾಪ್ರಭುತ್ವ ವಿರೋಧಿ ವಾತಾವರಣವನ್ನು ಸೃಷ್ಟಿಸುತ್ತದೆ ಎಂದು ಹೇಳಿತ್ತು. ಮತದಾನದ ಹಕ್ಕು ಮತದಾನ ಮಾಡದಿರುವ ಹಕ್ಕನ್ನು ಕೂಡ ಒಳಗೊಂಡಿದೆ ಎಂದೂ ಕೇಂದ್ರ ಸರ್ಕಾರ ವಾದಿಸಿತ್ತು. ತನ್ನ ಸಲ್ಲಿಕೆಯಲ್ಲಿ, ಕೇಂದ್ರ ಸರ್ಕಾರವು ಚುನಾವಣಾ ಸುಧಾರಣೆಗಳ ಕುರಿತು ಕಾನೂನು ಆಯೋಗದ ವರದಿಯನ್ನು ಕೂಡ ಉಲ್ಲೇಖಿಸಿ, ಮತದಾನದ ಹಕ್ಕನ್ನು ಮೂಲಭೂತ ಕರ್ತವ್ಯವಾಗಿ ಹೇರಲು ಸಾಧ್ಯವಿಲ್ಲ ಎಂದು ಆಯೋಗವು ಗಮನಿಸಿದೆ ಎಂದು ಹೇಳಿತ್ತು.

ಮತದಾನದ ಹಕ್ಕನ್ನು ಮೂಲಭೂತ ಕರ್ತವ್ಯವಾಗಿ ಜಾರಿಗೊಳಿಸುವಲ್ಲಿ ಕಾರ್ಪೊರೇಟ್‌ಗಳನ್ನು ತೊಡಗಿಸಿಕೊಳ್ಳುವ ಚುನಾವಣಾ ಆಯೋಗದ ಪ್ರಸ್ತುತ ಕ್ರಮವು ಸಂಪೂರ್ಣವಾಗಿ ಅಸಾಂವಿಧಾನಿಕವಾಗಿದೆ. ಇದಲ್ಲದೇ ಚುನಾವಣಾ ಬಾಂಡ್‌ಗಳ ಮೂಲಕ ಅನಾಮಧೇಯ ಕಾರ್ಪೊರೇಟ್ ನಿಧಿ ನೀಡಿಕೆಯ ಈಗಾಗಲೇ ವಿವಾದಾಸ್ಪದವಾಗಿರುವ ಹಿನ್ನೆಲೆಯಲ್ಲಿ ಇದು ಕಾರ್ಪೊರೇಟ್‌ಗಳನ್ನು ಚುನಾವಣೆಯ ನಿರ್ವಹಣೆಯಲ್ಲಿ ಮತ್ತಷ್ಟು ತೊಡಗಿಸಿಕೊಳ್ಳುತ್ತದೆ. ಇದಲ್ಲದೆ, ಪ್ರಸ್ತುತ ಇವಿಎಂ ಯಂತ್ರ ಎಣಿಕೆ ಪ್ರಕ್ರಿಯೆಯಲ್ಲಿ ಮತಪತ್ರಗಳನ್ನು ಮಿಶ್ರಣ ಮಾಡುವ ಹಿಂದಿನ ಅಭ್ಯಾಸವು ಪ್ರಾಯೋಗಿಕವಾಗಿ ಅಸ್ತಿತ್ವದಲ್ಲಿಲ್ಲ. ಇವಿಎಂ ಎಣಿಕೆಯು ಪ್ರತಿ ಮತಗಟ್ಟೆಯ ಮತದಾನದ ರೀತಿಯನ್ನು ಪಾರದರ್ಶಕವಾಗಿ ಕೊಡುತ್ತದೆ. ಇದು ಕಾರ್ಪೊರೇಟ್ ಮೇಲ್ವಿಚಾರಣೆಯ ಈ ಪ್ರಕ್ರಿಯೆಯಲ್ಲಿ ಪರಿಶೀಲಿಸಲ್ಪಡುವ ಕೆಲಸಗಾರರನ್ನು ಬೆದರಿಕೆ ಮತ್ತು ಸೇಡಿನ ಕ್ರಮಕ್ಕೆ ಬಹಳ ಗುರಿಯಾಗುವಂತೆ ಮಾಡುತ್ತದೆ. ಇದು ರಹಸ್ಯ ಮತದಾನದ ಅಪಹಾಸ್ಯಕ್ಕೆ ಕಾರಣವಾಗಿದೆ.

ಆದ್ದರಿಂದ, ಈ ವರದಿಯಾಗಿರುವ ನಡೆಯನ್ನು ರದ್ದುಪಡಿಸುವ ಮೂಲಕ ಎಲ್ಲಾ ವಿವಾದಗಳನ್ನು ನಿವಾರಿಸಬೇಕೆಂದು ನಾವು ಚುನಾವಣಾ ಆಯೋಗವನ್ನು ಆಗ್ರಹಿಸುತ್ತೇವೆ.

ತಮ್ಮ ವಿಶ್ವಾಸಿ

ಸೀತಾರಾಂ ಯೆಚುರಿ
ಪ್ರಧಾನ ಕಾರ್ಯದರ್ಶಿ

# ಕೇರಳ ರಾಜ್ಯಪಾಲರ ಸಂವಿಧಾನ–ವಿರೋಧಿ, ಪ್ರಜಾಪ್ರಭುತ್ವ–ವಿರೋಧಿ ಹೇಳಿಕೆಗಳು ತಡೆಯಲು ರಾಷ್ಟ್ರಾಧ್ಯಕ್ಷರು ಮಧ್ಯಪ್ರವೇಶಿಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ



ಕೇರಳದ ರಾಜ್ಯಪಾಲರಾದ ಶ್ರೀ ಆರಿಫ್ ಮೊಹಮ್ಮದ್ ಖಾನ್ ಅವರು ತಾವು ಹೊಂದಿರುವ ಸಾಂವಿಧಾನಿಕ ಹುದ್ದೆಗೆ ತಕ್ಕುದಲ್ಲದ ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ.

ಇದರಲ್ಲಿ ಇತ್ತೀಚಿನದು, ಕೇರಳ ರಾಜ್ಯಪಾಲರ ಅಧಿಕೃತ ಹ್ಯಾಂಡಲ್‌ನಿಂದ ಬಂದಿರುವ ಟ್ವೀಟ್. ಇದರಲ್ಲಿ ಕೇರಳ ರಾಜಭವನದ ಸಾರ್ವಜನಿಕ ಸಂಪರ್ಕ ಅಧಿಕಾರಿಯು ರಾಜ್ಯಪಾಲರನ್ನು ಉಲ್ಲೇಖಿಸಿ, ಮಂತ್ರಿಗಳ ಹೇಳಿಕೆಗಳು ರಾಜ್ಯಪಾಲರ ಹುದ್ದೆಯ ಘನತೆಯನ್ನು ಇಳಿಸಿದರೆ, ಅದು "ಇಷ್ಟವನ್ನು ಹಿಂತೆಗೆದುಕೊಳ್ಳುವುದು' ಸೇರಿದಂತೆ ಕ್ರಮಗಳನ್ನು ಕೈಗೊಳ್ಳಲು ಆಹ್ವಾನವಾಗಬಹುದು ಎಂದಿದ್ದಾರೆ.

ಅಂದರೆ ರಾಜ್ಯಪಾಲರು ತಮ್ಮ ಇಷ್ಟವನ್ನು ಹಿಂತೆಗೆದುಕೊಂಡು ಸಚಿವರನ್ನು ವಜಾಗೊಳಿಸಬಹುದು ಎಂದು ಹೇಳಿದಂತಾಗುತ್ತದೆ. ಇಂತಹ ನಿರಂಕುಶ ಅಧಿಕಾರಗಳನ್ನು ಸಂವಿಧಾನದಲ್ಲಿ ರಾಜ್ಯಪಾಲರಿಗೆ ನೀಡಲಾಗಿಲ್ಲ. ಇಂತಹ ಹೇಳಿಕೆ ನೀಡುವ ಮೂಲಕ ಶ್ರೀ ಖಾನ್ ತಮ್ಮ ರಾಜಕೀಯ ಪಕ್ಷಪಾತ ಮತ್ತು ಎಲ್‌ಡಿಎಫ್ ಸರ್ಕಾರದ ಬಗ್ಗೆ ಹಗೆತನವನ್ನು ಬಹಿರಂಗಪಡಿಸಿದ್ದಾರಷ್ಟೇ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಕೇರಳ ರಾಜ್ಯಪಾಲರು ಇಂತಹ ಸಂವಿಧಾನ ವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಹೇಳಿಕೆಗಳನ್ನು ನೀಡುವುದನ್ನು ತಡೆಯಲು ಭಾರತದ ರಾಷ್ಟ್ರಪತಿಗಳು ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿದೆ.

75 ವರ್ಷಗಳ ನಂತರವೂ ಅಜ್ಞಾನದ ಪ್ರದರ್ಶನ–ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ

ತನ್ನನ್ನು ಟೀಕಿಸಿದರೆ ಸಚಿವ ಸ್ಥಾನದಿಂದ ವಜಾ ಮಾಡುವುದಾಗಿ ರಾಜ್ಯಪಾಲರು ಬೆದರಿಕೆ ಹಾಕಿರುವುದು ಭಾರತದ ಸಂವಿಧಾನ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಅಜ್ಞಾನವನ್ನು ತೋರಿಸುತ್ತದೆ ಎಂದು ಎಂ.ವಿ.ಗೋವಿಂದನ್ ಮಾಸ್ಟರ್, ಸಿಪಿಐ(ಎಂ)ನ ಕೇರಳ ರಾಜ್ಯ ಕಾರ್ಯದರ್ಶಿ ಟಿಪ್ಪಣಿ ಮಾಡಿದ್ದಾರೆ.

'ಇಷ್ಟವನ್ನು ಹಿಂಪಡೆಯುವ' ಅಧಿಕಾರ ರಾಜ್ಯಪಾಲರಿಗೆ ಇಲ್ಲ. ಅವರು ಮುಖ್ಯಮಂತ್ರಿಗಳ ಸಲಹೆಯ ಮೇರೆಗೆ ಮಾತ್ರ ಸಚಿವರನ್ನು ನೇಮಿಸಬಹುದು ಮತ್ತು ತೆಗೆದುಹಾಕಬಹುದು ಎಂದು ನೆನಪಿಸಿರುವ ಅವರು ರಾಜ್ಯಪಾಲರ ಪಿಆರ್‌ಒ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಟಿಪ್ಪಣಿ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸವಾಲು ಹಾಕುತ್ತಿದೆ ಎಂದು ಟೀಕಿಸಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಕೇರಳದ ರಾಜ್ಯಪಾಲರಿಗೆ ನೆನಪಿಲ್ಲದಿರುವುದು ಅಚ್ಚರಿ ಮೂಡಿಸಿದೆ. ಅವರ ಇತ್ತೀಚಿನ ಹಸ್ತಕ್ಷೇಪವನ್ನು ಜನರು, ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಭಾರತೀಯ ಸಂವಿಧಾನದ ಮೂಲಭೂತ ತತ್ವಗಳ ಮೇಲಿನ ಆಕ್ರಮಣವಾಗಿ ಮಾತ್ರ ನೋಡಬಹುದಾಗಿದೆ ಎಂದು ಅವರು ಹೇಳಿದ್ದಾರೆ.

"ರಾಜ್ಯಪಾಲರು ಪ್ರಜಾಪ್ರಭುತ್ವಕ್ಕೆ ಕಳಂಕ ತರುವ ಇಂತಹ ಪ್ರಯತ್ನಗಳಿಂದ ಹಿಂದೆ ಸರಿಯಬೇಕು. ನೀವು ಸಂವಿಧಾನದ 163, 164 ನೇ ವಿಧಿಗಳು ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳನ್ನು ಓದಬೇಕೆಂದು ವಿನಂತಿಸುತ್ತೇವೆ. ಸಹಿ ಹಾಕದೆ ವಿಧಾನಸಭೆ ಅಂಗೀಕರಿಸಿದ ವಿಧೇಯಕಗಳನ್ನು ತಡೆಹಿಡಿಯುತ್ತಿರುವುದು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಅನಗತ್ಯ ಹಸ್ತಕ್ಷೇಪ ಮಾಡುತ್ತಿರುವುದು ಘನತೆಯೇ ಎಂಬುದನ್ನು ರಾಜ್ಯಪಾಲರು ಸ್ಪಷ್ಟಪಡಿಸಬೇಕು. ಮಂತ್ರಿಗಳು ರಾಜ್ಯದ ಜನರಿಂದ ಚುನಾಯಿತರಾಗುತ್ತಾರೆ, ಅವರು ಜನರಿಗೆ ಜವಾಬ್ದಾರರು, ವಸಾಹತುಶಾಹಿ ಕಾಲದ ಪಳೆಯುಳಿಕೆಗಳಾದ ಹುದ್ದೆಗಳಿಗೆ ಅಲ್ಲ ಎಂದು ಅವರಿಗೆ ಮತ್ತೊಮ್ಮೆ ನೆನಪಿಸಬೇಕಾಗುತ್ತದೆ" ಎನ್ನುತ್ತ ಗೋವಿಂದನ್ ಮಾಸ್ಟರ್ ಟ್ವೀಟ್ ಹಿಂಪಡೆಯಲು ಕ್ರಮ ಕೈಗೊಳ್ಳಬೇಕು ಎಂದು ಅವರಿಗೆ ಮನವಿ ಮಾಡಿದ್ದಾರೆ.

# ಹೆಚ್ಚುತ್ತಿರುವ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದ ಎಂಎಸ್‌ಪಿ ಪ್ರಕಟಣೆ: ರೈತರಿಗೆ ಮತ್ತೊಮ್ಮೆ ಮೋದಿ ಸರಕಾರದ ದ್ರೋಹ– ಎಐಕೆಎಸ್ ಖಂಡನೆ

2022–23ರ ಹಿಂಗಾರು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ)ಗಳನ್ನು ಪ್ರಕಟಿಸಿದ್ದು ಈ ಬಾರಿಯೂ ಮೋದಿ ಸರಕಾರ ಮತ್ತೊಮ್ಮೆ ತನ್ನ ಪಕ್ಕಾ ರೈತ ವಿರೋಧಿ ಧೋರಣೆಯನ್ನು ಪ್ರದರ್ಶಿಸಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕಟುವಾಗಿ ಟೀಕಿಸಿದೆ. ಸರ್ಕಾರ ಘೋಷಿಸಿದ ಬೆಲೆಗಳು ತುಂಬಾ ಕಡಿಮೆ ಮತ್ತು ಸ್ವಾಮಿನಾಥನ್ ಆಯೋಗವು ಶಿಫಾರಸು ಮಾಡಿದಂತೆ 'ಸಿ2' ವೆಚ್ಚದ ಮೇಲೆ ರೈತರಿಗೆ 50% ಪ್ರತಿಫಲವನ್ನು ಖಂಡಿತಾ ಒದಗಿಸುವುದಿಲ್ಲ. ಎಂಎಸ್‌ಪಿಯಲ್ಲಿ ಹೆಚ್ಚಳ ಮಾಡಲಾಗಿದೆ ಎಂದು ಹೇಳಿಕೊಂಡರೂ ಈ ಹೆಚ್ಚಳ ಎಂಬುದು ಹೆಚ್ಚುತ್ತಿರುವ ಕೃಷಿ ವೆಚ್ಚವನ್ನು ಸರಿದೂಗಿಸಲು ಅಥವಾ ರೈತರು ಖರೀದಿಸಬೇಕಾದ ಬಳಕೆಯ ವಸ್ತುಗಳ ಬೆಲೆಗಳಲ್ಲಿನ ಹಣದುಬ್ಬರವನ್ನು ಸರಿದೂಗಿಸಲು ತುಂಬಾ ಕಡಿಮೆಯಾಗಿದೆ ಎಂದು ಎಐಕೆಎಸ್ ಹೇಳಿದೆ.

ಗೋಧಿಯ ಎಂಎಸ್‌ಪಿಯನ್ನು ಕೇವಲ ಶೇ.5.5ರಷ್ಟು ಮತ್ತು ಕಡಲೆಗೆ ಕೇವಲ ಶೇ.2ರಷ್ಟು ಹೆಚ್ಚಿಸಲಾಗಿದೆ. ಆದರೆ 2022 ರ ಹಿಚ್ಚಿನ ತಿಂಗಳುಗಳಲ್ಲಿ ಆಹಾರದ ಗ್ರಾಹಕ ಬೆಲೆಗಳಲ್ಲಿನ ಹಣದುಬ್ಬರವು ಶೇಕಡಾ 7 ಕ್ಕಿಂತ ಹೆಚ್ಚಾಗಿದೆ ಎಂದು ಎಐಕೆಎಸ್ ನೆನಪಿಸಿದೆ..

ಕಳೆದ ಒಂದು ವರ್ಷದಲ್ಲಿ ಪುಟ 14 ಕ್ಕೆ

ಸಂಪಾದಕೀಯ

# ಜನರ ಸಂಕಲ್ಪ ಏನಾಗಬೇಕು?

ರಾಜಕೀಯ ಪಕ್ಷಗಳ ಚಟುವಟಿಕೆಗಳು ಚುರುಕುಗೊಂಡಿರುವ ಕರ್ನಾಟಕದಲ್ಲೀಗ ಚುನಾವಣೆ ಸಿದ್ಧತೆಯ ತುರುಸು ಎಲ್ಲೆಲ್ಲೂ ಕಾಣುತ್ತಿದೆ. ವಿಶೇಷವಾಗಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ನಡುವಿನ ಪೈಪೋಟಿ ಪಕ್ಷದ ನೀತಿ, ನಿಲುವುಗಳನ್ನು ಮೀರುತ್ತಾ ವ್ಯಕ್ತಿಗತ ದೂಷಣೆಯ ಸ್ವರೂಪ ಪಡೆಯುತ್ತಿದೆ. ಇಂತಹ ಪರಸ್ಪರ ದೋಷಾರೋಪಗಳು ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿಗಳು ಶೆಡ್ಡು ಹೊಡೆಯುವುದರಲ್ಲಿ, ದಮ್ಮಿದ್ದರೆ, ತಾಕತ್ತಿದ್ದರೆ ನೋಡು' ಎನ್ನುವ ಮಟ್ಟಿಗೆ ರಾಜಕೀಯ ಭಾಷಾ ವೈಖರಿ ಸ್ಪರ್ಧೆ ತಲುಪಿದೆ. ಇದು ಪಕ್ಷಗಳು ತಲುಪುತ್ತಿರುವ ರಾಜಕೀಯ ನೈತಿಕದ ಅದಃಪತನವನ್ನು ತೋರಿಸುತ್ತದೆ.

ದಾವಣಗೆರೆಯಲ್ಲಿ ಸಿದ್ದರಾಮಯ್ಯನವರ ಹುಟ್ಟು ಹಬ್ಬದ ಸಮಾವೇಶದಲ್ಲಿ ದೊರೆತ ಜನಸ್ಪಂದನ ಜನತೆ ಬಜೆಪಿಯಿಂದ ದೂರ ಸರಿಯುತ್ತಿರುವ ಸೂಚನೆ ಅರಿತ ಬಳಿಕ ಪ್ರತಿ ಹಂತದಲ್ಲಿಯೂ ಬಿಜೆಪಿ ಕಂಪನಕ್ಕೆ ಒಳಗಾದಂತೆ ಕಾಣುತ್ತದೆ. ಮುಖ್ಯವಾಗಿ, ಮೋದಿ ಸರ್ಕಾರದ ಸಂಪೂರ್ಣ ವೈಫಲ್ಯ, ಪ್ರಮುಖವಾಗಿ ಬೆಲೆ ಏರಿಕೆಯ ಬರೆ, ನಿರುದ್ಯೋಗ ಹೆಚ್ಚಳ ಮತ್ತು ಆರ್ಥಿಕ ದಿವಾಳಿತನ ಅಲ್ಲದೆ ರಾಜ್ಯದ ಸಂಕಷ್ಟಗಳಿಗೆ ಕಿವಿಗೊಡದ ನಿರ್ಲಕ್ಷ್ಯ ಹಾಗೂ ಸಂಪನ್ಮೂಲಗಳ ಲೂಟಿ, ಜನತೆಯನ್ನು ಸಂಕಷ್ಟಗಳ ಕುದಿಯಲ್ಲಿಟ್ಟಿರುವುದು ಮತ್ತು ರಾಜ್ಯದಲ್ಲಿನ ಆರ್. ಎಸ್. ಎಸ್. ನಿಯಂತ್ರಿತ ಬೊಮ್ಮಾಯಿ ಸರಕಾರದ ಭ್ರಷ್ಟ, ಜನ ಪೀಡಕ ಆಡಳಿತ ಒಂದೆಡೆ ಮತ್ತು ನೆರೆಹಾವಳಿ ತಂದ ಅಪಾರ ಪ್ರಮಾಣದ ಜನ–ಜಾನುವಾರುಗಳ ಹಾನಿಗಳಿಗೆ ಸ್ಪಂದಿಸದೆ ಕೇವಲ ಮಾತುಗಳ ಮಂಟಪ ಸೃಷ್ಟಿ ಮತ್ತು ಹುಸಿ ಭರವಸೆಗಳ ಮಹಾಪೂರ ಹರಿಸುತ್ತಾ ತಿರುಗುತ್ತಿರುವುದು ಜನತೆಯಲ್ಲಿ ಮತ್ತಷ್ಟು ಅತೃಪ್ತಿಯನ್ನು ಹೆಚ್ಚಿಸುತ್ತಿದೆ.

ದಾವಣಗೆರೆ ಸಮಾವೇಶದ ಬಳಿಕ ರಾಹುಲ್ ಪಾದಯಾತ್ರೆಗೆ ರಾಜ್ಯದಲ್ಲಿ ದೊರೆತ ಸ್ಪಂದನ, ಬಳ್ಳಾರಿಯಲ್ಲಿ ನಡೆದ ಅಭೂತಪೂರ್ವ ರ್‍ಯಾಲಿ ಇವುಗಳು ಬಿಜೆಪಿಯನ್ನು ವಿಚಲಿತಗೊಳಿಸಿದಂತೆ ಕಾಣುತ್ತಿದೆ. ಹೀಗಾಗಿ ಈ 'ಕ್ರಿಯೆಗೆ ಪ್ರತಿಕ್ರಿಯೆ' ಕೊಡುವ ಬೊಮ್ಮಾಯಿ ಅವರ ಸಂಕಲ್ಪದಂತೆ ಯಾತ್ರೆ ಮತ್ತು ಜಾತ್ರೆ ಗಳಿಗೆ ಬಿಜೆಪಿ ನಾಯಕರು ಇಳಿದಿರುವುದು ಸ್ಪಷ್ಟ ಬಿಜೆಪಿಯ ಈ ಹತಾಶ ಭಾವನೆಗಳ ಕಾರಣದಿಂದಲೇ ಮುಖ್ಯಮಂತ್ರಿ ಅವರನ್ನು ಒಳಗೊಂಡು ಬಿಜೆಪಿಯ ಎಲ್ಲಾ ಹಂತಗಳ ನಾಯಕರು ಸಾರ್ವಜನಿಕವಾಗಿ ಆಡುವ ಮಾತುಗಳು, ದೂಷಣೆಗಳು ಹತಾಶೆ ರಾಜಕಾರಣದ ಚೌಕಟ್ಟನ್ನು ನೀಡುತ್ತಿವೆ. ಮುಖ್ಯವಾಗಿ, ಬಿಜೆಪಿ ಬಯಸಿದಂತೆ ಜನತೆಯ ಸ್ಪಂದನ ಇಲ್ಲದಿರುವುದು ಮತ್ತು ಮುಂಬರುವ ಚುನಾವಣೆಯಲ್ಲಿ ಅದು ಹೇಳುವಂತೆ 150 ಸ್ಥಾನಗಳನ್ನು ತಲುಪಲು ಅಸಾಧ್ಯವಾಗಿ 70 ಸ್ಥಾನಗಳ ಗಳಿಕೆಗೂ ಪ್ರಯಾಸ ಪಡಬೇಕಾದ ಸ್ಥಿತಿಯ ಬಗ್ಗೆ ಬಿಜೆಪಿ ಹೈಕಮಾಂಡ್ ನೀಡಿದ ಎಚ್ಚರಿಕೆ ಇದೆಲ್ಲವೂ ಬಿಜೆಪಿ ಮತ್ತಷ್ಟು ಅಕ್ರಮಣ ಕಾರಿಯಾಗಲು ಪ್ರೇರೇಪಿಸಿದಂತಿದೆ. ರಾಜ್ಯದಲ್ಲಿ ವ್ಯಾಪಕ ಕೋಮು ವಿಭಜನೆಯ ಹಿಂಸಾತ್ಮಕ ದುರಾಕ್ರಮಣಗಳನ್ನು ನಡೆಸುವುದರ ಮೂಲಕ ಬಾರಿ ಬಹುಮತವನ್ನು ಪಡೆಯಬಹುದು ಎನ್ನುವ ರಾಜ್ಯದ ಬಿಜೆಪಿ ಮತ್ತು ಆರ್ ಎಸ್ ಎಸ್ ನ ಲೆಕ್ಕಚಾರಕ್ಕೆ ಸ್ವತಃ ಅಮಿತ್ ಶಾ ರವರೇ ಬ್ರೇಕ್ ಹಾಕಿದ್ದು ಕೂಡ ನೆನಪಿಸಿಕೊಳ್ಳಬೇಕು. ಹೀಗಾಗಿ ಅಧಿಕಾರಕ್ಕೆ ಬರುವಂತಾಗಲು ರೂಪಿಸುವ ಕಾರ್ಯ ತಂತ್ರಗಳನ್ನು ಸ್ವತಃ ಗೃಹ ಸಚಿವ ಅಮಿತ್ ಶಾ ರವರೇ ಸಿದ್ಧಪಡಿಸುವುದು ಮಾತ್ರವಲ್ಲ ತಾವೇ ಅದರ ಜಾರಿಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾರೆ.

ಬಿಜೆಪಿ ಕೇಂದ್ರ ಮತ್ತು ರಾಜ್ಯ ನಾಯಕರ ಸತತ ಪ್ರಯತ್ನದ ಹೊರತಾಗಿಯೂ ಅದರ ಜನಪ್ರಿಯತೆ ಹೆಚ್ಚಿಲ್ಲ. ತನಗೆ ಎದುರಾಗುವ ಅಕ್ರಮಣಕಾರಿ ರಾಜಕೀಯ ನಡೆಯಿಂದ ಆಗುವ ಮತ್ತಷ್ಟು ರಾಜಕೀಯ ಹಾನಿಯನ್ನು ತಡೆಯಲು ಹಾಗೂ ಕಳೆದು ಹೋದದ್ದನ್ನು ಮತ್ತೆ ತುಂಬಿಕೊಳ್ಳಲು ದೊಡ್ಡಬಳ್ಳಾಪುರದಲ್ಲಿ ಜನ ಸ್ಪಂದನ ಸಮಾವೇಶವನ್ನು ಸಂಘಟಿಸಿದ್ದು. ಬಳಿಕ ಕಾಂಗ್ರೆಸ್ ಪಾದಯಾತ್ರೆಗೆ ಎದುರಾಗಿ ಜನ ಸಂಕಲ್ಪ ಯಾತ್ರೆ ಈಗ ನಡೆಸುತ್ತಿದೆ. ಈ ಯಾತ್ರೆಯಲ್ಲಿ ಸರಕಾರದ ಡಬಲ್ ಎಂಜಿನ್ ಗಳಾದ ಬ.ಬೊಮ್ಮಾಯಿ ಮತ್ತು ಬಿ.ಎಸ್. ಯಡಿಯೂರಪ್ಪನಂತಹ ನಾಯಕರು ಭಾಗವಹಿಸಿ ಜನತೆಗೆ ಹುಮ್ಮಸ್ಸು ತುಂಬಲು ಯತ್ನಿಸುತ್ತಿದ್ದಾರೆ. ಜನಸಂಕಲ್ಪ ಯಾತ್ರೆ ಎಂದರು ಯಾತ್ರೆ ಮಾಡುತ್ತಿರುವುದು ನಾಯಕರು ಎನ್ನುವುದು ಒಂದು ರಾಜಕೀಯ ವ್ಯಂಗ್ಯವೇ ಸರಿ. ಇಲ್ಲೆಲ್ಲಾ ಬಿಜೆಪಿ ಸರ್ಕಾರದ ಸಾಧನೆಗಳು, ಬಜೆಟ್ ನಲ್ಲಿ ಮಾಡಲಾದ ಹಣದ ಹಂಚಿಕೆ, ಮತ್ತಷ್ಟು ಹಂಚಿಕೆ ಮತ್ತು ಕಾಂಗ್ರೆಸ್ ಪಕ್ಷದ ವಿರುದ್ಧದ ಟೀಕೆಗಳು, ಇದುವರೆಗೂ ತಾವು ಮಾಡಿದ ಎಲ್ಲವಕ್ಕೂ ಅಂಗೀಕಾರ ನೀಡುವಂತೆ, ಬಿಜೆಪಿ ಪಕ್ಷಕ್ಕೆ 150 ಸ್ಥಾನ ನೀಡುವಂತೆ ಗೆಲ್ಲಿಸಲು ಮನವಿ ಮಾಡುವುದು ಜನ ಸಂಕಲ್ಪ ಯಾತ್ರೆ ಹೇಗಾಗುತ್ತದೆ ಎನ್ನುವುದನ್ನು ಬಿಜೆಪಿ ನಾಯಕರು ವಿವರಿಸಬೇಕು.

ಜನ ಈ ವರ್ಷ ತೀವ್ರ ಅತಿವೃಷ್ಟಿಯಿಂದ ಮನೆ, ಹೊಲ, ಬೆಳೆಗಳನ್ನು ಕಳೆದುಕೊಂಡು ಬೀದಿ ಭಿಕಾರಿಗಳಂತಾಗಿ ಬದುಕು ಮೂರಾಬಟ್ಟೆಯಾಗಿದೆ .ಇಲ್ಲಿಯವರೆಗೂ ಸರಕಾರ ಹೇಳುತ್ತಿರುವ ಯಾವ ಸಹಾಯ, ಪರಿಹಾರ ಜನರಿಗೆ ತಲುಪಲಿಲ್ಲ. ಸಂತ್ರಸ್ತ ಜನರನ್ನು ನಡುವೆ ನೀರಿನಲ್ಲಿಯೇ ಈ ಸರ್ಕಾರ ಕೈ ಬಿಟ್ಟಿದೆ. ಈಗಲೂ ಅತಿ ಘೋರಸ್ಥಿತಿ ಮುಂದುವರೆದಿದೆ. ವಿಚಿತ್ರವೆಂದರೆ, ಕಳೆದ ವರ್ಷಗಳಲ್ಲಾದ ಹಾನಿಗೂ ಪರಿಹಾರ ಸಿಕ್ಕಿಲ್ಲ. ಮಾತ್ರವಲ್ಲ, ಹಲವು ವರ್ಷಗಳ ಹಿಂದಿನ ಹಾನಿಗೂ ಸರ್ಕಾರ ಪ್ರಕಟಿಸಿದ ಯಾವ ಪರಿಹಾರವೂ ದೊರೆತಿಲ್ಲ. ಇಂತಹ ಸ್ಥಿತಿಯಲ್ಲಿ ಜನ ಹೇಗೆ ಬದುಕಬೇಕು ಎನ್ನುವ ಚಿಂತೆ ಸರ್ಕಾರಕ್ಕೆ ಇಲ್ಲ. ಬದಲಿಯಾಗಿ ತನ್ನ ಸಾಧನೆಗಳ ಡಾಣಾ ಡಂಗುರಕ್ಕೆ ಸರ್ಕಾರ ಇಳಿದಿದೆ. ಹೆಚ್ಚಿದ ಕೃಷಿ ಬಿಕಟ್ಟು, ಸಾಲದ ಬಾಧೆ ದುಬಾರಿಯಾದ ಶಿಕ್ಷಣ, ಸಿಗದ ಉದ್ಯೋಗ, ಹೆಚ್ಚಿದ ನಿರುದ್ಯೋಗ, ಸರ್ಕಾರದ ಎಲ್ಲಾ ಹಂತಗಳಲ್ಲಿ ವ್ಯಾಪಕಗೊಂಡ ಭ್ರಷ್ಟಾಚಾರ, ಸಾರ್ವಜನಿಕ ಸಂಪತ್ತಿನ ಲೂಟಿ ಶೇಕಡ 40ರ ಕಮಿಷನ್ ವ್ಯವಹಾರ ಮುಂತಾದ ಪ್ರಶ್ನೆಗಳಿಗೆ ಸರ್ಕಾರ ಸ್ಪಂದನವೇ ಇಲ್ಲವಾಗಿದೆ. ತಮ್ಮ ಆಡಳಿತವನ್ನು ಜನ ಮೆಚ್ಚಿಕೊಂಡು 150 ಸ್ಥಾನ ನೀಡಲು ನಿರ್ಧರಿಸಿ ಬಿಟ್ಟಿದ್ದಾರೆ ಎಂದು ಎಲ್ಲಾ ಕಡೆ ಬೊಮ್ಮಾಯಿಯವರು ಹೇಳುತ್ತಿರುವುದು ಅವರ ಭ್ರಮೆ ಅಷ್ಟೇ. ಮರಳು ಮಾತಿಗೆ ಜಾತಿ ಮತ್ತು ಹಣದ ಆಮಿಷಗಳಿಗೆ ಜನರು ಅತಿ ಸುಲಭವಾಗಿ ಮರುಳಾಗುತ್ತಾರೆ ಎನ್ನುವ ದಾರ್ಷ್ಟ್ಯ ಬಿಜೆಪಿ ನಾಯಕರಿಗೆ ಇದ್ದಂತಿದೆ. ಇಂಥವರಿಗೆ ಜನ ತಕ್ಕ ಪಾಠ ಕಲಿಸುವ ಸಂಕಲ್ಪ ಮಾಡಬಾರದೇ?

# ಸಂಕಷ್ಟದಲ್ಲಿರುವ ಕಾಂಗ್ರೆಸ್ಸಿಗೀಗ ಖರ್ಗೆಯವರ ಸಾರಥ್ಯ

ಈ ವಾರ

**ಎಸ್.ವೈ. ಗುರುಶಾಂತ್**

ಮಲ್ಲಿಕಾರ್ಜುನ ಖರ್ಗೆ ಯವರು ಕಾಂಗ್ರೆಸ್ ನ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಅವರು ಕರ್ನಾಟಕದಿಂದ ಆಯ್ಕೆಯಾದ ಎರಡನೆಯವರು ಎನ್ನುವುದು ಒಂದು ಅಭಿನಂದನೆಯ ಅಂಶ. ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದುದು ಅನಿರೀಕ್ಷಿತವೇನಲ್ಲ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಇತ್ತಾದರೂ ಚಕಿತಗೊಳಿಸುವ ಬದಲಾವಣೆಗಳು ಕಾಂಗ್ರೆಸ್ ಪಕ್ಷದಲ್ಲಿ ನಡೆಯಲಿದೆ ಎಂದು ಯಾರೂ ಭಾವಿಸಿರಲಿಲ್ಲ. ಕಾಂಗ್ರೆಸ್ ನಲ್ಲಿ ಬದಲಾವಣೆಯ ಕೂಗು ಕೇಳಿ ಬಂದದ್ದು ನಿಜ. ಈ ಚುನಾವಣೆಗೂ ಹಿಂದೆಯೇ ಜಿ 23 ನಾಯಕರು ಪಕ್ಷದಲ್ಲಿ ಬರಬೇಕಾದ ಬದಲಾವಣೆಗಳ ಬಗ್ಗೆ ದನಿಯನ್ನು ಎತ್ತಿದ್ದರು. ಹಾಗೆ ಹೇಳುತ್ತಲೇ ಗುಲಾಂನಬಿ ಅಜಾದ್ ರಂತಹ ಒಂದಿಷ್ಟು ನಾಯಕರು ಪಕ್ಷ ಬಿಟ್ಟು ಹೊರ ನಡೆದು ಸುರಕ್ಷಿತ ಜಾಗಗಳನ್ನು ಹುಡುಕುತ್ತಿದ್ದರು. ಹಾಗೆ ಹುಡುಕುವ ಹಿರಿಯ ನಾಯಕರ ದಂಡೇ ಅಲ್ಲಿದೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ದಿಸಿದ್ದ ಶಶಿ ತರೂರು ಕಾಂಗ್ರೆಸ್ ನಲ್ಲಿ ಹೊಸತನ್ನು ಒಳಗೊಳಿಸುವ ಹಲವು ಸೂಚನೆಗಳ ಕಲ್ಪನೆಯನ್ನು ತಮ್ಮ ಪ್ರಚಾರ ಸಂದರ್ಭದಲ್ಲಿ ಮಂಡಿಸಿದ್ದರು. ಖರ್ಗೆಯವರು ಅಂತಹ ಮಾತುಗಳನ್ನೇನೂ ಆಡಿರಲಿಲ್ಲ. ಅವರಾಡಿದ ಮಾತುಗಳಲ್ಲಿ ಯಥಾ ಸ್ಥಿತಿಯ ಆದರೆ ಪಕ್ಷದ ಘನತೆಯನ್ನು, ಸೆಕ್ಯುಲರ್ ಮೌಲ್ಯಗಳನ್ನು ಎತ್ತಿ ಹಿಡಿಯುವ ಮಾತುಗಳಿದ್ದವು.

ಕಾಂಗ್ರೆಸ್ ನ 137 ವರ್ಷಗಳ ಇತಿಹಾಸದಲ್ಲಿ ಸ್ವಾತಂತ್ರ್ಯದ ನಂತರ ಒಟ್ಟು 6 ಬಾರಿ ಮಾತ್ರ ಎ.ಐ.ಸಿ.ಸಿ.ಯ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗಳು ನಡೆದಿವೆ ಎನ್ನುವುದೇ ಹಲವು ವಿಶೇಷ ಸಂಗತಿಗಳನ್ನು ಹೇಳುತ್ತದೆ. ಉಳಿದಂತೆ ಒಮ್ಮತದ ಆಯ್ಕೆ ಎನ್ನುವಾಗ ಬಹುತೇಕ ಆರೋಪಿಸಲಾದಂತೆ ಅದು ನೆಹರೂ ಕುಟುಂಬವೇ ನಿರ್ಧಾರಕ. ಇಲ್ಲವೇ ಅವರು ಬಯಸಿದವರ ಆಯ್ಕೆ! ನೆಹರೂ ಕುಟುಂಬದ ಆಚೆ ಆದ ಕೆಲ ಆಯ್ಕೆಗಳೂ ಮಧ್ಯಂತರ ವ್ಯವಸ್ಥೆಯಂತೆ ಇರುವುದೂ ಅಂತಹ ಅನಿಸಿಕೆಗೆ ಇರುವ ಒಂದು ಅಂಶ. ಇದರಲ್ಲಿ ಅಧಿಕಾರದ ಸೂತ್ರ 'ಗಾಂಧಿ'ಗಳ ಕೈಯ್ಯಲ್ಲೇ ಇರಬೇಕು ಎನ್ನುವುದು ಇರುವಂತೆ, ಈ ಕುಟುಂಬದವರು ಸೂತ್ರ ವಹಿಸಿಕೊಳ್ಳದಿದ್ದರೆ ಕಾಂಗ್ರೆಸ್ ಉಳಿಯುವುದಿಲ್ಲ, ಮೇಲೇಳುವುದಿಲ್ಲ ಎನ್ನುವ ಹತಾಶ ಸ್ಥಿತಿಯೂ, ನಾಯಕರ ದೀನತೆಯೂ ಕಾರಣವಿದೆ.



ಹಿರಿಯ ನಾಯಕ ಖರ್ಗೆಯವರ ಆಯ್ಕೆಯಲ್ಲಿ ಹಲವು ಮಹತ್ವದ ಅಂಶಗಳೂ ಇವೆ. ಅವರು ಕಾಂಗ್ರೆಸ್ ನ ಕಷ್ಟ ಕಾಲದಲ್ಲಿ ಚುಕ್ಕಾಣಿ ಹಿಡಿದಿದ್ದಾರೆ. ಸದಾ ಪಕ್ಷದ ನಾಯಕತ್ವಕ್ಕೆ ನಿಷ್ಠವಾಗಿ ಇದ್ದೇ ಬಂದವರು. ಮುಖ್ಯಮಂತ್ರಿಯ ಅಭ್ಯರ್ಥಿತನದ ಪ್ರಶ್ನೆ ಬಂದಾಗಲೂ ಹೈಕಮಾಂಡ್ ನಾಯಕತ್ವದ ನಿರ್ದೇಶನಕ್ಕೆ ಬದ್ಧವಾದವರು. ಮೇಲಾಗಿ ಸಾಮಾಜಿಕ ನ್ಯಾಯ, ಸೆಕ್ಯುಲರ್ ಮೌಲ್ಯಗಳ ಪ್ರತಿಪಾದಕರು. ಕಾಂಗ್ರೆಸ್ ಮತ್ತದರ ನಾಯಕರಾದ ಇಂದಿರಾ, ಸೋನಿಯಾ ರಂತಹವರು ಸ್ವತಃ ಕಾಂಗ್ರೆಸ್ ಪಕ್ಷವೇ ಕಷ್ಟದಲ್ಲಿರುವಾಗ ಕೈಹಿಡಿದಿರುವುದು ಕರ್ನಾಟಕ. ರಾಹುಲಗಾಂಧಿಗೂ ದಕ್ಷಿಣ ಭಾರತದ ಕೇರಳ– ಹೀಗೆ ದಕ್ಷಿಣ ಭಾರತ ಅದಕ್ಕೆ ಆಸರೆ ನೀಡಿದೆ. ಹೀಗಿರುವಾಗ ಕಾಂಗ್ರೆಸ್ ನ ಉನ್ನತ ನಾಯಕರ ಗಮನ ಇತ್ತ ಹೊರಳಿದ್ದು ಸಹಜವೂ ಇರಬಹುದು.

ಈ ಬಾರಿ ಎ.ಐ.ಸಿ.ಸಿ. ಅಧ್ಯಕ್ಷತೆಯ ಆಯ್ಕೆಗೂ ಹಲವು ತಿರುವುಗಳಿವೆ. ರಾಜಸ್ಥಾನದ ಮುಖ್ಯಮಂತ್ರಿ ಆಶೋಕ್ ಗೆಹ್ಲೋಟ್ ಸ್ಪರ್ದೆಯ ಸೂಚನೆಗೆ ಬಂದ ಬಂಡಾಯದ ಟ್ವಿಸ್ಟ್ ಖರ್ಗೆಯವರ ಸ್ಪರ್ದೆಗೆ ಕ್ಷಿಪ್ರ ತಿರುವಿನ ಹಿನ್ನೆಲೆ ಒದಗಿಸಿತು. ಈಗಿನ ಪ್ರಶ್ನೆ ಎಂದರೆ ಖರ್ಗೆಯವರು ಸೋನಿಯಾರವರ ಬೆಂಬಲಿತ ಅಭ್ಯರ್ಥಿ ಎನ್ನುವುದು, ಬಂಡಾಯವೇಳದ, ತಾವೇನಿದ್ದರೂ ಹೈಕಮಾಂಡ್ ಹೇಳಿದಂತೆ ಕೇಳುವವರು ಎನ್ನುವ ಅವರ ಮನೋಭಾವ ಖರ್ಗೆಯವರಿಗೆ ಒಂದು ಸ್ವತಂತ್ರ ಇಮೇಜನ್ನು ತಂದು ಕೊಡುವುದೇ? ಆಗಲೇ ನಾಮಪತ್ರ ಸಲ್ಲಿಸಿದ್ದ, ಹೊಸ ಬದಲಾವಣೆಗೆ ಮತ ಕೇಳುತ್ತಿದ್ದ ತರೂರವರನ್ನು ಬೆಂಬಲಿಸದೇ ಖರ್ಗೆಯವರನ್ನು ಸೋನಿಯಾ ಬಣ ಇಳಿಸಿದುದರ ಇಂಗಿತವೇನು? ಭಾರತದ ಸಂಕೀರ್ಣ ರಾಜಕೀಯ ಸಂದರ್ಭದಲ್ಲಿ ಯಥಾಗತಿ ಮನಸ್ಥಿತಿಯ ಕಾಂಗ್ರೆಸ್ ನ ಭವಿಷ್ಯವೇ ಮಂಕಾಗುತ್ತಿರುವಾಗ ಬದಲಾವಣೆಯ ಕುರಿತ ಅಸ್ಪಷ್ಟತೆ, ಕಾಂಗ್ರೆಸ್ಸಿನ ಹಡಗನ್ನು ತೇಲಿಸಬಲ್ಲುದೇ? ಹೀಗಿರುವಾಗಲೂ ಅಧಿಕಾರದ ಆಸೆಗೆ ಬಿಜೆಪಿಯತ್ತ ವಲಸೆ ಹೋಗುವ ನಾಯಕರು ಇರುವಾಗ ಪಕ್ಷಕ್ಕೆ ಬದ್ಧವಾಗಿರುವ ಖರ್ಗೆಯವರ ಆಯ್ಕೆಯೂ ಕಾಂಗ್ರೆಸ್ ನ ಮಾನ ಹೆಚ್ಚಿಸಿದೆ. ತರೂರು ಒಂದು ಹಂತದಲ್ಲಿ ಮೋದಿಯವರ ಆಡಳಿತಕ್ಕೆ 'ಮನಸೋತಿದ್ದವರು'. ಹೀಗೆ ರಾಜಕಾರಣ ಮತ್ತು ಮೌಲ್ಯಗಳ ಹಲವು ಹೊಯ್ದಾಟ, ಅನುಭವಗಳ ಮಿತಿಗಳ ತರೂರ್ ಗಿಂತ ಖರ್ಗೆ ಆಯ್ಕೆ ಖಂಡಿತಕ್ಕೂ ಭಿನ್ನವಾಗಿದೆ.

ಈ ಸ್ಪರ್ದೆಯ ಅಂತಿಮ ಫಲಿತಾಂಶದಲ್ಲಿ 9,385 ಮತಗಳು ಚಲಾವಣೆಗೊಂಡಿದ್ದವು. ಇದರಲ್ಲಿ 415 ಮತಗಳನ್ನು ಅಮಾನ್ಯಗೊಳಿಸಲಾಗಿತ್ತು. ಈ ಪೈಕಿ 7,897 ಮತಗಳನ್ನು ಪಡೆದ ಮಲ್ಲಿಕಾರ್ಜುನ ಖರ್ಗೆ ಜಯಭೇರಿ ಭಾರಿಸಿದ್ದಾರೆ. ಪ್ರತಿಸ್ಪರ್ಧಿಯಾಗಿದ್ದ ಶಶಿ ತರೂರ್ 1,072 ಮತಗಳನ್ನು ಪಡೆದು ಸೋಲನ್ನು ಅನುಭವಿಸಿದ್ದಾರೆ.

ಇಬ್ಬರ ನಡುವೆ 6825 ಮತಗಳ ಭಾರೀ ಅಂತರವಿದೆ. ಹಾಗೆ ನೋಡಿದರೆ ಬದಲಾವಣೆಗೆ ಆಗ್ರಹಿಸುತ್ತಿದ್ದ ಜಿ23ರ ಹಲವು ನಾಯಕರು ಖರ್ಗೆಯವರ ಕ್ಯಾಂಪಿಗೆ ನಾಮಪತ್ರ ಸಲ್ಲಿಸುವ ಹೊತ್ತಿಗೇ ಬದಲಾಗಿದ್ದರು! ತರೂರವರಿಗೆ ಸುಮಾರು 700–750 ಮತಗಳು ಸಿಗಬಹುದೆಂಬ ಅಂದಾಜನ್ನು ಮೀರಿ 1072 ಮತಗಳು ಲಭಿಸಿದ್ದು ಆಶ್ಚರ್ಯ ಹಾಗೂ ಗಮನಾರ್ಹವೆಂದೇ ಹೇಳಲಾಗುತ್ತಿದೆ. ಅದೇನಿದ್ದರೂ ಇದೆಲ್ಲಾ ಕಾಂಗ್ರೆಸ್ ನ ಆಂತರಿಕ ವಿಷಯ ನಿಜ. ಆದರೆ ಆಂತರಿಕ ಪ್ರಜಾಪ್ರಭುತ್ವವನ್ನು ಅನುಭವಿಸಲು ಕಾಂಗ್ರೆಸ್ ಒಳಗೆ ಅವಕಾಶ ದೊರೆತುದು ಸ್ವಾಗತಾರ್ಹ. ಕುಸಿಯುವ ಸಮಯದಲ್ಲಿ ಕಾಂಗ್ರೆಸ್ ನ ನಾಯಕತ್ವವನ್ನು ಬೇರೆಯವರ ಅದರಲ್ಲೂ ದಲಿತರ ಕೊರಳಿಗೆ ಕಟ್ಟುವ ಜಾಯಮಾನ ಕಾಂಗ್ರೆಸ್ ನಲ್ಲಿದೆ ಎನ್ನುವ ಹಲವು ನಿದರ್ಶನಗಳ ಆರೋಪವನ್ನು ಸುಳ್ಳು ಮಾಡುವ ಹೊಣೆಯೂ ನೆಹರೂ ಕುಟುಂಬದ ಮೇಲಿದೆ. ಬದಲಾಗದೇ ಕಾಂಗ್ರೆಸ್ ಸ್ಥಿತಿಯೂ ಬದಲಾಗದು ಎನ್ನುವ ಯಥಾ ಸ್ಥಿತಿಯಿಂದ ಪುಟ 5 ಕ್ಕೆ

# ದೇಣಿಗೆ ಸಂಗ್ರಹ ಮೂಲಕ ಬಡವರನ್ನು ಶಿಕ್ಷಣದಿಂದ ವಂಚಿಸುವ ಹುನ್ನಾರ: ಸಿಪಿಐ(ಎಂ) ಆರೋಪ



ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ನಿರ್ವಹಣೆಗಳಿಗಾಗಿ ವಿದ್ಯಾರ್ಥಿಗಳ ಪೋಷಕರಿಂದ ಮಾಸಿಕ ಕೊಡುಗೆಯನ್ನು ಪಡೆಯುವ ಮತ್ತು ಆ ಮೂಲಕ ಬಡವರ ಹಾಗೂ ಮಹಿಳಾ ಶಿಕ್ಷಣಕ್ಕೆ ಕುತ್ತು ತರಲಿರುವ, ಸರಕಾರಿ ಸುತ್ತೋಲೆಯನ್ನು ಈ ಕೂಡಲೇ ಹಿಂಪಡೆಯಲು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಒತ್ತಾಯಿಸಿದೆ.

ಕರ್ನಾಟಕ ಸರಕಾರ, ಅಕ್ಟೋಬರ್ 19ರಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ಮೂಲಕ ಹೊರಡಿಸಲಾದ ಸುತ್ತೋಲೆ ಸಾರ್ವಜನಿಕ ಶಿಕ್ಷಣವನ್ನು ದುರ್ಬಲಗೊಳಿಸುವ ಹಾಗೂ ಆ ಮೂಲಕ ಬಡವರು, ದಲಿತರು ಹಾಗೂ ಮಹಿಳಾ ಶಿಕ್ಷಣವನ್ನು ನಿರಾಕರಿಸುವ ಮತ್ತು ಸಾರ್ವಜನಿಕ ಶಿಕ್ಷಣವನ್ನು ಕಳಚಿಹಾಕಿ ಖಾಸಗೀ ಶಿಕ್ಷಣವನ್ನು ಬಲಗೊಳಿಸುವ, ದುರುದ್ದೇಶದಿಂದ ಹೊರಡಿಸಿದ ಸುತ್ತೋಲೆಯಾಗಿದೆ. ತಕ್ಷಣವೇ ಸದರಿ ಸುತ್ತೋಲೆಯನ್ನು ವಾಪಾಸು ಪಡೆಯುವಂತೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು.ಬಸವರಾಜ ಅವರು, ಪತ್ರಿಕಾ ಹೇಳಿಕೆಯನ್ನು ನೀಡಿದ್ದು, ಸರಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಶೈಕ್ಷಣಿಕ ಸ್ಥಿತಿಗತಿಯನ್ನು ಉತ್ತಮಪಡಿಸಲು ಹಾಗೂ ಸೌಲಭ್ಯಗಳಿಂದ ಬಲಪಡಿಸಲು, ವಿದ್ಯಾರ್ಥಿಗಳ ಪೋಷಕರುಗಳಿಂದ ಮಾಸಿಕ ತಲಾ ರೂ.100 ಗಳ ಕೊಡುಗೆ ಅಥವಾ ದಾನಗಳನ್ನು ಸಂಗ್ರಹಿಸುವಂತೆ ಶಾಲಾ ಮೇಲುಸ್ತುವಾರಿಗಳಿಗೆ ಮತ್ತು ಆ ಮೂಲಕ ಅಪ್ರತ್ಯಕ್ಷವಾಗಿ ಶಾಲಾ ಶಿಕ್ಷಕ ಸಿಬ್ಬಂದಿ ವರ್ಗದವರಿಗೆ ಆದೇಶಿಸಲಾಗಿದೆ. ಈ ಕೊಡುಗೆಯನ್ನು ಮನವೊಲಿಸಿ ಪಡೆಯಬೇಕೇ ಹೊರತು ಬಲವಂತವಾಗಿಯಲ್ಲವೆಂದು ಸುತ್ತೋಲೆಯು ದಪ್ಪಕ್ಷರಗಳಲ್ಲಿ ಹೇಳಿದರೂ, ಪರಿಣಾಮ ಒಂದೇ ಆಗಿದೆ. ವಿದ್ಯಾರ್ಥಿಗಳ ಪೋಷಕರು ವಾರ್ಷಿಕ ಪ್ರತಿ ವರ್ಷ 1,000 ರೂ. ಗಳ ಕೊಡುಗೆ ನೀಡುವಂತೆ ಇದು ಒತ್ತಾಯಿಸುತ್ತದೆ ಎಂದಿದ್ದಾರೆ.

ಈ ಮೂಲಕ ಶಾಲೆ ಹಾಗೂ ಶೌಚಾಲಯಗಳ ಸ್ವಚ್ಛತೆ, ಕುಡಿಯುವ ನೀರು ಹಾಗೂ ವಿದ್ಯುತ್ ಬಿಲ್ ಪಾವತಿಸಲು ಮತ್ತು ಆಟದ ಮೈದಾನದ ಸುಧಾರಣೆ, ಗಣಕ ಯಂತ್ರಗಳ ರಿಪೇರಿ, ಬೋಧನೋಪಕರಣಗಳು, ಅಗತ್ಯವಾದ ಅತಿಥಿ ಶಿಕ್ಷಕರ ವೇತನಗಳು ಸೇರಿದಂತೆ, ಮೊದಲ ಹಾಗೂ ಎರಡನೇ ಆದ್ಯತೆಯಲ್ಲಿ ಪಟ್ಟಿ ಮಾಡಿದ ಸುಮಾರು 17 ಅಗತ್ಯಗಳಿಗಾಗಿ ಖರ್ಚು ಮಾಡಲು ಮೇಲುಸ್ತುವಾರಿ ಸಮಿತಿಗಳಿಗೆ ಸೂಚಿಸುತ್ತದೆ ಮತ್ತು ಸರಕಾರ ತನ್ನ ಜವಾಬ್ದಾರಿಗಳಿಂದ ನುಣುಚಿಕೊಳ್ಳುತ್ತದೆ ಕಾಣುತ್ತೇವೆ ಎಂದು ಸಿಪಿಐ(ಎಂ) ಪಕ್ಷವು ಆರೋಪಿಸಿದೆ.

ಒಂದೆಡೆ, ಈ ಸುತ್ತೋಲೆಯು ಸರಕಾರಿ ಪ್ರಾಥಮಿಕ ಹಾಗು ಪ್ರೌಢ ಶಾಲೆಗಳಲ್ಲಿ ಶೈಕ್ಷಣಿಕ ಕೆಲಸಗಳಿಗೆ ಪೂರಕವಾದ ಸೌಲಭ್ಯಗಳಿಲ್ಲವೆಂದು ಮತ್ತು ಅವುಗಳಿಗಾಗಿ ಸರಕಾರ ನೆರವು ನೀಡದೆಂಬ ಸಂದೇಶವನ್ನು ಸಾರ್ವಜನಿಕರಿಗೆ ರವಾನಿಸಿ ಮತ್ತು ಸೌಲಭ್ಯಗಳಿಲ್ಲದ ಶಾಲೆಗಳಿಗೆ ನಿಮ್ಮ ಮಕ್ಕಳನ್ನು ಯಾಕೆ ಸೇರಿಸುತ್ತೀರೆಂಬ ಪ್ರಶ್ನೆಯನ್ನು ಎಸೆಯುವ ಮೂಲಕ ಸಾರ್ವಜನಿಕ ಶಿಕ್ಷಣವನ್ನು ದುರ್ಬಲಗೊಳಿಸುವ ಹಾಗೂ ಶಿಕ್ಷಣ ಪಡೆಯಲೇ ಬೇಕೆಂಬುವವರನ್ನು ಖಾಸಗೀ ಶಿಕ್ಷಣ ಸಂಸ್ಥೆಗಳ ಕಡೆ ದೂಡುವ, ಜನ ಹಾಗೂ ಬಡವರ ವಿರೋಧಿ ಕೆಲಸವನ್ನು ಮಾಡುತ್ತದೆ.

ಇನ್ನೊಂದೆಡೆ, ಈ ಸುತ್ತೋಲೆಯು ಖಾಸಗೀ ಶಿಕ್ಷಣ ಸಂಸ್ಥೆಗಳು ಯಾವ ಯಾವ ವಿಷಯಗಳ ಮೇಲೆ ಹೊಸದಾಗಿ ಕೊಡುಗೆಗಳನ್ನು ಪಡೆಯಬಹುದೆಂಬುದನ್ನು ಅಪ್ರತ್ಯಕ್ಷವಾಗಿ ಹೇಳುತ್ತಾ ಖಾಸಗೀ ಶಿಕ್ಷಣಾರ್ಥಿಗಳ ಲೂಟಿಗೆ ನೆರವಾಗುತ್ತದೆ. ಸರಕಾರದ ಈ ಸುತ್ತೋಲೆಯು ಬಡವರು, ದಲಿತರು, ಮಹಿಳಾ ಶಿಕ್ಷಣಕ್ಕೆ ಪೂರಕವಾಗಿದ್ದ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಸೌಲಭ್ಯಗಳಿರುವುದಿಲ್ಲ ಮತ್ತು ಕನಿಷ್ಟ ಸೌಲಭ್ಯಗಳು ಬೇಕೆಂದರೂ ನೀವು ಕೊಡುಗೆ ನೀಡಬೇಕಾದದ್ದೆ ಎಂದು ಒತ್ತಾಯಿಸುತ್ತದೆ. ಇದು ಸಂವಿಧಾನ ಕೂಡ ಮಾಡಿದ 14 ವರ್ಷದ ವರೆಗಿನ ಉಚಿತ ಶಿಕ್ಷಣದ ಹಕ್ಕನ್ನು ನಗ್ನವಾಗಿ ಉಲ್ಲಂಘನೆ ಎಂದು ಸಿಪಿಐ(ಎಂ) ಪಕ್ಷವು ತಿಳಿಸಿದೆ.

ಇನ್ನು ಮುಂದೆಯೂ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ ಸಿಬ್ಬಂದಿಗಳನ್ನು, ಶಿಕ್ಷಕರನ್ನು ತುಂಬುವುದಿಲ್ಲ. ಮಾತ್ರವಲ್ಲಾ, ಹೊಸದಾಗಿ ಖಾಲಿಯಾಗುವ ಸಿಬ್ಬಂದಿಗಳ ಹುದ್ದೆಗಳನ್ನು ಸರಕಾರ ತುಂಬುವುದಿಲ್ಲ ಎಂಬ ಜನ ವಿರೋಧಿ ಸಂದೇಶವನ್ನು ಬಯಲುಗೊಳಿಸುತ್ತದೆಯಲ್ಲದೇ, ಮುಂದೆ ಸಿಬ್ಬಂದಿಗಳ ಕೊರತೆ ಎದುರಿಸುವಾಗ, ಮಾತ್ರವಲ್ಲಾ ಇತರೆ ಸೌಲಭ್ಯಗಳು ಬೇಕೆನ್ನುವಾಗ ನೀವುಗಳೇ ಕೊಡುಗೆ ನೀಡುವ ಮೂಲಕ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಿರೆಂದು ಹಾಗೂ ಇತರೆ ಸೌಲಭ್ಯಗಳನ್ನು ಪಡೆದುಕೊಳ್ಳಿರೆಂದು ಹೇಳುತ್ತದೆ. ಇದರಿಂದಾಗಿ, ಕೊಡುಗೆ ನೀಡಲಾಗದ ಸುಮಾರು 1.5 ಕೋಟಿಗೂ ಅಧಿಕ ಸಂಖ್ಯೆಯ ಬಿಪಿಎಲ್ ಹಾಗೂ ಅಂತ್ಯೋದಯ ಮತ್ತು ಎಪಿಎಲ್ ಕುಟುಂಬಗಳ ಮಕ್ಕಳಿಗೆ ಇನ್ನು ಮುಂದೆ ಶಿಕ್ಷಣವೆಂಬುದು ಮರೀಚಿಕೆಯಾಗಲಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಅವರು ತಿಳಿಸಿದ್ದಾರೆ.

ಕೇರಳದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಸರಕಾರ ಶಿಕ್ಷಣ ರಂಗದಲ್ಲಿ ಸಾರ್ವಜನಿಕ ಬಂಡವಾಳ ತೊಡಗಿಸುವಿಕೆಯನ್ನು ಹೆಚ್ಚಿಸುವ ಮೂಲಕ ಗುಣಮಟ್ಟದ ಶಿಕ್ಷಣ ಹಾಗೂ ಸೌಲಭ್ಯಗಳನ್ನು ಒದಗಿಸಿ ಖಾಸಗೀ ಶಿಕ್ಷಣ ಸಂಸ್ಥೆಗಳ ದಶಲಕ್ಷಾಂತರ ವಿದ್ಯಾರ್ಥಿಗಳು ಸರಕಾರಿ ಶಾಲೆಗಳಲ್ಲಿ ಪ್ರವೇಶ ಪಡೆಯುವಂತಹ ಪರಿಸ್ಥಿತಿಯನ್ನು ನಿರ್ಮಿಸಿದೆ. ಅದರೇ ರಾಜ್ಯದ ಬಿಜೆಪಿ ಸರಕಾರ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದು ತೀವ್ರ ಖಂಡನೀಯವಾಗಿದೆ.

ಈ ಕೂಡಲೇ, ಈ ಸಂವಿಧಾನ ವಿರೋಧಿ ಹಾಗೂ ಬಡವರ, ದಲಿತರ ಮತ್ತು ಮಹಿಳಾ ವಿರೋಧಿಯಾದ ಸುತ್ತೋಲೆಯನ್ನು ವಾಪಾಸು ಪಡೆಯಬೇಕು. ಅದೇ ರೀತಿ, ಸರಕಾರದ ಯಾವೊಂದು ಶಾಲೆಯು ಮುಚ್ಚದಂತೆ ಮತ್ತು ಪ್ರತಿಯೊಂದು ಶಾಲೆಯು ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಸೌಲಭ್ಯಗಳನ್ನು ಒದಗಿಸಲು, ಅಗತ್ಯ ಸಾರ್ವಜನಿಕ ಬಂಡವಾಳವನ್ನು ತೊಡಗಿಸುವಂತೆ ಸಿಪಿಐ(ಎಂ) ಮತ್ತೊಮ್ಮೆ ಬಲವಾಗಿ ಒತ್ತಾಯಿಸಿದೆ.

# ಕಟ್ಟಡ ಕಾರ್ಮಿಕರ ನಿಧಿ ದೋಚಲು ಸಚಿವರು–ಶಾಸಕರ ಹೊಂಚು




ರಾಜ್ಯದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಬಿಜೆಪಿ ಸರಕಾರದ ಸಚಿವರು, ಶಾಸಕರು ಇದೀಗ ಬಡ ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಿರುವ ನಿಧಿಯಲ್ಲಿ 450 ಕೋಟಿ ರೂಪಾಯಿ ಹಣವನ್ನು ಸ್ಲಂ ಬೋರ್ಡ್ ವಸತಿ ನಿರ್ಮಾಣ ಏಜೆನ್ಸಿಗಳಿಗೆ ನೀಡಿದ್ದಾರೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಫೆಡರೇಶನ್(ಸಿಐಟಿಯು) ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ ಆರೋಪಿಸಿದ್ದಾರೆ.

ಉಡುಪಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಾಲಕೃಷ್ಣ ಶೆಟ್ಟಿ ಅವರು, ರಾಜ್ಯದಲ್ಲಿ ಭ್ರಷ್ಟಾಚಾರದ ಎಲ್ಲೆ ಮಿತಿಮೀರಿದ್ದು, ಶೇ. 40ರಷ್ಟು ಕಮಿಷನ್ ಆರೋಪಗಳು ರಾಜ್ಯ ಸರ್ಕಾರದ ಮೇಲಿದೆ. ಇವುಗಳ ನಡುವ ರಾಜ್ಯದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೋಂದಣಿಯಾಗಿರುವ ಕಾರ್ಮಿಕರು ಹಲವು ವರ್ಷಗಳಿಂದ ಮಂಡಳಿಯಿಂದ ಮನೆ ನಿರ್ಮಾಣಕ್ಕೆ ಸಹಾಯಧನಕ್ಕಾಗಿ ಕಾಯುತಿದ್ದಾರೆ. ಆದರೆ ಅವರಿಗೆ ಯಾವುದೇ ಆರ್ಥಿಕ ನೆರವು ನೀಡದ ಮಂಡಳಿ ಅಧ್ಯಕ್ಷ ಹಾಗೂ ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್, ವಸತಿ ಸೇರಿದಂತೆ ಇತರ ಸಚಿವರ ಒತ್ತಡಕ್ಕೆ ಮಣಿದು ಕೊಳಚೆ ನಿರ್ಮೂಲನ ಮಂಡಳಿ ಮೂಲಕ ನಿರ್ಮಿಸುವ 21000 ಮನೆಗಳಿಗೆ 433 ಕೋಟಿ ಹಾಗೂ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ನಿರ್ಮಿಸುವ 423 ಮನೆಗಳಿಗೆ 8.33 ಕೋಟಿ ರೂ. ಏಜೆನ್ಸಿದಾರರಿಗೆ ವರ್ಗಾಯಿಸಿದೆ ಎಂದು ತಿಳಿಸಿದರು.

ಈ ಮೂಲಕ ಸರಕಾರ ಲಕ್ಷಾಂತರ ಬಡ ಕಟ್ಟಡ ಕಾರ್ಮಿಕರಿಗೆ ದ್ರೋಹ ಬಗೆದಿದ್ದು, ಇದರಲ್ಲಿ ರಾಜ್ಯದ ಸಚಿವರು ಹಾಗೂ ಶಾಸಕರು ಅಪಾರ ಪ್ರಮಾಣದ ಹಣವನ್ನು ಕಮಿಷನ್ ರೂಪದಲ್ಲಿ ದೋಚಲು ಹೊಂಚು ಹಾಕಿರುವುದು ಕಂಡು ಬರುತ್ತದೆ ಎಂದು ಅವರು ಹೇಳಿದರು.

**ನಕಲಿ ಕಟ್ಟಡ ಕಾರ್ಮಿಕರು**

ವಸತಿ ಸಚಿವರು, ಸರಕಾರಗಳ ಅನುದಾನ ಬಳಸಿ, ಮನೆ ನಿರ್ಮಿಸುವ ಬದಲು ಸಾವಿರಾರು ನಕಲಿ ಕಟ್ಟಡ ಕಾರ್ಮಿಕರನ್ನು ಮಂಡಳಿಯಲ್ಲಿ ನೋಂದಾಯಿಸಿ, ನೂರಾರು ಕೋಟಿ ರೂಪಾಯಿ ಹಣ ದೋಚಿದ್ದಾರೆ. ಸಚಿವ ಶಿವರಾಮ ಹೆಬ್ಬಾರ್ ಕೋವಿಡ್ ಸಮಯದಲ್ಲಿ ಸಾವಿರಾರು ಕೋಟಿ ಖರೀದಿಗಳ ಮೂಲಕ ನೂರಾರು ಕೋಟಿ ಹಣದ ಅವ್ಯವಹಾರ ನಡೆಸಿದ್ದಾರೆ ಎಂದು ಬಾಲಕೃಷ್ಣ ಶೆಟ್ಟಿ ಆರೋಪಿಸಿದರು.

ಕಲ್ಯಾಣ ಮಂಡಳಿಯ ಕೆಲವು ಕಾರ್ಮಿಕ ಅಧಿಕಾರಿಗಳು ಏಜೆಂಟರು, ಭ್ರಷ್ಟರುಗಳಿಗೆ ಮಣೆ ಹಾಕಿದ ಪರಿಣಾಮ ನೈಜ ಕಾರ್ಮಿಕರಿಗೆ ಮಂಡಳಿ ಸೌಲಭ್ಯಗಳು ದೊರಕದೆ ನಕಲಿ ಜನರು ಕಬಳಿಸುವಂತಾಗಿದೆ. ಈಗಾಗಲೇ ರಾಜ್ಯ ಮಂಡಳಿಯಲ್ಲಿ ನೊಂದಾಯಿತ 37 ಲಕ್ಷ ಕಟ್ಟಡ ಕಾರ್ಮಿಕರ ಪೈಕಿ 17ಲಕ್ಷ ಮಂದಿ ಮಾತ್ರ ನಿಜವಾದ ಕಾರ್ಮಿಕರು. ಉಳಿದವರು ನಕಲಿ ಕಾರ್ಮಿಕರು ಎಂದು ಅವರು ದೂರಿದರು.

ಸ್ಲಂ ಬೋರ್ಡ್‌ಗೆ ವರ್ಗಾವಣೆ ಮಾಡಿರುವ ಹಣವನ್ನು ಮಂಡಳಿಗೆ ವಾಪಾಸ್ ಪಡೆಯಬೇಕು ಹಾಗೂ ನೋಂದಾಯಿತ ನೈಜ ಕಟ್ಟಡ ಕಾರ್ಮಿಕರಿಗೆ ಮಾತ್ರವೇ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಬೇಕು. ಮಂಡಳಿಯ ಎಲ್ಲ ಖರೀದಿಗಳನ್ನು ತನಿಖೆಗೊಳಪಡಿಸಬೇಕು ಎಂದು ಆಗ್ರಹಿಸಿ ಇಂದು ಉಡುಪಿಯಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಲಾಗಿದೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಡುಪಿ ಜಿಲ್ಲಾ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಸಂಚಾಲಕರಾದ ಸುರೇಶ ಕಲ್ಲಾಗರ ಹಾಗೂ ರೊನಾಲ್ಡ್ ಕ್ವಾಡ್ರಸ್ ಉಪಸ್ಥಿತರಿದ್ದರು.

**ಮರಳು ಸಮಸ್ಯೆ ಶಾಶ್ವತ ಪರಿಹಾರಕ್ಕೆ ಆಗ್ರಹ**

ಉಡುಪಿ ಜಿಲ್ಲೆಯಲ್ಲಿ ನಿರ್ಮಾಣ ಕ್ಷೇತ್ರವು ಮರಳು ಲಭ್ಯತೆಯ ಮೇಲೆ ಅವಲಂಬಿತವಾಗಿದೆ. ಚೆನ್ನೈ ಹಸಿರು ಪೀಠದ ತೀರ್ಪಿನಿಂದಾಗಿ ಸಿಆರ್‌ಝಡ್ ವಲಯದಲ್ಲಿ ಮರಳುಗಾರಿಕೆ ನಡೆಯುತ್ತಿಲ್ಲ. ಇದರಿಂದ ಮರಳು ಲಭ್ಯತೆ ತೀವ್ರ ವಾಗಿ ಕುಸಿದಿದ್ದು, ದರದಲ್ಲಿ ತೀವ್ರ ಹೆಚ್ಚಳವಾಗಿದೆ. ಇದರಿಂದ ಸಣ್ಣ ಮತ್ತು ಮಧ್ಯಮವರ್ಗದ ಜನರು ಮನೆ ನಿರ್ಮಿಸದಿರುವುದರಿಂದ ಕಾರ್ಮಿಕರಿಗೆ ಕೆಲಸ ಇಲ್ಲದಂತಾಗಿದೆ ಎಂದು ಬಾಲಕೃಷ್ಣ ಶೆಟ್ಟಿ ಹೇಳಿದರು.

ಈ ಕುರಿತು ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನ ವಾಗಿಲ್ಲ. ಮರಳು ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ರಾಜ್ಯ ಸರಕಾರ ಮತ್ತು ಜಿಲ್ಲಾಡಳಿತ ಗಮನ ನೀಡದೇ ಹೋದಲ್ಲಿ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.





# ಸರ್ಕಾರಿ ಶಾಲೆಗಳಿಗೂ ಹಬ್ಬಿದ ಡೊನೇಷನ್ ಹಾವಳಿ!

**ನಮ್ಮ ಶಾಲೆ - ನನ್ನ ಕೊಡುಗೆ ಹೆಸರಿನಲ್ಲಿ ಸರಕಾರ 100 ರೂ ದೇಣಿಗೆ ಪಡೆಯುವ ಮೂಲಕ ಡೊನೇಷನ್ ಹಾವಳಿಯನ್ನು ಸರಕಾರಿ ಶಾಲೆಗೂ ಹಬ್ಬಿಸಿದೆ. ಮುಂದೆ ಶಿಕ್ಷಕರ ವೇತನಕ್ಕಾಗಿ ಪೋಷಕರು ಹಣ ನೀಡಬೇಕು ಎಂದು ಸುತ್ತೋಲೆ ಹೊರಡಿಸಿದರು ಅಚ್ಚರಿ ಪಡಬೇಕಿಲ್ಲ.**

ರಾಜ್ಯದ ಪ್ರಾಥಮಿಕ, ಪ್ರೌಢ ಶಾಲೆಗಳಿಗೆ ಅಗತ್ಯವಿರುವ ಖರ್ಚುವೆಚ್ಚಗಳಿಗಾಗಿ ಮಕ್ಕಳ ಪೋಷಕರಿಂದ ದೇಣಿಗೆ ರೂಪದಲ್ಲಿ ಪ್ರತಿ ತಿಂಗಳು 100 ರೂ. ಸಂಗ್ರಹಿಸಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ (ಎಸ್‌ಡಿಎಂಸಿ) ಅನುಮತಿ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ಸರ್ಕಾರದ ಈ ನಡೆ ಶಿಕ್ಷಣದ ಮೂಲಭೂತ ಹಕ್ಕಿನ ಉಲ್ಲಂಘನೆ, ಕಡ್ಡಾಯ ಶಿಕ್ಷಣ ಹಕ್ಕು ಮೊಟಕುಗೊಳಿಸುವ ಹುನ್ನಾರ ಎಂದು ಶಿಕ್ಷಣ ತಜ್ಞರು, ವಿದ್ಯಾರ್ಥಿ ಸಂಘಟನೆಗಳು, ಪೋಷಕರ ಸಂಘಟನೆಗಳು ಆಕ್ಷೇಪವನ್ನು ವ್ಯಕ್ತಪಡಿಸಿ, ಇದು ಸರಕಾರಿ ಶಾಲೆಗಳನ್ನು ಮುಚ್ಚುವುದರ ಒಂದು ಭಾಗವೆಂದು ಆರೋಪಿಸಿವೆ.

ಸುತ್ತೋಲೆಯಲ್ಲಿ ಏನಿದೆ?: ಅಕ್ಟೋಬರ್ 19 ರಂದು, (ಸೊತ್ತೋಲೆ ಸಂಖ್ಯೆ; ಸಿ7(1) ಸ.ಶಾಲಾ. ದೇಣಿಗೆ. 01/2022–23) ರಾಜ್ಯ ಸರಕಾರ ಸುತ್ತೋಲೆ ಹೊರಡಿಸಿದೆ. ಸುತ್ತೋಲೆಯಲ್ಲಿ 'ಶಾಲಾ ನಿರ್ವಹಣೆ ಹಾಗೂ ಶೈಕ್ಷಣಿಕ ಚಟುವಟಿಕೆಗಳಿಗೆ ಸರ್ಕಾರದ ಮಂಜೂರಾತಿ ಇಲ್ಲವಾದಾಗ, ಅನುದಾನದ ಕೊರತೆ ಎದುರಾದಾಗ ಸ್ಥಳೀಯವಾಗಿ ಸುಗಮ ನಿರ್ವಹಣೆ ಸಾಧ್ಯವಾಗಿಸಲು ಸರ್ಕಾರ 'ನಮ್ಮ ಶಾಲೆ–ನನ್ನ ಕೊಡುಗೆ' ಯೋಜನೆ ರೂಪಿಸಿದೆ. ಈ ಯೋಜನೆ ಅನ್ವಯ ಸಾರ್ವಜನಿಕರಿಂದ ಆರ್ಥಿಕ ಸಹಾಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಆದರೂ, ಪೋಷಕರಲ್ಲಿ ಶಾಲಾ ಚಟುಚಟಿಕೆ, ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನ ಕೊಡುವಂತೆ ಮಾಡಲು ಮಕ್ಕಳ ಪೋಷಕರು, ತಂದೆ, ತಾಯಿಯರ ಮನವೊಲಿಸಿ ಪ್ರತಿ ತಿಂಗಳು ಹಣವನ್ನು ಪಡೆಯಬೇಕು. ಹಣಕ್ಕಾಗಿ ಬಲವಂತ ಮಾಡಬಾರದು. ಸಂಗ್ರಹಿಸಿದ ಹಣವನ್ನು ಎಸ್‌ಡಿಎಂಸಿ ಖಾತೆಗೆ ಜಮೆ ಮಾಡಬೇಕು' ಎಂದು ಸೂಚಿಸಲಾಗಿದೆ.

ಈ ಯೋಜನೆಯಿಂದ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಸಾರ್ವಜನಿಕರಿಂದ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಆರ್ಥಿಕ ಸಹಾಯವನ್ನು ಕೊಡುಗೆ, ದಾನದ ರೂಪದಲ್ಲಿ ಪಡೆಯಲು ಅನುಮತಿ ನೀಡಲಾಗಿದೆ ದೇಣಿಗೆ ರೂಪದಲ್ಲಿ ಮಾಸಿಕ ಸುಮಾರು ರೂ.100/–ಗಳಂತೆ ಹಣ ವನ್ನು ಸಂಗ್ರಹಿಸಿ ಸದರಿ ಹಣವನ್ನು ನಿಗದಿತ ಎಸ್.ಡಿ.ಎಂ.ಸಿ. ಖಾತೆಗೆ ಪೋಷಕರಿಂದ ಸಂದಾಯ ಮಾಡಲು ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ಪ್ರಥಮ ಆದ್ಯತೆ ಯಾಗಿ ಕುಡಿಯುವ ನೀರು ಪೂರೈಕೆ ಶೌಚಾಲಯ ಮತ್ತು ಶಾಲೆ ಶುಚಿಗೊಳಿಸಲು,ಶಾಲೆಯ ವಿದ್ಯುತ್ ಶುಲ್ಕ ಕಟ್ಟಲು,ಶಾಲೆಯಲ್ಲಿನ ಪರಿಕರಗಳ ತುರ್ತು ರಿಪೇರಿಗಳು, ಮಕ್ಕಳು ಬಿಸಿಯೂಟ ಸೇವಿಸಲು ತಟ್ಟೆ, ಲೋಟ ಮತ್ತಿತರ ಪೂರಕ ವಸ್ತುಗಳು, ಇಲಾಖೆ ಹೆಚ್ಚುವರಿ ಶಿಕ್ಷಕರನ್ನು ಒದಗಿಸಿದ್ದರೂ ಹೆಚ್ಚುವರಿಯಾಗಿ ಅತಿಥಿ ಶಿಕ್ಷಕರನ್ನು ಶೈಕ್ಷಣಿಕ ಚಟುವಟಿಕೆಗಳಿಗೆ ಬಳಸಿಕೊಂಡಲ್ಲಿ ಅವರಿಗೆ ನೀಡಲು ಗೌರವ ಸಂಭಾವನೆ, ಗಣಕಯಂತ್ರಗಳ ರಿಪೇರಿ, ಅಗತ್ಯ ಬೋಧನೋಪಕರಣಗಳ ಸಂಗ್ರಹಣೆಗಾಗಿ ಬಳಸಬಹುದಾಗಿದೆ.

ದ್ವಿತೀಯ ಆದ್ಯತೆಯಾಗಿ ಮಕ್ಕಳ ಉಪಯೋಗಕ್ಕಾಗಿ ಬೆಂಚ್ ಅಥವಾ ಡೆಸ್ಕ್ ಗಳು,ಶಾಲಾ ಆಟದ ಮೈದಾನದ ಸಿದ್ಧತೆ, ಇ–ಕಲಿಕಾ ಕೇಂದ್ರದ ಸ್ಥಾಪನೆ, ಶಾಲೆಯ ಗ್ರಂಥಾಲಯ, ವಾಚನಾಲಯ ಬಲವರ್ಧನೆ, ಸ್ಕೌಟ್ಸ್ ಗೈಡ್, ಎನ್.ಎಸ್.ಎಸ್, ಎನ್.ಸಿ.ಸಿ ಕ್ರೀಡಾ ಮಕ್ಕಳಿಗೆ ಅಗತ್ಯ ಸಮವಸ್ತ್ರ, ಸಾಮಗ್ರಿ ಗಳು, ಶಾಲಾವನ ಬಲವರ್ಧನೆ, ಅತ್ಯಂತ ಅವಶ್ಯ ಕವಾಗಿ ಮಾಡಲೇಬೇಕಾದ ಇತರ ವೆಚ್ಚಗಾಗಿ ಖರ್ಚು ಮಾಡಬಹುದಾಗಿದೆ.

ಈ ಸಂಬಂಧ ಶಾಲೆಯಲ್ಲಿ ಅಗತ್ಯವಿರುವ ತುರ್ತು ಕ್ರಮಗಳ ಬಗ್ಗೆ ಎಸ್.ಡಿ.ಎಂಸಿ ಸಭೆಯಲ್ಲಿ ವಿವರ ವಾಗಿ ಚರ್ಚಿಸಿ ಅನುಮೋದನೆ ಪಡೆದು ವೆಚ್ಚ ಮಾಡಲು ಅನುಮತಿಸಬಹುದಾಗಿದೆ.ಜೊತೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ಪೋಷಕರು, ತಂದೆ ತಾಯಂದಿರ ಸಭೆ ಕರೆದು ಶಾಲೆಯಲ್ಲಿ ಅಗತ್ಯವಿರುವ ಚಟುವಟಿಕೆಗಳಿಗೆ ಅನುದಾನ ಮತ್ತು ಪ್ರಗತಿ ಬಗ್ಗೆ ವಿವರಣೆ ನೀಡ ಇತರ ಆದ್ಯತೆ ಕ್ರಮಗಳ ಬಗ್ಗೆಯೂ ಸಹ ಸಭೆಯಲ್ಲಿ ವಿವರಿಸಿ/ಚರ್ಚಿಸಿ ನಡಾವಳಿ ದಾಖಲಿಸುವುದು ಮುಂದಿನ ಸಭೆಯಲ್ಲಿ ನಡಾವಳಿಯನ್ನು ಓದಿ ತಿಳಿಸಿ ಅನುಪಾಲನ ಮಾಡಲು ಆದೇಶಿಸಲಾಗಿದೆ ಎಂದು ಸುತ್ತೋಲೆ ಹೇಳುತ್ತದೆ.

**ಮಕ್ಕಳ ಹಕ್ಕುಗಳ ಉಲ್ಲಂಘನೆ:**

ಸರ್ಕಾರದ ಈ ನಡೆ ಶಿಕ್ಷಣದ ಮೂಲಭೂತ ಹಕ್ಕಿನ ಉಲ್ಲಂಘನೆ, ಕಡ್ಡಾಯ ಶಿಕ್ಷಣ ಹಕ್ಕು ಮೊಟಕುಗೊಳಿಸುವ ಹುನ್ನಾರ ಎಂದು ಶಿಕ್ಷಣ ತಜ್ಞ ಬಿ. ಶ್ರೀಪಾದ್ ಭಟ್ ಆರೋಪಿಸಿದ್ದಾರೆ. 'ಸಂವಿಧಾನದ 21 ಎ ವಿಧಿಯ ಪ್ರಕಾರ ಮಕ್ಕಳಿಗೆ ಶಿಕ್ಷಣ ನೀಡುವುದು ಆಯಾ ಸರ್ಕಾರಗಳ ಹೊಣೆ. ಆರ್‌ಟಿಇ ಸೆಕ್ಷನ್ 3ರ ಪ್ರಕಾರ 8ನೇ ತರಗತಿಯವರೆಗೆ ಯಾವುದೇ ಅಡ್ಡಿ ಆತಂಕ ಇಲ್ಲದೆ ಕಡ್ಡಾಯವಾಗಿ ಶಿಕ್ಷಣ ನೀಡಬೇಕು ಆದರೆ ಸರಕಾರ ಈಗ ಪೋಷಕರಿಂದ 100 ರೂ ಪಡೆದು ಶಾಲೆ ಅಭಿವೃದ್ಧಿ ಮಾಡುತ್ತೇನೆ ಎಂದು ಹೊರಟಿರುವುದು ಕ್ರೌರ್ಯವಾಗಿದೆ. ಮಠ ಮಾನ್ಯಗಳಿಗೆ ಹಣ ನೀಡುವ ಸರಕಾರದ ಬಳಿ ಸರಕಾರಿ ಶಾಲೆಗಳನ್ನು ಬಲ ಪಡಿಸಲು ಹಣ ಇಲ್ಲ ಎಂದರೆ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲ ಪಡಿಸಲು ಸಾಧ್ಯವಿಲ್ಲ ಎಂದರೆ ಇವರು ಅಧಿಕಾರದಲ್ಲಿ ಇರಲು ಇವರಿಗೆ ನೈತಿಕತೆ ಇಲ್ಲ ಎಂದು ಆರೋಪಿಸಿದ್ದಾರೆ.

**ಶಾಲೆ ಮುಚ್ಚುವ ಹುನ್ನಾರ:**

ಸರಕಾರಿ ಶಾಲೆಗಳಲ್ಲಿ ಮೂಲ ಸೌಲಭ್ಯ ಇಲ್ಲದೆ ನರಳುತ್ತಿವೆ. ಸೌಲಭ್ಯಗಳಿಲ್ಲ ಎನ್ನುವ ಕಾರಣದಿಂದ ಸರಕಾರಿ ಶಾಲೆಗೆ ಬರುವವರ ಸಂಖ್ಯೆ ಇಳಿಮುಖವಾಗಿದೆ. ಈಗ ದೇಣಿಗೆ ರೂಪದಲ್ಲಿ 100 ರೂ ಪಡೆದರೆ ಖಂಡಿತಾ ಪೋಷಕರು ಮಕ್ಕಳನ್ನು ಸರಕಾರಿ ಶಾಲೆಯತ್ತ ಕಳುಹಿಸುವುದಿಲ್ಲ ಇದು ಸರಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರ ಎಂದು ಎಸ್‌ಎಫ್‌ಐ ಆರೋಪಿಸಿದೆ.



ದಲಿತರು, ರೈತರು, ಕೂಲಿ ಕಾರ್ಮಿಕರು, ಬಡವರ ಮಕ್ಕಳಷ್ಟೆ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಈ ಸಮುದಾಯದ ಶಿಕ್ಷಣವನ್ನು ಸರಕಾರ ಕಸಿಯುತ್ತಿದೆ. ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಮೀಸಲಿಡುವ ಬದಲು ಈ ರೀತಿಯ ಅನ್ಯಮಾರ್ಗಗಳನ್ನು ಬಳಸುತ್ತಿರುವುದು ಸರಿಯಾದ ವಿಧಾನ ಇಲ್ಲ. ಈ ಸುತ್ತೋಲೆಯನ್ನು ವಾಪಸ್ಸ ಪಡೆಯಬೇಕು, ಈ ಸುತ್ತೋಲೆಯ ವಿರುದ್ಧ ಎಸ್‌ಎಫ್‌ಐ ರಾಜ್ಯವ್ಯಾಪಿ ಹೋರಾಟವನ್ನು ನಡೆಸಲಿದೆ ಎಂದು ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ವಾಸುದೇವ ರೆಡ್ಡಿ ಪ್ರತಿಕ್ರಿಯಿಸಿದ್ದಾರೆ.

**ಸರಕಾರಿ ಶಾಲೆಯಲ್ಲಿ ಡೊನೇಶನ್!:**

ಸರ್ಕಾರಿ ಶಾಲೆಗಳಲ್ಲಿ ಡೊನೇಷನ್ (ದೇಣಿಗೆ) ಪಡೆಯುವ ಸರ್ಕಾರದ ದಂಧೆಯನ್ನು ಸುತ್ತೋಲೆಯ ಮೂಲಕ ಅಧಿಕೃತಗೊಳಿಸಿಕೊಂಡಿದೆ ಎಂದು ಎಐಟಿಎಸ್‌ಓ ಆರೋಪಿಸಿದೆ. ರಾಜ್ಯದ ಶಿಕ್ಷಣ ಇಲಾಖೆಯಲ್ಲಿ 50,000ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. 4500 ಸರ್ಕಾರಿ ಶಾಲೆಗಳಿಗೆ ತಲಾ ಒಬ್ಬರೇ ಶಿಕ್ಷಕರು ಗತಿ! ಮೇಷ್ಟ್ರೇ ಇಲ್ಲದ ಶಾಲೆಗಳು ಕೂಡ ಈ ರಾಜ್ಯದಲ್ಲಿವೆ. ತೀವ್ರ ಆರ್ಥಿಕ ಸಂಕಷ್ಟದಿಂದಾಗಿ ಜನಸಾಮಾನ್ಯರು ಪರಿತಪ್ಪಿಸುತ್ತಿದ್ದಾರೆ. ಮನೆ ನಿರ್ವಹಣೆಗಾಗಿ ಸಾವಿರಾರು ಸಂಖ್ಯೆಯಲ್ಲಿ ಹೈಸ್ಕೂಲ್ ಮಕ್ಕಳು ಈಗಾಗಲೇ ಶಾಲೆ ಬಿಟ್ಟು ಕೂಲಿಗೆ ಹೊರಟಿದ್ದಾರೆ. ಕಳೆದ 9 ವರ್ಷದಲ್ಲಿ ರಾಜ್ಯದ 10 ಲಕ್ಷಕ್ಕೂ ಹೆಚ್ಚು ಮಕ್ಕಳು ಶಾಲೆ ಬಿಟ್ಟಿದ್ದಾರೆ.

ಅಗತ್ಯವಿರುವ ಹೆಚ್ಚಿನ ಹಣ ಬಿಡುಗಡೆ ಮಾಡಿ ಸರ್ಕಾರವೇ ಮೂಲಭೂತ ಅವಶ್ಯಕತೆಗಳನ್ನು ಪೂರೈಸಬೇಕು ಮತ್ತು ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಬೇಕು. ಪ್ರತಿ ದಿನ ಸರ್ಕಾರದ ಖಜಾನೆಗೆ ಪೋಷಕರಿಂದ ನೇರ ತೆರಿಗೆ ರೂಪದಲ್ಲಿ ಬಂದು ಸೇರುವ ಕೋಟ್ಯಂತರ ಹಣವನ್ನು ಇಂತಹ ಕಾರ್ಯಗಳಿಗೆ ಬಳಸಬೇಕು. ಅದನ್ನು ಬಿಟ್ಟು ಈಗ ಮತ್ತೊಮ್ಮೆ ಪೋಷಕರ ಸುಲಿಗೆಗೆ ನಿಂತಿರುವುದು ಅತ್ಯಂತ ಖಂಡನೀಯ ಎಂದು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ ಕಾಮತ್ ಪ್ರತಿಕ್ರಿಯಿಸಿದ್ದಾರೆ.

ಸರಕಾರಿ ಶಾಲೆಗಳನ್ನು ಅಬಿವೃದ್ಧಿ ಪಡಿಸಬೇಕಿರುವ ಸರಕಾರ ಕುಂಟುನೆಪಗಳನ್ನು ಮುಂದೆ ಮಾಡಿ ಪೋಷಕರಿಂದ ಸುಲಿಗೆ ಮಾಡಲು ಮುಂದಾಗುತ್ತಿರುವುದು ಸರಿಯಾದ ಕ್ರಮವಲ್ಲ. ಈ ಯೋಜನೆ ಸರಕಾರಿ ಶಾಲೆಯನ್ನು ಮುಚ್ಚಲು ದಾರಿ ಮಾಡಿಕೊಡಲಿದೆ. ಅಷ್ಟೆ ಇಲ್ಲ ಎಸ್‌ಡಿಎಂಸಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ವಾತಾವರಣವನ್ನು ನಿರ್ಮಿಸಿಕೊಡಲಿದೆ. ಶಾಲೆಯನ್ನು ನಿರ್ವಹಣೆ ಮಾಡಲು ಈ ರೀತಿಯ ತಂತ್ರ ಹೂಡಿದ ಸರಕಾರ ನಾಳೆ ಶಿಕ್ಷಕರ ವೇತನವನ್ನು ಪೋಷಕರಿಂದಲೆ ಪಡೆಯಬೇಕು ಎಂಬ ನಿಯಮ ತಂದರೂ ಅಚ್ಚರಿ ಪಡಬೇಕಿಲ್ಲ. ಹಾಗಾಗಿ ಸರಕಾರ ಈ ಸುತ್ತೋಲೆಯನ್ನು ವಾಪಸ್ಸ ಪಡೆದ ಶಿಕ್ಷಣ ಹಾಗೂ ಮಕ್ಕಳ ಹಿತವನ್ನು ಕಾಪಾಡಬೇಕಿದೆ.

**ಗುರುರಾಜ ದೇಸಾಯಿ**

## ಸಂಕಷ್ಟದಲ್ಲಿರುವ ಕಾಂಗ್ರೆಸ್ಸಿಗೀಗ ಖರ್ಗೆಯವರ ಸಾರಥ್ಯ

**ಪುಟ 3 ರಿಂದ**

ಕಾಂಗ್ರೆಸ್ ಬದಲಾಗುವುದೇ? ಒದಗಿರುವ ಅಂತಹ ಅವಕಾಶವನ್ನು ಬದಲಾಗಲು ಬಳಸಿಕೊಳ್ಳುವುದೇ ಕಾದು ನೋಡಬೇಕು.

ಖರ್ಗೆಯವರಮುಂದೆ ಸಾಲು, ಸಾಲು ಸವಾಲುಗಳಿವೆ. ಮುಂಬರುವ ಹಿಮಾಚಲ, ಗುಜರಾತ್, ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯುವ ಗುರುತರ ಜವಾಬ್ದಾರಿ ಇದೆ. ಕರ್ನಾಟಕವನ್ನೂ ಒಳಗೊಂಡು, ಪಾರ್ಲಿಮೆಂಟ್ ಚುನಾವಣೆಯ ಸವಾಲೂ ಇದೆ. ಈ ಎಲ್ಲವನ್ನೂ ನಿಭಾಯಿಸಲು ಮುಖ್ಯವಾಗಿ ಪಕ್ಷದೊಳಗಿನ ಗುಂಪುಗಾರಿಕೆಯನ್ನು ಸರಿಪಡಿಸಬೇಕಿದೆ. ವಿಶೇಷವಾಗಿ ಕೂಸು ಹುಟ್ಟುವ ಮೊದಲೇ ಕುಲಾಯಿ ಹೊಲಿಸಿಕೊಂಡು ನಿಂತಿರುವ ಸಿದ್ದೂ–ಡಿ.ಕೆ.ಶಿ ನಡುವಿನ ಮೇಲುಗೈ ಸಾಧಿಸುವ ಅನಾರೋಗ್ಯಕರ ಶೀತಲ ಸಮರ ಕೊನೆಗೊಳ್ಳಬೇಕಿದೆ.

ಖರ್ಗೆಯವರು ಕೆಲವು ವಿಷಯಗಳಲ್ಲಿ ಅತ್ಯಂತ ಪ್ರಾಯೋಗಿಕ ಅನುಭವ ಉಳ್ಳವರು. ಹಿಂದೆ ಕರ್ನಾಟಕ ಕಾಂಗ್ರೆಸ್ ನ ಅದ್ಯಕ್ಷರಾಗಿದ್ದಾಗ ಬೆಂಬಲಿಗರ ಜಯಘೋಷಕ್ಕೆ ಅವರು ಕೊಟ್ಟ ಪ್ರತಿಕ್ರಿಯೆ ವಿಶೇಷವಾಗಿತ್ತು. 'ಖರ್ಗೆ ಸಾಬ್ ಆಪ್ ಆಗೆ ಚಲೋ, ಹಮ್ ಆಪ್ ಕಾ ಪೀಛೆ ಹೈ' ಖರ್ಗೆ ಸಾಹೇಬ್ರೇ ನೀವು ಮುಂದೆ ನಡೆಯಿರಿ ನಾವು ನಿಮ್ಮ ಹಿಂದೆ ಇರ್ತೇವೆ' ಎನ್ನಬೇಡಿ. ನೀವು ನನ್ನೊಬ್ಬನನ್ನೇ ನಡೆಯಲು ಬಿಟ್ಟು ನೀವು ಹಿಂದೆ ಉಳಿಯುವ ಬದಲು ಸಾಥ್ ಮೇ ಜೊತೆಗೆ ನಡೆಯಿರಿ. ಇದರಲ್ಲಿ ನನಗೆ ನಂಬಿಕೆ' ಎಂದಿದ್ದರು. ಈ ಆಶಯವನ್ನಾದರೂ ಉಳಿದ ನಾಯಕರು ಅನುಸರಿಸಿದರೆ ಕೋಮುವಾದಿ ಬಿಜೆಪಿಗೆ ಪ್ರತಿರೋಧ ಒಡ್ಡಲು ಒಂದಿಷ್ಟು ಬಲವಾದರೂ ಬರಬಹುದು.

# ಹಸಿವಿನ ಸೂಚ್ಯಂಕದ ಸುತ್ತ ಸರಕಾರ ಪ್ರಾಯೋಜಿತ ಅಸಂಗತ ನಾಟಕ

**ಮಹಾಶ್ವೇತಾ ದೇವಿ ಅವರು 'ಶಿಶು' ಎನ್ನುವ ಭೀಭತ್ಸವಾದ, ಪ್ರಭಾವಿಯಾದ ಕತೆಯೊಂದನ್ನು ಬರೆದಿದ್ದಾರೆ. ಕ್ಷಾಮ, ಬಡತನ ಇವುಗಳೇ ಸಾಮಾನ್ಯವಾಗಿರುವ ಪ್ರದೇಶವೊಂದರಲ್ಲಿ ಸರಕಾರಿ ಅಧಿಕಾರಿಯೊಬ್ಬನು ಹುಡುಕುತ್ತ ಹೋಗಿ ಒಂದು ಕಾಡಿನಂಚಿನಲ್ಲಿ ವಿಚಿತ್ರವೂ, ಭೀಕರವೂ ಆದ ದೃಶ್ಯವನ್ನು ಕಾಣುತ್ತಾನೆ. ವಿಕಾರ ರೂಪದ ಮಕ್ಕಳುಗಳಂತೆ ಕಾಣುವ ಕೆಲವು ವಿಚಿತ್ರ ಜೀವಿಗಳು ಅಲ್ಲಿವೆ. ಭಯಗ್ರಸ್ತನಾದ ಅವನಿಗೆ ಕೊನೆಗೆ ಅರ್ಥವಾಗುವುದೆಂದರೆ ಆ ಜೀವಿಗಳು ಮನುಷ್ಯರೇ. ಆದರೆ ಸರಿಯಾದ ಆಹಾರವಿಲ್ಲದೆ, ಪೌಷ್ಠಿಕತೆ ಇಲ್ಲದೆ ಅವರು ಕುಬ್ಜರಾಗಿ ಬಿಟ್ಟಿದ್ದಾರೆ. ಅವರನ್ನು ಈ ಸ್ಥಿತಿಗೆ ತಂದಿರುವ ಆಡಳಿತ, ಸರ್ಕಾರದ ಪ್ರತಿನಿಧಿಯಾಗಿ ಈ ಅಧಿಕಾರಿ ಇದ್ದಾನೆ. ಈ ಕತೆಯಲ್ಲಿ ಅಂಕಿ ಸಂಖ್ಯೆಯ ಬದಲು ವಾಸ್ತವವೇ ಇದೆ. ಇದು ಹಸಿವಿನ ಸೂಚ್ಯಂಕವು ಸೂಚಿಸುವ ಒಂದು ಸಾಧ್ಯತೆ.**




**ಪ್ರೊ. ರಾಜೇಂದ್ರ ಚೆನ್ನಿ**

ಆಧುನಿಕ ಜಗತ್ತಿನ ಮಹಾದುರಂತವೆಂದರೆ ಮನುಷ್ಯರು ಅಂಕಿ ಸಂಖ್ಯೆಗಳಾಗಿದ್ದು. ಜನಸಂಖ್ಯೆ ಬೆಳೆದಂತೆ ಇದು ಅನಿವಾರ್ಯ, ಆಧುನಿಕ ಸಮಾಜಗಳ ನಿರ್ವಹಣೆ ದತ್ತಾಂಶಗಳ ವರದಿಯ ಆಧಾರದ ಮೇಲೆ ನಡೆಯುವುದು ಅನಿವಾರ್ಯ ಇತ್ಯಾದಿ ಕಾರಣಗಳನ್ನು ಹೇಳಬಹುದಾದರೂ, ಜಾಗತಿಕ ಮಟ್ಟದಲ್ಲಿ ಅಂಕಿ ಸಂಖ್ಯೆಗಳ ರಾಜಕೀಯವು ಸಣ್ಣದೇನಲ್ಲ. ಇಂಗ್ಲೆಂಡ್‌ನಲ್ಲಿ ಹತ್ತೊಂಬತ್ತನೇಯ ಶತಮಾನದಲ್ಲಿ ದೊಡ್ಡ ಮಹಾನಗರಗಳಲ್ಲಿ ಉದ್ಯಮೀಕರಣ ಬೆಳೆದಂತೆ ಹಳ್ಳಿಗಳಿಂದ ಸಣ್ಣ ರೈತರು ವಲಸೆ ಬರುವುದು ಹೆಚ್ಚಿದಂತೆ ಮನುಷ್ಯರು ಸಂಖ್ಯೆಗಳಾಗಿ ಕಾಣತೊಡಗಿದರು. ಇದು ಅಂದಿನ ಬರಹಗಾರರಿಗೆ ಆಘಾತಕರವಾಗಿ ಕಾಣತೊಡಗಿತು. ಅಂದು Political Economy ಎಂದು ಕರೆಯಲಾಗುತ್ತಿದ್ದ ಅರ್ಥಶಾಸ್ತ್ರವು ಬರಹಗಾರರಿಗೆ `Dismal Science' ಆಗಿ ಕಾಣತೊಡಗಿತು. ಅಲ್ಲದೆ ಮನುಷ್ಯರ ಬದುಕಿನ ಕರಾಳ ವಾಸ್ತವಗಳು ನಮ್ಮನ್ನು ಬಾಧಿಸುವ ಬದಲಾಗಿ ಬರಿ ಅಂಕಿ ಸಂಖ್ಯೆಯ ವಿಷಯಗಳಾದವು. ಎಲ್ಲೋ ಒಂದು ಕಡೆಗೆ ಮನುಷ್ಯ ಭಾಷೆಗಳು ಮತ್ತು ಕಲ್ಪನಾ ಶಕ್ತಿಯು ತಮ್ಮ ಸಾಮರ್ಥ್ಯವನ್ನು ಈ ವಾಸ್ತವಗಳ ಎದುರಿಗೆ ಕಳೆದುಕೊಂಡು ಕೈ ಚೆಲ್ಲಿ ಬಿಟ್ಟವು. ಇಂಥ ಸಮಾಜಗಳನ್ನು ಬದಲಾಯಿಸಬೇಕು ಎನ್ನುವವರು ಕೂಡ ದತ್ತಾಂಶಗಳನ್ನೇ ಅವಲಂಬಿಸಬೇಕಾಯಿತು. ಮಾರ್ಕ್ಸ್‌ನ ಬಂಡವಾಳದಲ್ಲಿ ಇವು ಹೇರಳವಾಗಿವೆ. ವಿಶೇಷವಾಗಿ ಆ ಕೃತಿಯ ಅಡಿಟಿಪ್ಪಣಿಗಳಲ್ಲಿ.

ಇದೆಲ್ಲ ಪ್ರಸ್ತಾಪಿಸಲು ಕಾರಣವೆಂದರೆ, ಇತ್ತೀಚೆಗೆ ಹಸಿವಿನ ಸೂಚ್ಯಂಕದ ಮಾಹಿತಿಯು ಹೊರಬಂದ ಕೂಡಲೇ ಎರಡು ಬಗೆಯ ಪ್ರತಿಕ್ರಿಯೆಗಳು ಬಂದವು. ಮನಸ್ಸುಗಳು ಇನ್ನೂ ಮರಗಟ್ಟಿರದ ಅನೇಕರು ಈ ಸೂಚ್ಯಂಕವು ಸೂಚಿಸುವ ಮಾನವ ದುರಂತದ ಬಗ್ಗೆ ತೀರ ವಿಷಾದದಿಂದ ಪ್ರತಿಕ್ರಿಯಿಸಿದರು. ಅಂಕಿ–ಸಂಖ್ಯೆಗಳ ಆಚೆಗೆ ನಮ್ಮ ಕಣ್ಣಿನ ಎದುರಿಗೆ ಬಂದಿದ್ದು (ಅಥವಾ ಬರಬೇಕಾದದ್ದು) ಪೌಷ್ಠಿಕತೆ ಇಲ್ಲದೆ, ದುರ್ಬಲವಾಗಿ ಕ್ಷೀಣವಾಗಿ ಮುರುಟಿಕೊಂಡ ಪುಟ್ಟಮಕ್ಕಳು. ಗರ್ಭದಲ್ಲಿರುವ ಮಕ್ಕಳಿಗೆ ಜನ್ಮ ಕೊಡಲೂ ಕಷ್ಟವಿರುವ ಅಮ್ಮಂದಿರು. ಅವರಲ್ಲಿ ಪ್ರಾಣ ಕಳೆದುಕೊಳ್ಳುವ ಅನೇಕರು. ಸಹಜವಾದ ಎತ್ತರಕ್ಕೆ ಬೆಳೆಯದ ಅಶಕ್ತ ಮಕ್ಕಳು. ಅಲ್ಲದೆ ಪ್ರತಿ ರಾತ್ರಿ ಊಟವೂ ಇಲ್ಲದೆ ಒಂದು ಲೋಟ ನೀರು ಕುಡಿದು ಮಲಗುವ ಅಪಾರ ಸಂಖ್ಯೆಯ ಜನರು. ಇವರೆಲ್ಲರು ನಮ್ಮಂತೆಯೇ ಮನುಷ್ಯರು, ಸೃಷ್ಠಿಯ ಪವಾಡವೇ ಎಂದುಕೊಳ್ಳುವ ಮನುಷ್ಯ ಜೀವಿಯ ಶರೀರವನ್ನು ಹೊಂದಿದವರು.

ಮಹಾ ಶ್ವೇತಾದೇವಿ ಅವರು 'ಶಿಶು' ಎನ್ನುವ ಭೀಭತ್ಸವಾದ, ಪ್ರಭಾವಿಯಾದ ಕತೆಯೊಂದನ್ನು ಬರೆದಿದ್ದಾರೆ. ಕ್ಷಾಮ, ಬಡತನ ಇವುಗಳೇ ಸಾಮಾನ್ಯವಾಗಿರುವ ಪ್ರದೇಶವೊಂದರಲ್ಲಿ ಸರಕಾರಿ ಅಧಿಕಾರಿಯೊಬ್ಬನು ಹುಡುಕುತ್ತ ಹೋಗಿ ಒಂದು ಕಾಡಿನಂಚಿನಲ್ಲಿ ವಿಚಿತ್ರವೂ, ಭೀಕರವೂ ಆದ ದೃಶ್ಯವನ್ನು ಕಾಣುತ್ತಾನೆ. ವಿಕಾರ ರೂಪದ ಮಕ್ಕಳುಗಳಂತೆ ಕಾಣುವ ಕೆಲವು ವಿಚಿತ್ರ ಜೀವಿಗಳು ಅಲ್ಲಿವೆ. ಭಯಗ್ರಸ್ತನಾದ ಅವನಿಗೆ ಕೊನೆಗೆ ಅರ್ಥವಾಗುವುದೆಂದರೆ ಆ ಜೀವಿಗಳು ಮನುಷ್ಯರೇ. ಆದರೆ ಸರಿಯಾದ ಆಹಾರವಿಲ್ಲದೆ, ಪೌಷ್ಠಿಕತೆ ಇಲ್ಲದೆ ಅವರು ಕುಬ್ಜರಾಗಿ ಬಿಟ್ಟಿದ್ದಾರೆ. ಅವರನ್ನು ಈ ಸ್ಥಿತಿಗೆ ತಂದಿರುವ ಆಡಳಿತ, ಸರ್ಕಾರದ ಪ್ರತಿನಿಧಿಯಾಗಿ ಈ ಅಧಿಕಾರಿ ಇದ್ದಾನೆ. ಈ ಕತೆಯಲ್ಲಿ ಅಂಕಿ ಸಂಖ್ಯೆಯ ಬದಲು ವಾಸ್ತವವೇ ಇದೆ. ಇದು ಹಸಿವಿನ ಸೂಚ್ಯಂಕವು ಸೂಚಿಸುವ ಒಂದು ಸಾಧ್ಯತೆ.

ಆದರೆ ಈ ವಾಸ್ತವವನ್ನು ಅಂಕಿ–ಸಂಖ್ಯೆಯ ಮೂಲಕ ಹೇಳಿದಾಗ ನಮಗೆ ಈ ಭೀಕರ ಸತ್ಯ ಕಾಣುವುದೇ ಇಲ್ಲ. ಇನ್ನೂ ವಿಶೇಷವೆಂದರೆ ಭಾರತ ಸರ್ಕಾರವು ವಿಶ್ವ ಹಸಿವಿನ ಸೂಚ್ಯಂಕವನ್ನೂ ತನ್ನ ವಿರುದ್ಧ ನಡೆಸಲಾಗಿರುವ ಪಿತೂರಿ ಎಂದು ವರ್ಣಿಸಿದೆ. ಆಳುವ ಪಕ್ಷದ ಪರಿವಾರದವರೂ ಇದೇ ಮಾತನ್ನೂ ಆಡುತ್ತಿದ್ದಾರೆ. ಅಲ್ಲದೇ ಭಾರತವು ತನ್ನ ಅವಶ್ಯಕತೆಗಿಂತ ಹೆಚ್ಚು ಧಾನ್ಯ ಬೆಳೆಯುತ್ತಿವೆ ಮತ್ತು ಅದರ ಗೋದಾಮುಗಳು ತುಂಬಿ ತುಳುಕುತ್ತಿವೆ ಎಂದೂ ಹೇಳುತ್ತಿವೆ. ಕೋವಿಡ್ ಕಾಲದಲ್ಲಿಯೂ ಇದನ್ನೇ ಹೇಳಲಾಗಿತ್ತು. ನಾನು ಓದಿರುವ ಎಲ್ಲಾ ವರದಿಗಳ ಪ್ರಕಾರ ಅನೇಕ ವರ್ಷಗಳಿಂದ ಭಾರತದ ಗೋದಾಮುಗಳಲ್ಲಿ ಕೊಳೆಯುವ ಮತ್ತು ಇಲಿಗಳಿಗೆ ಆಹಾರವಾಗುವ ಧಾನ್ಯದ ಪ್ರಮಾಣವೂ ಗಾಬರಿ ಹುಟ್ಟಿಸುವಂತಿದೆ. ಆದರೆ ಸರ್ಕಾರಗಳ ಅಸಾಮರ್ಥ್ಯ, ಅಲಕ್ಷ ಮಾತ್ರವಲ್ಲ ಇಂದಿನ ಪ್ರಭುತ್ವದ ವ್ಯಾಪಾರಿ ಮನೋಭಾವದಿಂದಾಗಿ ಇದೆಲ್ಲವೂ ಆಗುತ್ತಿದೆ. ಹಸಿವಿನಿಂದ ಸಾಯಬಹುದಾದ ಮನುಷ್ಯರನ್ನು ಉಳಿಸುವ ಇರಾದೆ ಸರ್ಕಾರಕ್ಕೆ ಇಲ್ಲ. ಏಕೆಂದರೆ ಅಂಕಿ–ಸಂಖ್ಯೆಗಳಷ್ಟೇ, ಫೈಲುಗಳು, ಕಡತಗಳು, ಆದೇಶಗಳು ಇವುಗಳ ರಾಕ್ಷಸ ವ್ಯವಸ್ಥೆ ಇದೆಯಲ್ಲ! ಈ ಸ್ಥಿತಿಯು ಸುದಾರಣೆ ಆಗದಿದ್ದಲ್ಲಿ ಭವಿಷ್ಯ ಎಷ್ಟು ಕರಾಳವಾಗಬಹುದೆನ್ನುವುದನ್ನೂ ಊಹಿಸಬೇಕಲ್ಲವೆ? ಕೆಲವೇ ದಶಕಗಳಲ್ಲಿ ಜಗತ್ತಿನ ಅತಿ ಹೆಚ್ಚು ಸಂಖ್ಯೆಯ ಮನುಷ್ಯರು ಭಾರತೀಯರೇ ಆಗಿರುತ್ತಾರೆ. ಹಾಗೆ, ಅತಿ ಹೆಚ್ಚು ಸಂಖ್ಯೆಯ ಕಡುಬಡವರು, ಹಸಿವಿನಿಂದ ಬಳಲುವವರೂ ಅವರೇ ಆಗಿರುತ್ತಾರೆ. ಕೆಲವು ವರ್ಷಗಳಲ್ಲಿ ಬಡತನ ರೇಖೆಯ ಕೆಳಗೆ ದೂಡಲ್ಪಟ್ಟ ಅತಿ ಹೆಚ್ಚು ಸಂಖ್ಯೆಯ ಜನರು ಭಾರತೀಯರು. ಮಹಾಶ್ವೇತಾ ದೇವಿಯವರ ಕತೆಯಲ್ಲಿಯಂತೆ ವಿಕಾರರೂಪದ ಜೀವಿಗಳೂ ಇವರೇ ಆಗಬಹುದಲ್ಲವೆ?


ಆದರೆ ಪ್ರಭುತ್ವವು ವಾಸ್ತವಗಳಿಗೆ ಹೆದರಿಕೊಳ್ಳುತ್ತದೆ. ಅನೇಕ ವರ್ಷಗಳಿಂದ ಬಹುಮುಖ್ಯವಾದ ಅಧಿಕೃತವಾದ ದತ್ತಾಂಶಗಳನ್ನು ಸರ್ಕಾರವೂ ಸಾರ್ವಜನಿಕವಾಗಿ ಬಿಡುಗಡೆ ಮಾಡಿಯೇ ಇಲ್ಲ. ಕೋವಿಡ್‌ನಿಂದ ಸತ್ತವರ ಸಂಖ್ಯೆಯ ಬಗ್ಗೆ ಸುಳ್ಳು ಮಾಹಿತಿಯನ್ನು ನೀಡಿದೆ. ಅಂದರೆ ಕೋವಿಡ್ ಕಾಲದಲ್ಲಿ ಸತ್ತವರ ಸಂಖ್ಯೆ ಇಹದಲ್ಲಿಯೂ ಇಲ್ಲ. ಪರದಲ್ಲಿಯೂ ಇಲ್ಲ. ಆದರೆ ಸತ್ತವರ ಕುಟುಂಬದವರಿಗೆ ಸಾವಿನಿಂದ ಆಗಿರುವ ಶಾಶ್ವತವಾದ ಆಘಾತವನ್ನು 'ಭಾರತ್ ಜೋಡೋ' ನಡೆಯಲ್ಲಿ ಒಂದು ಮಗು ಆಕ್ಸಿಜನ್ ಇಲ್ಲದೇ ತೀರಿ ಹೋದ ತನ್ನ ತಂದೆಯ ಬಗ್ಗೆ ರಾಹುಲ್‌ಗಾಂಧಿಗೆ ಹೇಳಿಕೊಂಡ ಮಾತಿನಲ್ಲಿ ನಾವೆಲ್ಲಾ ಕಂಡೆವು.

ಈ ವಿದ್ಯಮಾನಗಳೂ ಅಷ್ಟು ಸರಳವಲ್ಲ. ಪ್ರಭುತ್ವವು ತನ್ನ ಅಸಾಮರ್ಥ್ಯದಿಂದ ಸಮಸ್ಯೆಗಳು ಸುದ್ಧಿಯಾದಾಗ ಮಾಡುವ ಕೆಲಸವೆಂದರೆ ವಾಸ್ತವವನ್ನು ಮರೆಮಾಡುವುದು. ಅಂದರೆ ಆಧುನಿಕ ಜಗತ್ತಿನಲ್ಲಿ ವಾಸ್ತವದ ಅರಿವನ್ನು ಕೊಡುವ ದತ್ತಾಂಶಗಳನ್ನೂ ಬಚ್ಚಿಡುವುದು ಅಥವಾ ಉದ್ದೇಶ ಪೂರ್ವಕವಾಗಿ ತಪ್ಪಾಗಿ ನೀಡುವುದು. ವಿತ್ತ ಮಂತ್ರಿ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು 'ರೂಪಾಯಿ ಬೀಳುತ್ತಿಲ್ಲ; ಡಾಲರ್ ಬಲವಾಗುತ್ತಿದೆ' ಎಂದು ಹೇಳಿದ್ದು ಈ ಹಳೆಯ ತಂತ್ರಗಾರಿಕೆಯ ಒಂದು ಉದಾಹರಣೆ. ಅವರ ಮಾತನ್ನು ಇನ್ನಿಲ್ಲದಂತೆ ಅಣಕಿಸುವ ಸಂದೇಶಗಳನ್ನು ಫೇಸ್‌ಬುಕ್‌ನಲ್ಲಿ ನೋಡಿದಾಗ ಇದೊಂದು ಬೃಹತ್ತಾದ ಅಸಂಗತ ನಾಟಕವೆಂದೆನಿಸಿತು. ಇಂಥದನ್ನು ನಾನು ನೋಡಿದ್ದು ಬೇಂದ್ರೆಯವರ ಕೆಲವು ಪದ್ಯಗಳಲ್ಲಿ ಮತ್ತು ಅವರ ಅಸಂಗತ ನಾಟಕಗಳಲ್ಲಿ. ಬೇಂದ್ರೆ ನಂತರ ಕನ್ನಡ ಕಾವ್ಯವೂ ಇಂಥ ದುರಂತ ಅಸಂಗತತೆ ಬಗ್ಗೆ, ಹಸಿವು ಬಡತನಗಳ ಬಗ್ಗೆ ರೋಷದಿಂದ ಬರೆಯಲೇ ಇಲ್ಲ.

ನಮ್ಮೆದುರಿಗೆ ಇರುವ ಪ್ರಶ್ನೆಯೆಂದರೆ ಈ ವಾಸ್ತವಗಳ ಬಗ್ಗೆ ನಾವು ಬೆಳೆಸಿಕೊಂಡಿರುವ ಆಸೂಕ್ಷ್ಮತೆಯನ್ನು ಬದಲಿಸುವುದು ಹೇಗೆ? ಮನುಷ್ಯರು ಅಂಕಿ ಸಂಖ್ಯೆಗಳಲ್ಲ ಎನ್ನುವುದನ್ನು ಮನದಟ್ಟು ಮಾಡಿಕೊಡುವುದು ಹೇಗೆ? ವಿಚಿತ್ರವೆಂದರೆ ಜಗತ್ತಿನಲ್ಲಿ ಸರ್ವಾಂತರ್ಯಾಮಿಯಾಗಿದ್ದೂ ಅಗೋಚರವಾಗಿರುವುದು ಹಸಿವು ಮತ್ತ ಬಡತನ. ಇಂಥ ಕುರುಡುತನ ನಮ್ಮ ಸಂವೇದನೆಯ ಭಾಗವಾಗಿರುವಂತೆ ಪ್ರಭುತ್ವದ ಅಸ್ತ್ರವೂ ಆಗಿದೆ. ಮಾಧ್ಯಮಗಳು ಉದ್ದೇಶ ಪೂರ್ವಕವಾಗಿ Selective blindness ಅನ್ನು ಆಯ್ಕೆ ಮಾಡಿಕೊಂಡರೆ, ಪ್ರಜೆಗಳು ವಾಸ್ತವವನ್ನು ನೋಡುವ ಕ್ಷಮತೆಯನ್ನು ಕಳೆದುಕೊಂಡು ಬಿಡುತ್ತಾರೆ. ಕಂಪನಿ ನಾಟಕಗಳ ಅರಮನೆ ದೃಶ್ಯಗಳಲ್ಲಿ ರಾಜನು ಮಂತ್ರಿಯನ್ನು ಕೇಳುತ್ತಾನೆ, "ದೇಶದಲ್ಲಿ ಮಳೆ, ಬೆಳೆ ಎಲ್ಲವೂ ಚೆನ್ನಾಗಿದೆಯೇ? ಪ್ರಜೆಗಳು ಸಂತೋಷವಾಗಿದ್ದಾರೆಯೇ" ಎಂದು ಕೇಳಿದಾಗ ಮಂತ್ರಿಯು "ಪ್ರಭುಗಳೇ ಎಲ್ಲವೂ ಚೆನ್ನಾಗಿದೆ. ರಾಜ್ಯದಲ್ಲಿ ಸುಭಿಕ್ಷೆಯು ನೆಲೆಸಿದೆ" ಎಂದು ಹೇಳುತ್ತಿದ್ದನು. ಇಂದಿನ ಪ್ರಭುತ್ವವು ಇದನ್ನು ಬಯಸುತ್ತದೆ. ಮಂತ್ರಿಯ ಬದಲಾಗಿ ಮಾಧ್ಯಮಗಳು ಇಂಥ ಆಶ್ವಾಸನೆಯನ್ನು ಕೊಡುತ್ತಿವೆ.

ಚರಿತ್ರೆಯ ಭೀಕರ ಸತ್ಯವೆಂದರೆ ಈ ವಿದ್ಯಮಾನವು ಹೊಸತಲ್ಲ. ಭಾರತದಲ್ಲಿ ಅತ್ಯಂತ ಭೀಕರವಾದ ಕ್ಷಾಮದಿಂದಾಗಿ ಅನೇಕ ಲಕ್ಷ ಜನರು ಸಾಯುತ್ತಿದ್ದಾಗ ಬ್ರಿಟಿಷ್ ಸರ್ಕಾರವೂ ಕಂದಾಯವನ್ನು ತೆರಿಗೆಯನ್ನೂ ಹೆಚ್ಚಿಸಿ ಅತಿ ಹೆಚ್ಚು ಹಣ ಶೇಖರಿಸಿ ದಾಖಲೆಯನ್ನೇ ಮಾಡಿತು. ನೆನಪಿರಬೇಕು! ಹೀಗೆ ಕಂದಾಯ, ಕರವಸೂಲಿಯನ್ನು ಮಾಡಿದವರು ಬ್ರಿಟಿಷ್ ಸರ್ಕಾರದ ಸೇವಕರಾದ ಭಾರತೀಯರೇ. ಅವರಿಗೆ ಒಂದು ನಿಗದಿತ ಸಂಖ್ಯೆಯ ಕಂದಾಯ, ಕರಗಳನ್ನು ವಸೂಲಿ ಮಾಡಬೇಕಿತ್ತು. ಆಗಲೂ ಸಂಖ್ಯೆಗಳದೇ ಕಾರುಬಾರು, ಮನುಷ್ಯರು ಕಾಣಲೇ ಇಲ್ಲ. ಕಾಣದಿದ್ದರ ಕುರುಹಾಗಿ ಕೆಲವು ಭೀಕರವಾದ ಫೋಟೋಗಳಿವೆ. ಫೋಟು ಮಹಾಶ್ವೇತಾದೇವಿಯವರ ಕತೆಯ ದೃಶ್ಯದಂತಿದೆ.






ಕೃಪೆ: ಸತೀಶ್ ಆಚಾರ್ಯ




# ಕೃಷಿ ನಾಶಕ ನೀತಿಗಳ ವಿರುದ್ಧ ರೈತ ಆಂದೋಲನ
# ರೈತ ರಾಜ್ಯ ಸಮ್ಮೇಳನದ ಕರೆ

ಕಂಪನಿ ಕೃಷಿ ತೊಲಗಿಸಿ, ರೈತಾಪಿ ಕೃಷಿ ಸಂರಕ್ಷಿಸಿ ಎಂಬ ಘೋಷಣೆ ಅಡಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ(KPRS) 17ನೇ ರಾಜ್ಯ ಸಮ್ಮೇಳನ ಕಾಮ್ರೇಡ್ ಮಾರುತಿ ಮಾನ್ಪಡೆ ವೇದಿಕೆ, ಕಾಂ. ಅಶೋಕ್ ಮ್ಯಾಗೇರಿ ದ್ವಾರ, ಕಾಂ. ಕೆ ವರದರಾಜನ್ ನಗರ ಎಂದು ಹೆಸರಿಸಲಾಗಿದ್ದ ರಾಯಚೂರಿನ ಹರ್ಷಿತ ಗಾರ್ಡನ್ ನಲ್ಲಿ 14 –16 ಅಕ್ಟೋಬರ್ 2022 ರಂದು ಮೂರು ದಿನಗಳ ಕಾಲ ಅತ್ಯಂತ ಯಶಸ್ವಿಯಾಗಿ ಜರುಗಿತು.

ಪ್ರತಿ ಮೂರು ವರ್ಷಗಳಿಗೆ ಒಮ್ಮೆ ನಡೆಯಬೇಕಿದ್ದ ರೈತ ಸಂಘದ ಸಮ್ಮೇಳನವು ಕೋವಿಡ್–19 ಕಾರಣದಿಂದ ಐದೂವರೆ ವರ್ಷಗಳ ನಂತರ ನಡೆಯುತ್ತಿದೆ. 2017 ಏಪ್ರಿಲ್ ನಲ್ಲಿ 16ನೇ ರಾಜ್ಯ ಸಮ್ಮೇಳನ ಹುಬ್ಬಳ್ಳಿಯಲ್ಲಿ ಜರುಗಿತ್ತು.

23 ಜಿಲ್ಲೆಗಳಿಂದ 30 ಮಹಿಳಾ ಪ್ರತಿನಿಧಿಗಳು ಸೇರಿದಂತೆ 231 ಪ್ರತಿನಿಧಿಗಳು ಸುಮಾರು ಒಂದುವರೆ ಲಕ್ಷ ಸದಸ್ಯತ್ವವನ್ನು ಪ್ರತಿನಿಧಿಸಿ ಸಮ್ಮೇಳನದಲ್ಲಿ ಹಾಜರಿದ್ದರು. ಕರಡು ವರದಿ ಮೇಲಿನ ಚರ್ಚೆಯಲ್ಲಿ 35 ಪ್ರತಿನಿಧಿಗಳು ಮಾತನಾಡಿದರು. ರಾಜ್ಯದ ಕೃಷಿ ರಂಗದ ಪರಿಸ್ಥಿತಿ ರೈತ–ಕೃಷಿ ಕೂಲಿಕಾರರ ಹಾಗೂ ಗ್ರಾಮೀಣ ಜನತೆಯ ಜೀವನದ ಪರಿಸ್ಥಿತಿ ಮತ್ತು ರೈತ ಸಂಘಟನೆಯನ್ನು ಬಲಪಡಿಸಬೇಕಾದ ಅಗತ್ಯದ ಕುರಿತ ಒತ್ತು ಪ್ರಮುಖವಾಗಿ ಚರ್ಚೆಯಲ್ಲಿ ಕಂಡು ಬಂದಿತು.

2017 ರ ನಂತರ ರಾಜ್ಯ ಹಾಗೂ ದೇಶದಲ್ಲಿ ರೈತರ ಪರಿಸ್ಥಿತಿ ಮತ್ತಷ್ಟು ಶೋಚನೀಯವಾಗಿದೆ. ರೈತರ ಆತ್ಮಹತ್ಯೆಗಳು ದುಪ್ಪಟ್ಟಾಗಿವೆ. ಕೃಷಿ ಮಾಡುವ ವೆಚ್ಚ ಅಧಿಕಗೊಂಡಿದೆ. ಎಲ್ಲಾ ರೀತಿಯ ಕೃಷಿ ಲಾಗುವಾಡುಗಳು ಈ ಅವಧಿಯಲ್ಲಿ ತೀವ್ರವಾದ ಬೆಲೆ ಏರಿಕೆ ಕಂಡಿವೆ. ವಿಶೇಷವಾಗಿ ರಸಗೊಬ್ಬರ ಹಾಗೂ ಡೀಸೆಲ್ ದರಗಳು ಹಿಂದೆಂದೂ ಕಾಣದಷ್ಟು ಪ್ರಮಾಣದಲ್ಲಿ ಹೆಚ್ಚಳಗೊಂಡಿದೆ. ಅದೇ ಸಂದರ್ಭದಲ್ಲಿ ಯಾವುದೇ ಪರಿಣಾಮಕಾರಿ ಬೆಂಬಲ ಬೆಲೆ ವ್ಯವಸ್ಥೆ ಇಲ್ಲದೆ ಕೃಷಿ ಉತ್ಪನ್ನಗಳು ನಷ್ಟದಲ್ಲಿ ಮಾರಾಟವಾಗಿವೆ. ಸಮಗ್ರ ಕೃಷಿ ಉತ್ಪಾದನೆ ವೆಚ್ಚಕ್ಕೆ ಹೋಲಿಸಿದರೆ ಯಾವುದೇ ಕೃಷಿ ಬೆಳೆ ವಿಶೇಷವಾಗಿ ಆಹಾರದ ಧಾನ್ಯಗಳು ಶೇ.20 ರಿಂದ ಶೇ.80 ರಷ್ಟು ನಷ್ಟಕ್ಕೆ ಈಡಾಗಿವೆ. ಈ 5 ವರ್ಷಗಳಲ್ಲಿ ಪ್ರತಿವರ್ಷ ಅತಿವೃಷ್ಟಿ ಹಾಗೂ ಬರಗಾಲ ಬೆನ್ನು ಬಿಡದೆ ಕಾಡಿದೆ. ರಾಜ್ಯದ ಕೆಲವು ಪ್ರದೇಶಗಳಲ್ಲಿ ಅತಿವೃಷ್ಟಿ ಬೆನ್ನಲ್ಲೇ ಬರಗಾಲ ಬಂದರೆ ಮತ್ತೆ ಕೆಲವು ಪ್ರದೇಶಗಳಲ್ಲಿ ಸಂಪೂರ್ಣ ಬರಗಾಲ, ಸಂಪೂರ್ಣ ಅತಿವೃಷ್ಟಿ ಈ ರೀತಿ ಆಗಿದೆ. ಒಟ್ಟಾರೆ ಈ ಐದು ವರ್ಷಗಳು ರಾಜ್ಯವನ್ನು ಪ್ರಾಕೃತಿಕ ವಿಕೋಪಕ್ಕೆ ಸಿಲುಕಿಸಿದೆ.

ಇಂತಹ ಒಂದು ಧಾರುಣ ಪರಿಸ್ಥಿತಿಯಲ್ಲಿ ಇರುವ ರೈತರ ಜೀವನದ ಮೇಲೆ 2020 ಹಾಗೂ 2021 ರ ಎರಡು ವರ್ಷಗಳ ಕಾಲದ ಕೋವಿಡ್ ಲಾಕ್ ಡೌನ್ ರೈತ ಸಮುದಾಯದ ಬೆನ್ನುಮೂಳೆಯನ್ನೇ ಮುರಿದು ಹಾಕಿತು. ಹಣ್ಣು, ತರಕಾರಿ, ಹೂವು ಮುಂತಾದ ತೋಟಗಾರಿಕಾ ಉತ್ಪನ್ನಗಳು ಹೊಲ–ಗದ್ದೆಗಳಲ್ಲೇ ಶೇಕಡ 100ರಷ್ಟು ಕೊಳೆತು ಹೋದವು. ಲಾಕ್ಡೌನ್ ಹೆಸರಿನಲ್ಲಿ ಕೃಷಿ ಉತ್ಪನ್ನಗಳ ಮಾರುಕಟ್ಟೆಯನ್ನೇ ಬಂದ್ ಮಾಡಿದ್ದರಿಂದ ರೈತರು ಅಪಾರ ನಷ್ಟಕ್ಕೆ ತುತ್ತಾದರು. ರಾಜ್ಯದ ಪ್ರತಿ ಹೊಲಗದ್ದೆಗಳಲ್ಲಿ ಕೋಟ್ಯಾಂತರ ರೂಗಳ ಕೃಷಿ ಉತ್ಪನ್ನಗಳು ಮಣ್ಣು ಪಾಲಾಯಿತು.

ಆದರೆ ಈ ಎಲ್ಲಾ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ನೆರವಿಗೆ ಅರ್ಥಪೂರ್ಣ ವೈಜ್ಞಾನಿಕ ಪರಿಹಾರಗಳನ್ನು ಒದಗಿಸಲು ಧಾವಿಸಲಿಲ್ಲ.

2019ರ ಅತಿವೃಷ್ಟಿಗೆ ಮನೆ ಕಳೆದುಕೊಂಡವರು, ಬೆಳೆ ಕಳೆದುಕೊಂಡವರು ಲಕ್ಷಾಂತರ ಜನ, ಈಗಲೂ ಬೀದಿಯಲ್ಲಿ ಇದ್ದಾರೆ. ಆನಂತರ ಪ್ರತಿವರ್ಷ ಪ್ರಕೃತಿ ವಿಕೋಪ ಸಂತ್ರಸ್ತರ ಸಂಖ್ಯೆ ಏರಿಕೆಯಾಗುತ್ತಲೇ ಇದೆ ಈ ವರ್ಷವೂ ಕೂಡ ಮಾರ್ಚ್ ನಲ್ಲಿ ಆರಂಭವಾದ ಮಳೆ ಅಕ್ಟೋಬರ್ ಆದರೂ ಮುಂದುವರಿಯುತ್ತಿದೆ. ಕಳಪೆ ನಿರ್ವಹಣೆಯಿಂದಾಗಿ ಮೊದಲೇ ದುಸ್ಥಿತಿಯಲ್ಲಿದ್ದ ಕೆರೆ ಕಾಲುವೆಗಳು ಒಡೆದು ಬಹುತೇಕ ಕಡೆ ಹಸಿ ಬರಗಾಲ ಸೃಷ್ಟಿಯಾಗಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ನೋಟು ರದ್ಧತಿ, ಜಿಎಸ್‌ಟಿ ಈ ಎರಡೂ ಕ್ರಮಗಳು ರೈತರನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಪ್ರತಿ ವರ್ಷ ಜಿಎಸ್‌ಟಿ ಬಲೆ ವಿಸ್ತರಿಸುತ್ತಾ ಇದೆ. ಕೃಷಿ ಉತ್ಪನ್ನಗಳ ಮೇಲೆ ಶೇಕಡ 5 ರಿಂದ ಶೇಕಡ 18 ರವರೆಗೆ ಜಿಎಸ್‌ಟಿ ತೆರಿಗೆ ವಿಧಿಸಲಾಗುತ್ತಿದೆ. ಜಿಎಸ್‌ಟಿ ತೆರಿಗೆ ಪದ್ಧತಿ ಜಾರಿ ಮಾಡುವಾಗ ಕೃಷಿ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವುದಿಲ್ಲ ಎಂದು ನರೇಂದ್ರ ಮೋದಿ ಸಂಸತ್ತಿನಲ್ಲಿ ವಚನ ನೀಡಿದ್ದರು. ಆದರೆ ಈಗ ಬೆಲ್ಲ, ಹಾಲಿನ ಉತ್ಪನ್ನಗಳು, ಅಕ್ಕಿ ಹೀಗೆ ಎಲ್ಲದಕ್ಕೂ ಜಿಎಸ್‌ಟಿ ತೆರಿಗೆ ವಿಧಿಸಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ಕೃಷಿಕರನ್ನು ಕೃಷಿ ವಲಯದಿಂದ ಹೊರ ಹಾಕುವ ರೀತಿಯಲ್ಲೇ ಜಿಎಸ್‌ಟಿ ತೆರಿಗೆ ವಿಧಿಸಲಾಗಿದೆ. ಉದಾಹರಣೆಗೆ ಅರ್ಧ ಲೀಟರ್, ಒಂದು ಲೀಟರ್ ಹಾಲಿಗೆ ಜಿಎಸ್‌ಟಿ ವಿಧಿಸಲಾಗಿದೆ. ಅದೇ 25 ಲೀಟರ್ ಹಾಲಿನ ಪಾಕೆಟ್ಗೆ ಜಿಎಸ್‌ಟಿ ವಿನಾಯಿತಿ ನೀಡಲಾಗಿದೆ.

ಒಂದು ಕಡೆ ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೃಷಿ ರಂಗದ ಮೇಲೆ ರೈತಾಪಿ ಜೀವನದ ಮೇಲೆ ನವ ಉದಾರಿಕರಣ ಧೋರಣೆಗಳ ವಜ್ರಾಯುಧದಿಂದ ಬಲವಾದ ಪ್ರಹಾರ ನಡೆಸುತ್ತಾ, ಕೋವಿಡ್ ಮತ್ತು ಅತಿವೃಷ್ಟಿ, ಬರಗಾಲಕ್ಕೆ ಸಿಲುಕಿದ ರೈತಾಪಿ ಸಮುದಾಯಕ್ಕೆ ಯಾವುದೇ ಅರ್ಥಪೂರ್ಣ ಪರಿಹಾರ ಒದಗಿಸದೇ ಸಂಕಷ್ಟಕ್ಕೆ ಸಿಲುಕಿಸಲಾಗಿದೆ. ನಷ್ಟದ ಮೇಲೆ ನಷ್ಟ ಅನುಭವಿಸುತ್ತಿರುವ ಕೃಷಿಕರನ್ನು ಕೃಷಿಯಿಂದ ಒಕ್ಕಲೆಬ್ಬಿಸಲು ಸರಿಯಾದ ಸಮಯವೆಂದು ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಭಾವಿಸಿ ಹಲವು ಕೃಷಿ ನಾಶಕ ರೈತ ವಿರೋಧಿ ಕಾನೂನುಗಳನ್ನು ಜಾರಿಗೆ ತಂದಿದೆ. ಹಲವಾರು ಪ್ರತಿಭಟನೆ–ವಿರೋಧಗಳ ಮಧ್ಯೆಯೂ ಈ ಕಾನೂನುಗಳನ್ನು ಸಮರ್ಥಿಸಿಕೊಳ್ಳುತ್ತಿದೆ ಎಂದು ಸಮ್ಮೇಳನ ಈ ಕಾನೂನುಗಳ ಕಾರ್ಪೊರೇಟ್ ಪರ ಹೂರಣವನ್ನು ವಿವರವಾಗಿ ಚರ್ಚಿಸಿದೆ.

## ಬೆಳೆವಾರು ಬೇಡಿಕೆಗಳಿಗೆ ರೈತ ಸಮ್ಮೇಳನದ ಬಲ

ಪ್ರತಿಯೊಂದು ಬೆಳೆಗೆ ಅದರದ್ದೇ ಆದ ನಿರ್ದಿಷ್ಟ ಸಮಸ್ಯೆಗಳು, ನಿರ್ದಿಷ್ಟ ಬೇಡಿಕೆಗಳಿದ್ದು, ರೈತರನ್ನು ವಿಶಾಲವಾಗಿ ಅಣಿ ನೆರಸಲು ಬೆಳೆವಾರು ಬೇಡಿಕೆಗಳಿಗಾಗಿ ನಿರ್ದಿಷ್ಟ ರೈತರನ್ನು ಸಂಘಟಿಸುವ ಅಖಿಲ ಭಾರತ ಕಿಸಾನ್ ಸಭಾ ಹಿಂದಿನ ಸಮ್ಮೇಳನಗಳ ಮಹತ್ವದ ಕಣ್ಣೋಟದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರೇಷ್ಮೆ ಬೆಳೆಗಾರರ ಸಂಘ, ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆದಾರರ ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ, ಕರ್ನಾಟಕ ರಾಜ್ಯ ಹಾಲು ಉತ್ಪಾದಕ ರೈತರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಕರ್ನಾಟಕ ರಾಜ್ಯ ಕಾಫಿ ಬೆಳಗಾರರ ಸಂಘಗಳು ಈಗಾಗಲೇ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿವೆ.

ಈ ಎಲ್ಲಾ ಬೆಳೆವಾರು ಸಂಘಗಳ ಬೇಡಿಕೆಗಳನ್ನು ಹಾಗೂ ತೊಗರಿ, ಲಿಂಬೆ, ತಂಬಾಕು, ಹತ್ತಿ ಸೇರಿದಂತೆ ಎಲ್ಲಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಒದಗಿಸಲು ಬೆಳೆವಾರು ಬೋರ್ಡ್ ಗಳನ್ನು ಸ್ಥಾಪಿಸಿ ಬಲಪಡಿಸಲು ಹಾಗೂ ಕಾರ್ಪೊರೇಟ್ ಖರೀದಿ ಶೋಷಣೆಯನ್ನು ನಿಲ್ಲಿಸಲು ಸಮ್ಮೇಳನ ಆಗ್ರಹಿಸಿದೆ.

ಕರ್ನಾಟಕ ಪ್ರಾಂತ ರೈತ ಸಂಘ ನೇತೃತ್ವ ನೀಡುತ್ತಿರುವ ಬೆಳೆವಾರು ಸಂಘಗಳನ್ನು ಬಲಪಡಿಸಲು, ಎಲ್ಲಾ ಬೆಳೆಗಳಿಗೂ ಬೆಳೆಗಾರರ ಸಂಘಗಳನ್ನು ಸ್ಥಾಪಿಸಲು ಸಮ್ಮೇಳನ ಕರೆ ನೀಡಿದೆ.

## ಕಾರ್ಪೊರೇಟ್ ಗೆ ಬಲಿ ಕೊಡಲು ಹಾಕಿರುವ ಕೃಷಿ ನಾಶಕ ಕಾನೂನುಗಳ ಬೇಲಿ ಕಿತ್ತೊಗೆಯಲು ಸಮ್ಮೇಳನ ದೃಢಸಂಕಲ್ಪ

ದೇಶದಾದ್ಯಂತ ಬಲವಂತದ ಭೂ ಸ್ವಾಧೀನದ ವಿರುದ್ಧ ಹಾಗೂ ಬ್ರಿಟಿಷ್ ವಸಹಾತುಶಾಯಿ ಆಳ್ವಿಕೆ ಕಾಲದ ಭೂ ಸ್ವಾಧೀನ ಕಾಯ್ದೆ 1894 ಅನ್ನು ಬದಲಿಸಲು ನಡೆದ ಜನಪ್ರಿಯ ರೈತ ಹೋರಾಟದ ಫಲವಾಗಿ ಭೂಸ್ವಾಧೀನ ಕಾಯ್ದೆ 2013 ಯುಪಿಎ ಅವಧಿಯಲ್ಲಿ ಜಾರಿಗೆ ಬಂತು. 2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ 2013ರ ಭೂಸ್ವಾಧೀನ ಕಾಯ್ದೆ ಬದಲಿಸಲು 9 ಬಾರಿ ಸುಗ್ರೀವಾಜ್ಞೆ ಮೂಲಕ ಪ್ರಯತ್ನಿಸಿದರೂ ಅಖಿಲ ಭಾರತ ಕಿಸಾನ್ ಸಭಾದ ಮುತುವರ್ಜಿಯಿಂದ ನಡೆದ ಭೂಮಿ ಅಧಿಕಾರ ಆಂದೋಲನದ ಪರಿಣಾಮವಾಗಿ ಕಾಯ್ದೆ ಆಗಲಿಲ್ಲ. ಆದರೆ ರಾಜ್ಯ ಸರ್ಕಾರಗಳ ಮೂಲಕ ರೈತ ವಿರೋಧಿ ಭೂ ಸ್ವಾಧೀನ ಕಾಯ್ದೆಯನ್ನು ಜಾರಿಗೊಳಿಸಿದೆ.

ರೈತರ ಒಪ್ಪಿಗೆ ಇಲ್ಲದೇ ಬಲವಂತವಾಗಿ ಭೂಮಿ ಕಸಿದುಕೊಳ್ಳಲು ಅನುಕೂಲವಾಗುವಂತಹ 2013ರ ಕಾಯ್ದೆಗೆ ತದ್ವಿರುದ್ಧವಾಗಿ, ಕರ್ನಾಟಕ ರಾಜ್ಯ ಭೂಸ್ವಾಧೀನ ಕಾಯ್ದೆ 2019 ಅನ್ನು ರಾಜ್ಯ ಸರ್ಕಾರಜಾರಿಗೆ ತಂದಿದೆ. ಕೋವಿಡ್ ಲಾಕ್‌ಡೌನ್ ನ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡು ಸುಗ್ರೀವಾಜ್ಞೆ ಮೂಲಕ ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ, ಆದರೆ ಆನಂತರ ವರ್ಷಗಟ್ಟಲೆ ನಡೆದ ಐತಿಹಾಸಿಕ ದೆಹಲಿ ರೈತ ಹೋರಾಟದ ಫಲವಾಗಿ ರದ್ದಾದ ರೈತರ ಉತ್ಪನ್ನಗಳ ಮಾರಾಟ ಹಾಗೂ ವಾಣಿಜ್ಯ ಕಾಯ್ದೆ 2020, ಬೆಲೆ ಭರವಸೆ ಹಾಗೂ ಕೃಷಿ ಸೇವೆಗಳ ಕುರಿತ ರೈತ ಒಪ್ಪಂದ ಕಾಯ್ದೆ 2020 ರ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಜಾರಿಗೆ ತಂದ ಕರ್ನಾಟಕ ರಾಜ್ಯ ಭೂ ಸುಧಾರಣೆ ತಿದ್ದುಪಡಿ ಕಾನೂನು 2020, ಕರ್ನಾಟಕ ಎಪಿಎಂಸಿ ತಿದ್ದುಪಡಿ ಕಾಯ್ದೆ 2020 ಗಳನ್ನು ರದ್ದುಗೊಳಿಸದೇ ಉಳಿಸಿಕೊಂಡಿದೆ. ಎಲ್ಲಾ ಕೃಷಿ ಪಂಪ್ಸೆಟ್ಗಳಿಗೆ ಪ್ರಿಪೇಯ್ಡ್ ಮೀಟರ್ ಅಳವಡಿಸುವ, ಉಚಿತ–ರಿಯಾಯಿತಿ ವಿದ್ಯುತ್ ಸೌಲಭ್ಯ ರದ್ದುಪಡಿಸಿ, ಆ ಮೂಲಕ ರಾಜ್ಯದ 40 ಲಕ್ಷ ಪಂಪ್ ಸೆಟ್ ಬಳಕೆದಾರರನ್ನು ದಿವಾಳಿಯಾಗಿಸುವ ವಿದ್ಯುತ್ ತಿದ್ದುಪಡಿ ಮಸೂದೆ 2022 ಸಂಸತ್ತಿನಲ್ಲಿ ಮಂಡನೆಯಾಗಿದೆ. ಈ ಮಸೂದೆ ಕಾನೂನಾಗುವ ಮೊದಲೇ ನೀತಿ ಆಯೋಗದ ಸೂಚನೆ ಮೇರೆಗೆ ಈ ಕಾಯ್ದೆ ಜಾರಿಗೆ ಎಲ್ಲಾ ಪ್ರಯತ್ನಗಳನ್ನು ಬಿಜೆಪಿ ರಾಜ್ಯ ಸರ್ಕಾರ ನಡೆಸುತ್ತಿದೆ.

ಇದರ ಜೊತೆಗೆ ರೈತಾಪಿ ಹೈನುಗಾರಿಕೆಯನ್ನು ಸಂಪೂರ್ಣ ನಾಶ ಮಾಡಲು ಹೈನುಗಾರಿಕೆ ಹಾಗೂ ದನದ ಮಾಂಸ ವಹಿವಾಟಿನಲ್ಲಿ ಕಾರ್ಪೊರೇಟ್ ಕಂಪನಿಗಳನ್ನು ಉತ್ತೇಜಿಸಲು ಗೋ ಹತ್ಯೆ ನಿಷೇಧದ ನೆಪದಲ್ಲಿ ಜಾನುವಾರು ಸಂರಕ್ಷಣೆ ಹಾಗೂ ಹತ್ಯೆ ನಿಷೇಧ ಕಾಯ್ದೆಯನ್ನು ಜಾರಿ ಮಾಡಿ ಸಂಘ ಪರಿವಾರದ ಪುಂಡರಿಗೆ ಕಾನೂನು ಜಾರಿ ಮಾಡುವ ಅಧಿಕಾರ ನೀಡಿದೆ.

ಈ ಎಲ್ಲಾ ಕಾನೂನುಗಳು ಒಂದಕ್ಕೊಂದು ಅಂತರ್ ಸಂಬಂಧ ಇರುವ, ಒಟ್ಟಾರೆಯಾಗಿ ರಾಜ್ಯದ ರೈತ ಸಮುದಾಯ ದಲ್ಲಿ 80ರಷ್ಟು ಇರುವ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಕೃಷಿ ರಂಗದಿಂದ ಒಕ್ಕಲೆಬ್ಬಿಸುವ ಹಾಗೂ ದಿವಾಳಿಯಾಗಿಸುವ ದುರುದ್ದೇಶದ ಕಾಯ್ದೆಗಳಾಗಿವೆ.

ಕಾರ್ಪೊರೇಟ್ ಪಕ್ಷಪಾತವೇ ಹೂರಣವಾಗಿರುವ ರೈತಾಪಿ ಜೀವನದ ನಾಶವೇ ಗುರಿಯಾಗಿರುವ, ಕರ್ನಾಟಕ ರಾಜ್ಯ ಭೂ ಸ್ವಾಧೀನ ಕಾಯ್ದೆ 2019, ಕರ್ನಾಟಕ ರಾಜ್ಯ ಭೂ ಸುಧಾರಣೆ ತಿದ್ದುಪಡಿ ಕಾಯ್ದೆ 2020, ಕರ್ನಾಟಕ ರಾಜ್ಯ ಎಪಿಎಂಸಿ ತಿದ್ದುಪಡಿ ಕಾಯ್ದೆ 2020, ವಿದ್ಯುತ್ ತಿದ್ದುಪಡಿ ಮಸೂದೆ 2022 ಇವುಗಳನ್ನು ರೈತಾಪಿ ಬೇಸಾಯವನ್ನು ಕಾರ್ಪೊರೇಟ್ ಕಂಪನಿಗಳಿಗೆ ಬಲಿ ಕೊಡಲು ರೈತರಿಗೆ ಹಾಕಿರುವ ಬೇಲಿಗಳು ಎಂದು ಸಮ್ಮೇಳನ ವಿಶ್ಲೇಷಿಸಿ, ಈ ಕೃಷಿ ನಾಶಕ ಕಾನೂನುಗಳನ್ನು ಕಿತ್ತೊಗೆಯುವುದಾಗಿ ದೃಢಸಂಕಲ್ಪ ವ್ಯಕ್ತಪಡಿಸಿದೆ.

# ರಸ್ತೆ ಟೋಲ್ ಸಂಗ್ರಹ ಮತ್ತು ಎಲ್‌ಪಿಜಿ ನೀತಿಗಳು



ಸಿದ್ಧಯ್ಯ ಕೆ.

ಅಕ್ರಮವಾಗಿ ನಿರ್ಮಿಸಿ ಬಳಕೆದಾರರಿಂದ ಶುಲ್ಕ ವಸೂಲಿ ಮಾಡುತ್ತಿರುವ ಸುರತ್ಕಲ್ ಟೋಲ್ ಪ್ಲಾಜಾ ವಿರುದ್ಧದ ಹೋರಾಟದಿಂದಾಗಿ ಇಂದು ಹೆದ್ದಾರಿಗಳಲ್ಲಿ ಟೋಲ್ ವಸೂಲಿ ಕುರಿತು ಜನರು ಮಾತನಾಡತೊಡಗಿದ್ದಾರೆ. ಅಲ್ಲಿನ ಹೋರಾಟದಿಂದಾಗಿ ಸುರತ್ಕಲ್ ಟೋಲ್ ಪ್ಲಾಜಾ ತೆರವುಗೊಳಿಸಲೇ ಬೇಕಾದ ಅನಿವಾರ್ಯತೆ ಬಂದೇ ಬರುತ್ತದೆ. ಇದರಿಂದ ಆ ವ್ಯಾಪ್ತಿಯಲ್ಲಷ್ಟೇ ರಸ್ತೆ ಬಳಕೆ ಮಾಡುವ ಸ್ಥಳೀಯರು ಟೋಲ್ ಕೊಡುವುದು ತಪ್ಪುತ್ತದೆ ವಿನಃ, ಸಂಪೂರ್ಣವಾಗಿ ಶುಲ್ಕದಿಂದ ವಿನಾಯ್ತಿ ಸಿಗಲಾರದು. ಅಲ್ಲಿನ ನಿವಾಸಿಗಳು ಮುಂದಿನ ಮತ್ತು ಹಿಂದಿನ ಎರಡು ಸಕ್ರಮ ಟೋಲ್ ಪ್ಲಾಜಾ ದಾಟಿ ಪ್ರಯಾಣ ಮಾಡುವಂತಿದ್ದರೆ ಟೋಲ್ ಶುಲ್ಕದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಯಾವುದೇ ಒಂದು ಟೋಲ್ ಹಾದು ಹೋದರೆ, ಅವರು ಕಡಿಮೆ ದೂರದ ರಸ್ತೆ ಬಳಕೆ ಮಾಡಿದರೂ ಸಹ ಮುಂದಿನ ಟೋಲ್ ವರೆಗಿನ 60 ಕಿಮೀ ದೂರದ ರಸ್ತೆಗೆ ಶುಲ್ಕ ಕಟ್ಟಲೇಬೇಕಾಗುತ್ತದೆ.

**ಸರ್ಕಾರ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ;**

ಸರ್ಕಾರ ಜನರಿಂದ ಹಲವು ರೀತಿಯ ತೆರಿಗೆ ಪಡೆಯುತ್ತಿದೆ. ವಾಣಿಜ್ಯ ವಾಹನಗಳ ಮೇಲೆ ಪ್ರತಿ ವರ್ಷ ಅಥವ ಮೂರು ತಿಂಗಳಿಗೊಮ್ಮೆ ರಸ್ತೆ ತೆರಿಗೆ ವಸೂಲಿಮಾಡುತ್ತದೆ. ಈ ರೀತಿ ವಸೂಲಿ ಮಾಡುವ ತೆರಿಗೆಯ ಮೊತ್ತ ವರ್ಷಕ್ಕೆ ಅಂದಾಜು ಮೂರರಿಂದ ನಾಲ್ಕು ಸಾವಿರ ಕೋಟಿ ರೂಪಾಯಿಗಳಷ್ಟಾಗುತ್ತದೆ. ಮತ್ತು ಖಾಸಗಿ ಬಳಕೆಯ ವಾಹನಗಳ ಮೇಲೂ ವಾಹನ ಖರೀದಿಸುವ ಸಂದರ್ಭದಲ್ಲಿ ತೆರಿಗೆ ವಿಧಿಸಲಾಗುತ್ತಿದೆ. ಜಿಎಸ್‌ಟಿ ಮತ್ತು ವಿವಿಧ ರೂಪದಲ್ಲಿ ಜನರು ಕೊಳ್ಳುವ ವಸ್ತುಗಳ ಮೇಲೆ ತೆರಿಗೆ, ಪಡೆಯುವ ಸೇವೆಗಳ ಮೇಲೆ ತೆರಿಗೆ ಕಟ್ಟುತ್ತೇವೆ. ಆದಾಯ ತೆರಿಗೆ, ವೃತ್ತಿ ತೆರಿಗೆ ವಸೂಲು ಮಾಟಲಾಗುತ್ತದೆ. ಇದಲ್ಲದೆ ಸಾರ್ವಜನಿಕ ಉದ್ಯಮಗಳಿಂದ ಸರ್ಕಾರಕ್ಕೆ ಬರುವ ಆದಾಯ, ಪ್ರಕೃತಿ ಸಂಪತ್ತಿನಿಂದ ಬರುವ ಆದಾಯ, ಕಾರ್ಪೊರೇಟ್ ತೆರಿಗೆಯಿಂದ ಬರುವ ಆದಾಯ..... ಹೀಗೆ ಹಲವು ರೀತಿಯಲ್ಲಿ ಸರ್ಕಾರಕ್ಕೆ ಆದಾಯ ಬರುತ್ತದೆ. ಈ ರೀತಿ ತೆರಿಗೆಗಳು ಮತ್ತ ಇತರೆ ಮೂಲಗಳಿಂದ ಬರುವ ಹಣದಿಂದ ರಸ್ತೆ ಸೇರಿದಂತೆ ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ಶುದ್ಧ ನೀರು ಇನ್ನಿತರೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವುದು ಸರ್ಕಾರದ ಜವಾಬ್ಧಾರಿ. ಆದರೆ, ಇತ್ತೀಚಿನ ವರ್ಷಗಳಲ್ಲಿ ಮುಕ್ತ ಆರ್ಥಿಕ ನೀತಿಗಳ ಭಾಗವಾಗಿ ಇವುಗಳೆಲ್ಲವನ್ನು ಖಾಸಗಿಯವರಿಗೆ ಒಪ್ಪಿಸುವ ಮೂಲಕ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳತೊಡಗಿದೆ. ದೇಶದ ಅಭಿವೃದ್ಧಿಯ ವೇಗ ಹೆಚ್ಚಾಗಬೇಕಾದರೆ ಖಾಸಗಿ ಬಂಡವಾಳದ ಅಗತ್ಯವಿದೆ ಎನ್ನುತ್ತ ಆಳುವವರು ಇದನ್ನು ಸಮರ್ಥನೆ ಮಾಡಿಕೊಳ್ಳುತ್ತಾರೆ. ಸರ್ಕಾರದ ಇಂತಹ ನೀತಿಗಳಿಂದಾಗಿ ಜನರು ಶುಲ್ಕ ಕೊಟ್ಟು ರಸ್ತೆ ಬಳಕೆ ಮಾಡಬೇಕಾದ ಅನಿವಾರ್ಯ ಸ್ಥಿತಿಗೆ ದೂಡಲ್ಪಟ್ಟಿದ್ದಾರೆ. ಕುಡಿಯುವ ಶುದ್ಧ ನೀರಿಗೂ ಹಣ ಕೊಡಬೇಕು. ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನೂ ಖಾಸಗಿಯವರಿಗೆ ಒಪ್ಪಿಸತೊಡಗಿದ್ದಾರೆ.

ಹಲವು ವಲಯಗಳಲ್ಲಿ ಖಾಸಗಿ ಹೂಡಿಕೆಗೆ ಅವಕಾಶ ಕೊಟ್ಟಂತೆ ರಸ್ತೆ ನಿರ್ಮಾಣದಲ್ಲೂ ಅವಕಾಶ ಕೊಡಲಾಗಿದೆ. ಇಲ್ಲಿ ದೇಶೀಯ ಬಂಡವಾಳಗಾರರು ಮಾತ್ರವಲ್ಲ ವಿದೇಶಿ ಹೂಡಿಕೆದಾರರಿಗೂ ಅವಕಾಶ ಕೊಡಲಾಗಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ರಸ್ತೆ ನಿರ್ಮಾಣ ವಲಯದಲ್ಲಿ ಶೇ. 100ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಕೊಟ್ಟಿದೆ. ಪಿಪಿಪಿ (ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ) ಅಥವಾ ಬಿಓಟಿ (ನಿರ್ಮಿಸು, ನಿರ್ವಹಣೆ ಮಾಡು ಮತ್ತು ಹಸ್ತಾಂತರಿಸು) ಮೂಲಕ ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತದೆ. ರಸ್ತೆ ನಿರ್ಮಿಸಿದ ನಂತರ, ಅದರ ನಿರ್ಮಾಣಕ್ಕೆ ಮಾಡಿದ ವೆಚ್ಚವನ್ನು ಮರುಪಡೆಯಲು ಬಳಕೆದಾರರಿಂದ ಶುಲ್ಕವನ್ನು ಸಂಗ್ರಹಿಸಲಾಗುತ್ತದೆ. ಹೂಡಿಕೆ ಮಾಡಿದ ಬಂಡವಾಳ ವೆಚ್ಚವನ್ನು ವಸೂಲಿ ಮಾಡಿದ ನಂತರವೂ ಪ್ರಯಾಣಿಕರಿಗೆ ರಸ್ತೆಯನ್ನು ಉತ್ತಮ ಸ್ಥಿತಿಯಲ್ಲಿ ನಿರ್ವಹಿಸಬೇಕಾಗಿರುವುದರಿಂದ 40% ರಷ್ಟು ಕಡಿಮೆ ದರದಲ್ಲಿ ಶುಲ್ಕ ಸಂಗ್ರಹಿಸಲು ಅವಕಾಶ ಕೊಡಲಾಗಿದೆ. ಇದರರ್ಥ ಇಷ್ಟೇ, ರಸ್ತೆಗಳನ್ನು ಬಳಕೆ ಮಾಡುವವರಿಗೆ ಟೋಲ್ ಗಳಿಂದ ಎಂದೂ ಮುಕ್ತಿ ಇಲ್ಲ. ಇದು ತೊಂಬತ್ತರ ದಶಕದಲ್ಲಿ ಭಾರತ ಒಪ್ಪಿಕೊಂಡಿರುವ ಮುಕ್ತ ಆರ್ಥಿಕ ನೀತಿಗಳ ಪರಿಣಾಮ. LPG ಎಂದರೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳು ಎಲ್ಲವನ್ನೂ ಸ್ವದೇಶಿ ಮತ್ತು ವಿದೇಶಿ ಖಾಸಗಿ ಬಂಡವಾಳಗಾರರಿಗೆ ಮುಕ್ತವಾಗಿ ತೆರೆದಿಡಬೇಕು.

**ವಿಶ್ವ ವ್ಯಾಪಾರ ಸಂಸ್ಥೆಯ (WTO) ಜೊತೆಗಿನ GATS ಒಪ್ಪಂದ:**

ಸಾರಿಗೆ ವಲಯ ಸೇರಿದಂತೆ ಎಲ್ಲಾ ಸೇವಾವಲಯಗಳಿಗೂ ಸಂಬಂದಿಸಿದಂತೆ ವಿಶ್ವ ವ್ಯಾಪಾರ ಸಂಸ್ಥೆಯ (WTO) ಜೊತೆಗೆ ಮಾಡಿಕೊಂಡಿರುವ 'ಸೇವೆಗಳಲ್ಲಿ ವ್ಯಾಪಾರದ ಸಾಮಾನ್ಯ ಒಪ್ಪಂದ' (GATS) ಕ್ಕೆ 1995 ರಲ್ಲಿ ಭಾರತ ಸಹಿ ಹಾಕಿದೆ. ಇದರ ಪ್ರಕಾರ ಸಾರಿಗೆ ಸೇವೆಗಳಲ್ಲಿನ ವ್ಯವಹಾರದಲ್ಲಿ ಅಂತರರಾಷ್ಟ್ರೀಯ ನಿಯಮಗಳ ವಿಶ್ವಾಸ ಗಳಿಸಲು ಮತ್ತು ಹೂಡಿಕೆದಾರರು ನಿರೀಕ್ಷಿಸುವ ವ್ಯವಸ್ಥೆಯನ್ನು ರೂಪಿಸಲು ಮತ್ತು ಉದಾರೀಕರಣವನ್ನು ಸುಲಭಗೊಳಿಸಲು WTO ನ ಎಲ್ಲಾ ಸದಸ್ಯ ದೇಶಗಳು ಬದ್ಧವಾಗಿರಬೇಕು. GATS ನಲ್ಲಿನ ಅಂಶಗಳು ತಾತ್ವಿಕವಾಗಿ, ಎಲ್ಲಾ ಸೇವಾ ಕ್ಷೇತ್ರಗಳಿಗೆ ಅನ್ವಯಿಸುತ್ತವೆ.

ನಾವು ನಿಜವಾಗಿಯೂ ರಸ್ತೆ ಶುಲ್ಕಗಳಿಂದ ಮುಕ್ತರಾಗಬೇಕಾದರೆ, ಸಂವಿಧಾನ ನಮಗೆ ಕೊಟ್ಟಿರುವ ಮೂಲಭೂತ ಸೌಲಭ್ಯಗಳ ಹಕ್ಕುಗಳನ್ನು ಪಡೆಯಬೇಕಾದರೆ ಭಾರತ ಸರ್ಕಾರದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳನ್ನು ಹಿಮ್ಮೆಟ್ಟಿಸುವ ಗುರಿಯೊಂದಿಗೆ ಹೋರಾಡಬೇಕು.

# ಟೋಲ್ ಸಂಗ್ರಹದ ಲೂಟಿಗೆ ಸರಕಾರದ್ದೇ ಕುಮಕ್ಕು

ವಾ.ಉಚ್ಚಿಲ್

ಸುರತ್ಕಲ್‌ನ ಅಕ್ರಮ ಟೋಲ್‌ಗೇಟ್ ತೆರವುಗೊಳಿಸಬೇಕೆಂದು ಒತ್ತಾಯಿಸಿ ಹಲವು ವರ್ಷಗಳಿಂದ ನಡೆಯುತ್ತಾ ಬಂದಿರುವ ಹೋರಾಟ ಅಕ್ಟೋಬರ್ 18 ರಂದು ತೀವ್ರ ಸ್ವರೂಪವನ್ನು ಪಡೆದು ಪೊಲೀಸರ ಭದ್ರಕೋಟೆಯನ್ನು ಭೇದಿಸಿ ಟೋಲ್‌ಗೆ ಮುತ್ತಿಗೆ ಹಾಕುವವರೆಗೂ ಮುಂದುವರೆಯಿತು.

ಪಕ್ಷಾತೀತ, ಸಂಘಟನಾತೀತ ಹೋರಾಟದಲ್ಲಿ ಅವಿಭಜಿತ ದ.ಕ.ಜಿಲ್ಲೆಯ ಸಾರ್ವಜನಿಕರು ಭಾಗವಹಿಸುವ ಮೂಲಕ ಅಕ್ರಮ ಟೋಲ್ ವಿರುದ್ಧದ ಜನಾಕ್ರೋಶ ಅಕ್ಟೋಬರ್ 18, 2022 ರಂದು ವ್ಯಕ್ತವಾಯಿತು. ಹೋರಾಟಗಾರರು ಟೋಲ್‌ಗೆ ಮುತ್ತಿಗೆ ಹಾಕಿದ ಹಿನ್ನೆಲೆಯಲ್ಲಿ ಕೆಲ ಸಮಯ ಟೋಲ್ ಸಂಗ್ರಹ ಸ್ಥಗಿತಗೊಂಡಿತ್ತಲ್ಲದೆ, ಪೊಲೀಸರು ನೂರಾರು ಹೋರಾಟಗಾರರು, ನಾಯಕರನ್ನು ವಶಕ್ಕೆ ಪಡೆದು ಬಳಿಕ ಬಿಡುಗಡೆಗೊಳಿಸಿದರು.

ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ನೇತೃತ್ವದಲ್ಲಿ ಬಿಜೆಪಿಯೇತರ ಎಲ್ಲ ಪಕ್ಷಗಳು, ದ.ಕ., ಉಡುಪಿ ಜಿಲ್ಲೆಯ ಹತ್ತಾರು ಸಂಘಟನೆಗಳ ಸಹಭಾಗಿತ್ವದಲ್ಲಿ ಟೋಲ್‌ಗೇಟ್‌ನ್ನು ಜನರಿಂದಲೇ ತೆರವುಗೊಳಿಸುವ ನೇರ ಕಾರ್ಯಾಚರಣೆಗೆ ಕರೆ ನೀಡಲಾಗಿತ್ತು. ಈ ನಡುವೆ ಹೋರಾಟದ ವಿರುದ್ಧವಾಗಿ 16 ಮಂದಿ ಮುಖಂಡರಿಗೆ ಪೊಲೀಸರು ನೋಟೀಸನ್ನೂ ನೀಡಿದ್ದರು. ಹಾಗಿದ್ದರೂ ಪ್ರತಿಭಟನೆಯಲ್ಲಿ ಭಾರೀ ಸಂಖ್ಯೆಯಲ್ಲಿ ಜಮಾಯಿಸಿದ್ದ ಜನರು ಪೊಲೀಸರ ಕೋಟೆಯನ್ನು ಬೇಧಿಸಿ ಟೋಲ್‌ಗೇಟ್‌ಗೆ ಮುತ್ತಿಗೆ ಹಾಕಿದರು.

ಮಂಗಳವಾರ ಬೆಳಿಗ್ಗೆ 9ರ ವೇಳೆಗೆ ಪ್ರತಿಭಟನಾಕಾರರು ಸುರತ್ಕಲ್ ಟೋಲ್ ಸುತ್ತಮುತ್ತ ಜಮಾಯಿಸಲು ಆರಂಭಿಸಿದರು. ಆದಾಗಲೇ ಸಿದ್ಧತೆ ಮಾಡಿಕೊಂಡಿದ್ದ ಪೊಲೀಸರು ಹೋರಾಟಗಾರರನ್ನು ಟೋಲ್‌ಗೇಟ್‌ನ ಸುಮಾರು 50 ಮೀ.ದೂರದಲ್ಲಿ ಎನ್‌ಐಟಿಕೆ ಎದುರಿನ ಸರ್ವಿಸ್ ರಸ್ತೆಯಲ್ಲಿ ಬ್ಯಾರಿಕೇಡ್ ಹಾಕಿ ತಡೆದಿದ್ದರು. ನೂರಾರು ಸಂಖ್ಯೆಯ ಪ್ರತಿಭಟನಾಕಾರರು ಸಂಸದರು, ಶಾಸಕರ ವಿರುದ್ಧ ಘೋಷಣೆ, ಧಿಕ್ಕಾರಗಳನ್ನು ಕೂಗಿದರು. ಟೋಲ್‌ಗೇಟನ್ನು ತೆರವುಗೊಳಿಸುವವರೆಗೂ ಹೋರಾಟ ಮುಂದುವರೆಸುವುದಾಗಿ ನಿರ್ಧರಿಸಿದ್ದ ಪ್ರತಿಭಟನಾಕಾರರು ಸುಮಾರು 10 ಗಂಟೆಗೆ ಏಕಾಏಕಿ ಪೊಲೀಸರ ಭದ್ರಕೋಟೆ, ಬ್ಯಾರಿಕೇಡ್‌ಗಳನ್ನು ತಳ್ಳಿ ಟೋಲ್‌ಗೇಟ್‌ಗೆ ಮುತ್ತಿಗೆ ಹಾಕಿದರು.

ಸುಮಾರು 500ಕ್ಕೂ ಅಧಿಕ ಸಂಖ್ಯೆಯಲ್ಲಿದ್ದ ಪೊಲೀಸರಿಗೆ ಹೋರಾಟಗಾರರ ಕಿಚ್ಚನ್ನು ತಡೆಯಲು ಸಾಧ್ಯವಾಗಲಿಲ್ಲ. ಟೋಲ್‌ಗೇಟ್‌ನ ಮುಂಭಾಗದಲ್ಲಿ ಎರಡು ತಡೆಬೇಲಿಗಳನ್ನು ಪೊಲೀಸರು ಹಾಕಿದ್ದರೂ ಹೋರಾಟಗಾರರು ಅದನ್ನು ಮುರಿದು ಒಳನುಗ್ಗಿದ್ದರು. ಈ ಸಂದರ್ಭ ಅಲ್ಲಲ್ಲಿ ಪೊಲೀಸರು ಟೋಲ್‌ಗೇಟ್‌ನತ್ತ ಹೋರಾಟ ಸಮಿತಿಯ ನಾಯಕರನ್ನು ತಡೆದು ವಶಕ್ಕೆ ಪಡೆಯುವ ಪ್ರಯತ್ನ ನಡೆಸಿದರಾದರೂ ಅಕ್ರಮ ಟೋಲ್ ಸಂಗ್ರಹಣೆಯ ವಿರುದ್ಧದ ಜನಾಕ್ರೋಶ ಟೋಲ್‌ಗೆ ಮುತ್ತಿಗೆ ಹಾಕುವವರೆಗೆ ಮುಂದುವರೆಯಿತು.

ಈ ಸಂದರ್ಭ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ತೀವ್ರ ತಳ್ಳಾಟ, ಘರ್ಷಣೆ ನಡೆಯಿತು. ಅನೇಕರನ್ನು ಪೊಲೀಸರು ಎಳೆದೊಯ್ದರು. ಕೆಲವರನ್ನಂತೂ ಕಾಲು ಹಿಡಿದು ರಸ್ತೆಯಲ್ಲೇ ಎಳೆದೊಯ್ದು ಪ್ರತಿಭಟನೆ ನಿಲ್ಲಿಸಲು ಯತ್ನಿಸಲಾಯಿತು. ಆದರೂ ಟೋಲ್‌ಗೇಟ್‌ಗೆ ಮುತ್ತಿಗೆ ಹಾಕುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ವಿವಿಧ ಪಕ್ಷ ಸಂಘಟನೆಗಳ ಮುಖಂಡರ ಸಹಿತ ಪ್ರತಿಭಟನಾಕಾರರು ಟೋಲ್‌ಗೇಟ್‌ಗೆ ಮುತ್ತಿಗೆ ಹಾಕಿ ಧಿಕ್ಕಾರ ಘೋಷಣೆಗಳನ್ನು ಕೂಗಿದರು. ಈ ವೇಳೆ ಎಚ್ಚೆತ್ತ ಪೊಲೀಸ್ ಪಡೆ ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ಸುತ್ತುವರಿದು ಎಲ್ಲಾ ಪ್ರತಿಭಟನಾಕಾರರನ್ನು ಎಳೆದೊಯ್ದು ಬಂಧಿಸಿದರು.

ಪೊಲೀಸರ ಪ್ರತಿಭಟನಾಕಾರರ ನಡುವಿನ

ಪುಟ 10 ಕ್ಕೆ



# ಭಾರತವನ್ನು ವಿಶ್ವದ ಹಸಿವಿನ ತಾಣವನ್ನಾಗಿಸಿದ ಸರ್ಕಾರ



**ಜನರ ಸಂಕಷ್ಟದ ಕಡೆ ಬೊಟ್ಟು ಮಾಡುವ ವರದಿಗಳು ಬಂದಾಗಲೆಲ್ಲ ಅದು ಸುಳ್ಳು ಮತ್ತು ಭಾರತದ ಘನತೆಗೆ ಚ್ಯುತಿ ತರಲು ತಯಾರಿಸಿದ ವರದಿ ಎಂದು ಹೇಳಿಕೊಂಡು ಬರುತ್ತಿರುವುದು ಈ ಸರ್ಕಾರದ ಲಕ್ಷಣವಾಗಿದೆ. ಗ್ಲೋಬಲ್ ಹಂಗರ್ ಇಂಡೆಕ್ಸ್ (GHI) ಯ ಇತ್ತೀಚಿನ ಅಂದಾಜುಗಳಿಗೆ ಸರ್ಕಾರವು ಈ ರೀತಿ ಪ್ರತಿಕ್ರಿಯಿಸಿದೆ. ಭಾರತದಲ್ಲಿ ಆಹಾರದ ಅಭದ್ರತೆಯ ಹದಗೆಡುತ್ತಿರುವುದನ್ನು ಗುರುತಿಸಿ, ಅದನ್ನು ಎದುರಿಸಲು ಕ್ರಮಗಳನ್ನು ಕೈಗೊಳ್ಳಲು ಬದ್ಧತೆಯಿಂದ ಕಾರ್ಯಪ್ರವೃತ್ತರಾಗುವ ಬದಲು, ಮೋದಿ ಸರ್ಕಾರವು ಅದನ್ನು ಸ್ವೀಕರಿಸಲು ನಿರಾಕರಿಸಿದೆ ಮಾತ್ರವಲ್ಲದೆ, GHI ನ ವರದಿಯನ್ನು ಇದೊಂದು "ಹಸಿವಿನ ಸೂಚ್ಯಾಂಕದ ಬಗ್ಗೆ ತಪ್ಪು ಅಳತೆ" ಎಂದು ಹೇಳಿಕೊಂಡಿದೆ.**

**ಪ್ರಕಾಶ್ ಕಾರತ್**



ಜಾಗತಿಕ ಹಸಿವು ಸೂಚ್ಯಾಂಕ (ಗ್ಲೋಬಲ್ ಹಂಗರ್ ಇಂಡೆಕ್ಸ್); 2022 ರ, ವರದಿಯು ಅಕ್ಟೋಬರ್ 13 ರಂದು ಬಿಡುಗಡೆಯಾಗಿದೆ. ಸೂಚ್ಯಾಂಕದ ಪ್ರಮುಖ ವಿಷಯಗಳಾದ ಹಸಿವು ಮತ್ತು ಅಪೌಷ್ಟಿಕತೆಯ ಸ್ಥಿತಿಗಳಲ್ಲಿ ಭಾರತ ದೇಶವು ಕಳೆದ ವರ್ಷಕ್ಕಿಂತಲೂ ಮತ್ತಷ್ಟು ಅಂದರೆ, 101 ರಿಂದ 107 ಕ್ಕೆ ಕುಸಿದು ಪಾತಳದ ಅಂಚಿಗೆ ತಲುಪಿದೆ. ಭಾರತದ ಈ ಶ್ರೇಯಾಂಕವು ನೆರೆಹೊರೆಯ ದೇಶಗಳಿಗಿಂತ ತುಂಬಾ ಕೆಳಗಿಳಿದಿದೆ. ಭಾರತಕ್ಕಿಂತ ಗಣನೀಯವಾಗಿ ಕಡಿಮೆ ಮಟ್ಟದ ಆರ್ಥಿಕ ಅಭಿವೃದ್ಧಿ ಹೊಂದಿರುವ ಅನೇಕ ದೇಶಗಳಲ್ಲಿ ಹಸಿವು ಮತ್ತು ಅಪೌಷ್ಟಿಕತೆಯ ಮಟ್ಟಗಳು ಉತ್ತಮವಾಗಿವೆ. ಯುದ್ಧದಿಂದ ಹಾನಿಗೊಳಗಾದ ಅಫ್ಘಾನಿಸ್ತಾನ ದೇಶ ಮಾತ್ರ ದಕ್ಷಿಣ ಏಷ್ಯಾದಲ್ಲಿ ಭಾರತಕ್ಕಿಂತ ಹಸಿವಿನ ಸೂಚ್ಯಾಂಕದಲ್ಲಿ ಕೆಳಗಿರುವ ಏಕೈಕ ದೇಶವಾಗಿದೆ.

ಪ್ರಪಂಚದಲ್ಲಿ ಅತಿ ಹೆಚ್ಚು ಹಸಿದ ಮತ್ತು ಆಹಾರದ ಅಸುರಕ್ಷಿತ ಜನರಿಗೆ ಭಾರತವು ನೆಲೆಯಾಗಿದೆ. ಆಹಾರ ಮತ್ತು ಕೃಷಿ ಸಂಸ್ಥೆ (FAO)ಯ ಅಂದಾಜಿನ ಪ್ರಕಾರ, ಭಾರತದಲ್ಲಿ, 2020 ರಲ್ಲಿ 22 ಕೋಟಿಗೂ ಹೆಚ್ಚು ಜನರು ದೀರ್ಘಕಾಲದ ಹಸಿವನ್ನು ಎದುರಿಸಿದರು ಮತ್ತು 62 ಕೋಟಿ ಜನರು ತೀವ್ರ ಆಹಾರದ ಅಭದ್ರತೆಯನ್ನು ಎದುರಿಸಿದರು. ಜಾಗತಿಕ ಸನ್ನಿವೇಶದಲ್ಲಿ ಒಂದು ಅಂದಾಜಿನಂತೆ, ತೀವ್ರ ಹಸಿವಿನಿಂದ ಬಳಲುತ್ತಿರುವ ಮೂರು ಜನರಲ್ಲಿ ಒಬ್ಬರಿಗೆ ಭಾರತವೇ ನೆಲೆಯಾಗಿದೆ. ಹಾಗೆಯೇ, ಭಾರತದಲ್ಲಿ ನಾಲ್ಕನೇ ಒಂದು ಭಾಗದಷ್ಟು ಜನರು ಆಹಾರದ ಅಭದ್ರತೆಯಿಂದ ಬಳಲುತ್ತಿದ್ದಾರೆ. ಇದು ಮೋದಿ ಸರ್ಕಾರದ ಕೊಡುಗೆಯಾಗಿದೆ.

ಕಳೆದ ಕೆಲವು ವರ್ಷಗಳಿಂದ ಭಾರತದಲ್ಲಿ ಹಸಿವು ಮತ್ತು ಆಹಾರದ ಅಭದ್ರತೆಯ ಹೆಚ್ಚಳವು ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ದೋಷಪೂರಿತ–ದುರಂತ ನೀತಿಗಳ ಪರಿಣಾಮವಾಗಿದೆ. 2016ರ ನೋಟು ಅಮಾನ್ಯೀಕರಣದಿಂದ 2020ರ ಕೋವಿಡ್ ಲಾಕ್‌ಡೌನ್‌ವರೆಗೆ, ಜನರ ಜೀವನೋಪಾಯದ ಮೇಲೆ ನಡೆಸಿದ ನಿರಂತರ ದಾಳಿಗಳು ಮೋದಿ ಸರ್ಕಾರದ ನೆನಪುಗಳು ಶಾಶ್ವತವಾಗಿ ಜನರ ಮನಸ್ಸಿನಲ್ಲಿ ಉಳಿಯುತ್ತದೆ.

ಜನರ ಸಂಕಷ್ಟದ ಕಡೆ ಬೊಟ್ಟು ಮಾಡುವ ವರದಿಗಳು ಬಂದಾಗಲೆಲ್ಲ ಅದು ಸುಳ್ಳು ಮತ್ತು ಭಾರತದ ಘನತೆಗೆ ಚ್ಯುತಿ ತರಲು ತಯಾರಿಸಿದ ವರದಿ ಎಂದು ಹೇಳಿಕೊಂಡು ಬರುತ್ತಿರುವುದು ಈ ಸರ್ಕಾರದ ಲಕ್ಷಣವಾಗಿದೆ. ಗ್ಲೋಬಲ್ ಹಂಗರ್ ಇಂಡೆಕ್ಸ್ (GHI) ಯ ಇತ್ತೀಚಿನ ಅಂದಾಜುಗಳಿಗೆ ಸರ್ಕಾರವು ಈ ರೀತಿ ಪ್ರತಿಕ್ರಿಯಿಸಿದೆ. ಭಾರತದಲ್ಲಿ ಆಹಾರದ ಅಭದ್ರತೆಯ ಹದಗೆಡುತ್ತಿರುವುದನ್ನು ಗುರುತಿಸಿ, ಅದನ್ನು ಎದುರಿಸಲು ಕ್ರಮಗಳನ್ನು ಕೈಗೊಳ್ಳಲು ಬದ್ಧತೆಯಿಂದ ಕಾರ್ಯಪ್ರವೃತ್ತರಾಗುವ ಬದಲು, ಮೋದಿ ಸರ್ಕಾರವು ಅದನ್ನು ಸ್ವೀಕರಿಸಲು ನಿರಾಕರಿಸಿದೆ ಮಾತ್ರವಲ್ಲದೆ, GHI ನ ವರದಿಯನ್ನು ಇದೊಂದು "ಹಸಿವಿನ ಸೂಚ್ಯಾಂಕದ ಬಗ್ಗೆ ತಪ್ಪು ಅಳತೆ" ಎಂದು ಹೇಳಿಕೊಂಡಿದೆ.

ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಭಾರತದಲ್ಲಿ ಬಡತನ ಮತ್ತು ಹಸಿವು ಅಸ್ತಿತ್ವದಲ್ಲಿಲ್ಲ ಎಂದು ಜಗತ್ತು ನಂಬಬೇಕೆಂದು ಬಯಸುತ್ತದೆ. ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಅಧಿಕೃತ ಬಡತನ ರೇಖೆಯನ್ನು ವ್ಯಾಖ್ಯಾನಿಸುವ ಮತ್ತು ಬಡತನದ ಅಂದಾಜು ಮಾಡುವ ಅಭ್ಯಾಸವನ್ನು ಕೈಬಿಟ್ಟಿದೆ. ಜನರ ವಸ್ತು ಸ್ಥಿತಿಗಳ ಅಂಕಿ ಅಂಶಗಳನ್ನು ಸಂಗ್ರಹಿಸಿ ವಸ್ತುನಿಷ್ಟೆ ಸಮೀಕ್ಷೆ ನಡೆಸುತ್ತಿಲ್ಲ ಅಥವಾ ಬಿಡುಗಡೆ ಮಾಡಲು ಅನುಮತಿ ನೀಡುತ್ತಿಲ್ಲ.

ಅಧಿಕೃತ ದತ್ತಾಂಶ ಸಂಗ್ರಹ ಮಾಡುವ ವ್ಯವಸ್ಥೆಗಳನ್ನು ಮೋದಿ ಸರ್ಕಾರವು ತಿರುಚುತ್ತಿದೆ ಅಥವಾ ನಾಶಗೊಳಿಸಲು ಪ್ರಯತ್ನಿಸಲಾಗುತ್ತಿದೆ. ನೈಜ ಚಿತ್ರಣವನ್ನು ಪ್ರತಿಬಿಂಬಿಸದ ರೀತಿಯಲ್ಲಿ ಕುಶಲತೆಯಿಂದ ಕಾರ್ಯ ನಿರ್ವಹಿಸುತ್ತಿದೆ. ಕೋವಿಡ್–19 ನಿಂದ ಭಾರತದಲ್ಲಿ 4.7 ಮಿಲಿಯನ್ (40, ಲಕ್ಷದ 70 ಸಾವಿರ ಜನರು ಸಾವನ್ನಪ್ಪಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ (WHO) ಅಂದಾಜಿಸಿದಾಗ, ಭಾರತ ಸರ್ಕಾರವು ಆ ದತ್ತಾಂಶದ ವಿಧಾನವನ್ನು ದೋಷಯುಕ್ತ ಎಂದು ಕರೆದಿದೆ. ಬದಲಾಗಿ, ಅಧಿಕೃತ ಸಿವಿಲ್ ನೋಂದಣಿಯಲ್ಲಿ ದಾಖಲಿಸಿದ್ದ ಹೆಚ್ಚುವರಿ ಮರಣದ ಅಂದಾಜುಗಳು ದೋಷಯುಕ್ತ ಎಂದು ಸರ್ಕಾರವು ತಿಳಿಸಿದೆ. ಅಷ್ಟು ದೊಡ್ಡ ಸಂಖ್ಯೆಯ ಮರಣ ಸಂಭವಿಸಿರಲಿಲ್ಲ ಎಂದು ಪ್ರತಿಪಾದಿಸಿಕೊಂಡಿದೆ. ಗೊತ್ತಿರುವ ನೈಜ ಸಂಗತಿಯೆಂದರೆ, ಜನನ ಮತ್ತು ಮರಣಗಳ ಕಳಪೆ ಅಳತೆಗೆ ಹೆಸರುವಾಸಿಯಾದ ವ್ಯವಸ್ಥೆಯನ್ನು ಬಳಸಲಾಗಿದೆ. ತೀರಾ ಇತ್ತೀಚೆಗೆ, ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ಭಾರತದಲ್ಲಿ ಯಾವುದೇ ಹೆಚ್ಚಿನ ಸಾವುಗಳು ಸಂಭವಿಸಿಲ್ಲ ಎಂದು ಹೇಳಲು ಸರ್ಕಾರವು ಮಾದರಿ ನೋಂದಣಿ ವ್ಯವಸ್ಥೆಯ ಡೇಟಾವನ್ನು ಬಿಡುಗಡೆ ಮಾಡಿದೆ.

ಅಧಿಕೃತ ಆವರ್ತಕ ಕಾರ್ಮಿಕ ಪಡೆಯು ನಡೆಸಿದ ಸಮೀಕ್ಷೆಯಲ್ಲಿ, ಕೋವಿಡ್ ಲಾಕ್‌ಡೌನ್ ಮತ್ತು ಆರ್ಥಿಕ ಬಿಕ್ಕಟ್ಟಿನ ಹೊರತಾಗಿಯೂ ನಿರುದ್ಯೋಗದಲ್ಲಿ ಯಾವುದೇ ಹೆಚ್ಚಳವಾಗಿಲ್ಲ ಎಂದು ತೋರಿಸಲಾಗಿದೆ. ಬಡತನದ ನೈಜ ಅಂದಾಜನ್ನು ಮಾಡುವ ಬದಲಾಗಿ, ಬಡತನದೊಂದಿಗೆ ಯಾವುದೇ ಸಂಬಂಧವಿಲ್ಲದ ಬಹು ಆಯಾಮದ ಬಡತನ ಸೂಚ್ಯಂಕವನ್ನು ರೂಪಿಸಲಾಗಿದೆ ಮತ್ತು ಭಾರತದಲ್ಲಿ ಬಡತನವು ಅತ್ಯಲ್ಪ ಮಟ್ಟದಲ್ಲಿ ಇದೆ ಎಂದು ತೋರಿಸಲು ವಿವಿಧ ರೀತಿಯ ಫಡ್ಜ್ ಮಾಡಿದ ಡೇಟಾವನ್ನು ನೀಡಲಾಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ದೇಶದಲ್ಲಿ ಅಸ್ತಿತ್ವದಲ್ಲಿರುವ, ಅಂಕಿಅಂಶಗಳ–ಸಮೀಕ್ಷೆ ನಡೆಸುವ ವ್ಯವಸ್ಥೆಯನ್ನು ವಿರೂಪಗೊಳಿಸಲಾಗಿದೆ. ಸರ್ಕಾರಕ್ಕೆ ಪ್ರಚಾರ ಯಂತ್ರವಾಗಿ ಮತ್ತು ಅಚ್ಛೇ ದಿನ್ ಮತ್ತು ಅಮೃತ ಕಾಲ್ ಭಾರತಕ್ಕೆ ಆಗಮಿಸಿದೆ ಎಂಬ ಅಧಿಕೃತ ನಿರೂಪಣೆಯನ್ನು ಬೆಂಬಲಿಸುವ ಡೇಟಾವನ್ನು ಮಾತ್ರ ಬಿಡುಗಡೆ ಮಾಡಲು ಮೋದಿ ಸರ್ಕಾರ ಅನುಮತಿ ನೀಡಿದೆ.

ರಾಷ್ಟ್ರೀಯ ಮಾದರಿ ಸಮೀಕ್ಷೆ (ನ್ಯಾಷನಲ್ ಸ್ಯಾಂಪಲ್ ಸರ್ವೆ) ಕಛೇರಿ ನಡೆಸಿದ ರಾಷ್ಟ್ರೀಯ ಬಳಕೆಯ ವೆಚ್ಚದ (ನ್ಯಾಷನಲ್ ಕನ್ಸೆಂಪಷನ್ ಎಕ್ಸ್ಪೆಂಡಿಚರ್) ಸಮೀಕ್ಷೆಗಳಿಂದ ಬಡತನ ಮತ್ತು ಹಸಿವಿನ ಅಂದಾಜಿನ ಪ್ರಮುಖ 2017–18 ರ ಸಮೀಕ್ಷೆಯ ದತ್ತಾಂಶಗಳ ಬಿಡುಗಡೆಯನ್ನು ಮೋದಿ ಸರ್ಕಾರವು ತಡೆ ಹಿಡಿದಿದೆ. ಅಂದಿನಿಂದ ಇಂದಿನವರೆಗೆ ಬಳಕೆಯ ವೆಚ್ಚದ ಬಗ್ಗೆ ಯಾವುದೇ ಸಮೀಕ್ಷೆ ನಡೆದಿಲ್ಲ.

ಇತ್ತೀಚಿನ ವರ್ಷಗಳಲ್ಲಿ ನಿರುದ್ಯೋಗದ ತೀವ್ರ ಉಲ್ಬಣವಾಗಿದ್ದರೂ, ಲಕ್ಷಾಂತರ ಜನರನ್ನು ಬಡತನ ಮತ್ತು ಆಹಾರದ ಅಭದ್ರತೆಗೆ ತಳ್ಳಿದ ಆರ್ಥಿಕ ಬಿಕ್ಕಟ್ಟಿನ ಹೊರತಾಗಿಯೂ, ಸಾರ್ವಜನಿಕ ವಿತರಣಾ ವ್ಯವಸ್ಥೆಯ (ಪಿಡಿಎಸ್) ವ್ಯಾಪ್ತಿಯನ್ನು ವಿಸ್ತರಿಸುವುದು ಮುಖ್ಯವೆಂದು ಮೋದಿ ಸರ್ಕಾರ ಭಾವಿಸಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳುವುದು ಸೂಕ್ತವಾಗಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ (ಎನ್‌ಎಫ್‌ಎಸ್‌ಎ)ಯ ಪ್ರಕಾರ, ಕಳೆದ ಜನಗಣತಿಯ ಪ್ರಕಾರ ಕನಿಷ್ಠ 75 ಶೇಕಡಾ ಗ್ರಾಮೀಣ ಜನಸಂಖ್ಯೆ ಮತ್ತು ಶೇಕಡಾ 50 ರಷ್ಟು ನಗರ ಜನಸಂಖ್ಯೆಗೆ ಸಬ್ಸಿಡಿ ಆಹಾರ ಧಾನ್ಯವನ್ನು ಒದಗಿಸಲು ಸರ್ಕಾರವು ಸಾಂವಿಧಾನಿಕ ಆದೇಶವನ್ನು ಹೊಂದಿದೆ. 2011 ರ ಜನಗಣತಿ ಈಗಾಗಲೇ 11 ವರ್ಷ ಹಳೆಯದಾಗಿದೆ ಮತ್ತು 2021 ರಲ್ಲಿ ನಡೆಸಲು ಉದ್ದೇಶಿಸಲಾಗಿದ್ದ ಜನಗಣತಿಯು ಇನ್ನೂ ಪ್ರಾರಂಭವಾಗಿಲ್ಲ, ನ್ಯಾಷನಲ್ ಫುಡ್ ಸೆಕ್ಯುರಿಟಿ ಆಕ್ಟ್ (ಎನ್‌ಎಫ್‌ಎಸ್‌ಎ) ನ ವ್ಯಾಪ್ತಿಯು ಸುಮಾರು 12 ಕೋಟಿ ವ್ಯಕ್ತಿಗಳಿಂದ ಸಾಂವಿಧಾನಿಕವಾಗಿ ಕಡ್ಡಾಯ ಮಟ್ಟಕ್ಕಿಂತ ಕಡಿಮೆಯಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಧಿಕೃತ ಜನಗಣತಿಯನ್ನು ನಿಗದಿತ ಸಮಯಕ್ಕೆ ನಡೆಸದ ಕಾರಣ ಸುಮಾರು 12 ಕೋಟಿ ಜನರನ್ನು ಎನ್‌ಎಫ್‌ಎಸ್‌ಎ ನಿಂದ ಹೊರಗಿಡಲಾಗಿದೆ.

ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಲು, ಆಧಾರ್ ಸೀಡಿಂಗ್ ಮತ್ತು ಡಿಜಿಟಲೀಕರಣದ ಹೆಸರಿನಲ್ಲಿ 2014 ರಿಂದ 4.4 ಕೋಟಿಗೂ ಹೆಚ್ಚು ಪಡಿತರ ಕಾರ್ಡ್‌ಗಳನ್ನು ರದ್ದುಗೊಳಿಸಲಾಗಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಇದನ್ನು ಅತ್ಯಂತ ತೀವ್ರವಾಗಿ ಕಡಿತಗೊಳಿಸಲಾಗಿದೆ. NFSA ಯ ಫಲಾನುಭವಿಗಳನ್ನು ನಿರ್ದಿಷ್ಟ ಮಾನದಂಡಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ ಮತ್ತು ರಾಷ್ಟ್ರವ್ಯಾಪಿ ಸಾಮಾಜಿಕ–ಆರ್ಥಿಕ ಜಾತಿಗಣತಿ (2011) ಮೂಲಕ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಆಯ್ಕೆಮಾಡಲಾಗಿದೆ ಎಂದು ನೆನಪಿಟ್ಟುಕೊಳ್ಳುವುದು ಉಪಯುಕ್ತವಾಗಿದೆ. ಆದಾಗ್ಯೂ ಬಡ ಕುಟುಂಬಗಳ ಕಾರ್ಡ್‌ಗಳ ದೊಡ್ಡ ಪ್ರಮಾಣದ ರದ್ದತಿ ಮತ್ತು ಅವರ ಸ್ಥಾನದಲ್ಲಿ ಹೊಸ NFSA ಫಲಾನುಭವಿಗಳ ಆಯ್ಕೆಯನ್ನು ಸಂಪೂರ್ಣವಾಗಿ ರಾಜಕೀಯ ಪರಿಗಣನೆಯಿಂದ ಮತ್ತು ನಿರ್ದಿಷ್ಟ ಮಾನದಂಡ ಅಥವಾ ಸಮೀಕ್ಷೆಯಿಲ್ಲದೆ ಮಾಡಲಾಗಿದೆ.

ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಸಹ, ಸರ್ಕಾರವು 10 ಕೋಟಿ ಟನ್‌ಗಳಿಗಿಂತ ಹೆಚ್ಚು ಆಹಾರ ಧಾನ್ಯ ದಾಸ್ತಾನುಗಳನ್ನು ಹೊಂದಿದ್ದಾಗ, ಅದು NFSA ಯ ಅಸ್ತಿತ್ವದಲ್ಲಿರುವ ಫಲಾನುಭವಿಗಳಿಗೆ ಮಾತ್ರ ಆಹಾರಧಾನ್ಯ ವಿತರಣೆಯನ್ನು ಹೆಚ್ಚಿಸಿತು.

ಆರ್ಥಿಕ ಬಿಕ್ಕಟ್ಟಿನಿಂದಾಗಿ ತಮ್ಮ ಜೀವನೋಪಾಯವನ್ನು ಕಳೆದುಕೊಂಡು ಬಡತನಕ್ಕೆ ತಳ್ಳಲ್ಪಟ್ಟ ಲಕ್ಷಾಂತರ ಹೆಚ್ಚುವರಿ ಜನರಿಗೆ ಸಬ್ಸಿಡಿ ಆಹಾರ ಧಾನ್ಯವನ್ನು ನೀಡುವ ಯಾವುದೇ ಪ್ರಯತ್ನ ನಡೆದಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಬೇಕೆಂದು ಸಿಪಿಐ(ಎಂ) ನಿರಂತರವಾಗಿ ಒತ್ತಾಯಿಸುತ್ತಿದೆ. ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ಲಕ್ಷಾಂತರ ವಲಸೆ ಕಾರ್ಮಿಕರಿಂದ ಜೀವನೋಪಾಯದ ಮಾರ್ಗಗಳನ್ನು ಇದ್ದಕ್ಕಿದ್ದಂತೆ ಕಿತ್ತುಕೊಂಡಾಗ ಇದು ವಿಶೇಷವಾಗಿ ನಿರ್ಣಾಯಕವಾಯಿತು. ಸರ್ಕಾರದ ತುಂಬಿ ತುಳುಕುತ್ತಿರುವ ಧಾನ್ಯಗಳ ಬಾಗಿಲು ತೆರೆಯುವ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವ ಬದಲು ಸರ್ಕಾರವು ಒನ್ ನೇಷನ್ ಒನ್ ಕಾರ್ಡ್ ಯೋಜನೆಯಂತಹ ದೋಷಪೂರಿತ ಮತ್ತು ಸಂಕೀರ್ಣ ಪರಿಹಾರಗಳನ್ನು ಭರವಸೆ ನೀಡುತ್ತಲೇ ಬಂದಿದೆ. ಆದಾಗ್ಯೂ ಇದುವರೆಗೂ, ದಿನದ ಬೆಳಕನ್ನು ನೋಡಲಾಗಿಲ್ಲ.

ಇತ್ತೀಚಿನ ವರ್ಷಗಳಲ್ಲಿ, ಆಹಾರದ ಬೆಲೆಗಳಲ್ಲಿನ ಹೆಚ್ಚಿನ ಹಣದುಬ್ಬರದಿಂದಾಗಿ ಆಹಾರದ ಅಭದ್ರತೆ ಮತ್ತು ಹಸಿವು ಸಹ ಉಲ್ಬಣಗೊಂಡಿದೆ. 2022 ರ ಬಹುತೇಕ ಎಲ್ಲಾ ತಿಂಗಳುಗಳಲ್ಲಿ, ಆಹಾರದ ಬೆಲೆಗಳು 2021 ರಲ್ಲಿನ ಅನುಗುಣವಾದ

ಪುಟ 10 ಕ್ಕೆ

# ಸುರತ್ಕಲ್ ಅಕ್ರಮ ಟೋಲ್ ಗೇಟ್ ಕೇಂದ್ರಕ್ಕೆ ಮುತ್ತಿಗೆ

**ಪುಟ 8 ರಿಂದ**

ತಿಕ್ಕಾಟದಲ್ಲಿ ಅನೇಕ ಪ್ರತಿಭಟನಾಕಾರರಿಗೆ ಸಣ್ಣಪುಟ್ಟ ಗಾಯಗಳಾದವು. ಒಬ್ಬ ಪ್ರತಿಭಟನಾಕಾರನ ಕಣ್ಣಿಗೆ ಬಲವಾದ ಏಟು ಬಿದ್ದಿದ್ದು ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಟೋಲ್‌ಗೇಟ್‌ನ ಕೆಲವು ಪರಿಕರಗಳಿಗೆ ಹಾನಿ ಉಂಟಾಯಿತು. ಕೆಲವು ಪೊಲೀಸರಿಗೂ ತರಚಿದ ಗಾಯಗಳಾದವು. ಪ್ರತಿಭಟನಾಕಾರರು ಏಕಾಏಕಿ ಟೋಲ್‌ಗೇಟ್‌ಗೆ ಮುತ್ತಿಗೆ ಹಾಕಿದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸಂಚಾರ ಸ್ಥಗಿತಗೊಳಿಸಲಾಯಿತು. ಹೋರಾಟಗಾರರನ್ನು ತೆರವುಗೊಳಿಸಲು ಪೊಲೀಸರು ಹರಸಾಹಸ ಪಡಬೇಕಾಯಿತು. ಸುಮಾರು ಒಂದೂವರೆ ಗಂಟೆಗಳ ಕಾಲ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಪ್ರಮುಖ ಹೋರಾಟಗಾರರನ್ನು ವಶಕ್ಕೆ ಪಡೆದ ಬಳಿಕ ಉಳಿದ ಪ್ರತಿಭಟನಾಕಾರರನ್ನು ಪೊಲೀಸರು ಚದುರಿಸಿದರು.

ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿಯ ನೇತೃತ್ವದಲ್ಲಿ ನಡೆದ ಈ ಹೋರಾಟದಲ್ಲಿ ಕಾಂಗ್ರೆಸ್, ಸಿಪಿಐ(ಎಂ), ಸಿಪಿಐ, ದಸಂಸ, ಜೆಡಿಎಸ್, ಆಪ್ ಸೇರಿದಂತೆ ವಿವಿಧ ಪಕ್ಷ ಹಾಗೂ ಡಿವೈಎಫ್ಐ, ಎಸ್ಎಫ್ಐ, ಜೆಎಂಎಸ್ ಸಂಘಟನೆಗಳು ಭಾಗಿಯಾಗಿದ್ದವು. ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿಯ ಸಂಚಾಲಕ ಮುನೀರ್ ಕಾಟಿಪಳ್ಳ, ಎಂ.ಜಿ.ಹೆಗ್ಡೆ, ಎಂ.ದೇವದಾಸ್, ರಘು ಎಕ್ಕಾರು, ಮಾಜಿ ಸಚಿವ ವಿನಯ ಕುಮಾರ್ ಸೊರಕೆ, ಮಾಜಿ ಶಾಸಕರಾದ ಐವನ್ ಡಿಸೋಜ, ಶಕುಂತಳಾ ಶೆಟ್ಟಿ, ಜೆ. ಆರ್.ಲೋಬೋ, ಮೊಯ್ದಿನ್ ಬಾವಾ, ಬಿಲ್ಲವ ಮುಖಂಡ ಪದ್ಮರಾಜ್, ಪ್ರಮುಖರಾದ ಪಿ.ವಿ.ಮೋಹನ್, ಯಶವಂತ ಮರೋಳಿ, ಪುರುಷೋತ್ತಮ ಚಿತ್ರಾಪುರ, ಮಿಥುನ್ ರೈ, ಶಶಿಧರ ಹೆಗ್ಡೆ, ಪ್ರತಿಭಾ ಕುಳಾಯಿ, ಬಿ.ಕೆ.ಇಮ್ತಿಯಾಜ್, ಸಂತೋಷ್ ಬಜಾಲ್, ಸುನಿಲ್ ಕುಮಾರ್ ಬಜಾಲ್, ದಿನೇಶ್ ಹೆಗ್ಡೆ ಉಳ್ಳೆಪಾಡಿ, ಯಾದವ ಶೆಟ್ಟಿ, ವಸಂತ ಆಚಾರಿ, ದಯಾನಂದ ಶೆಟ್ಟಿ, ಶ್ರೀನಾಥ ಕುಲಾಲ್, ರಾಘವೇಂದ್ರ ರಾವ್, ಬಿ.ಶೇಖರ್ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಟೋಲ್ ಸ್ಥಗಿತಗೊಳ್ಳುವವರೆಗೂ ವಿರಾಮವಿಲ್ಲ–ಮುನೀರ್:ಸುರತ್ಕಲ್ ಅಕ್ರಮ ಟೋಲ್‌ಗೇಟ್ ವಿರುದ್ಧದ ಹೋರಾಟ ಮತ್ತಷ್ಟು ತೀವ್ರತೆಯಿಂದ ಮುಂದುವರೆಯಲಿದೆ. ಟೋಲ್ ಸ್ಥಗಿತಗೊಳ್ಳುವವರೆಗೂ ವಿರಾಮ ಇಲ್ಲ. ಇಂದು ಪೊಲೀಸರು ಪ್ರತಿಭಟನಾಕಾರರನ್ನು ಷರತ್ತು ರಹಿತವಾಗಿ ಬಿಡುಗಡೆಗೊಳಿಸಿದ್ದಾರೆ. ಜಾಮೀನು ಕೇಳದೆ ಇರುವುದರಿಂದ ಅದನ್ನು ತಿರಸ್ಕರಿಸಿ ಜೈಲಿಗೆ ಹೋಗುವ ನಮ್ಮ ನಿರ್ಧಾರ ತಪ್ಪಿತು. ಪೊಲೀಸ್ ವಶದಲ್ಲಿಯೇ ಹೋರಾಟ ಸಮಿತಿ ಸಭೆ ನಡೆಸಲಾಯಿತು. ಖಂಡಿತವಾಗಿಯೂ ಬಿಜೆಪಿ ಮತ್ತು ಅದರ ಸರ್ವಶಕ್ತಿ ಜನರ ಇಚ್ಛಾಶಕ್ತಿಯ ಹೋರಾಟದ ಎದುರು ಸೋತಿದೆ. ಬಿಜೆಪಿ ಸರಕಾರದ ಪೊಲೀಸರ ಎಲ್ಲಾ ಬೆದರಿಕೆ ದೌರ್ಜನ್ಯ, ಸರ್ಪಗಾವಲು, ಬಲಪ್ರಯೋಗಗಳನ್ನು ಹಿಮ್ಮೆಟ್ಟಿಸಿ ನಾವಿಂದು ಟೋಲ್‌ಗೇಟ್ ತಲುಪಿದ್ದೇವೆ. ಆ ಮೂಲಕ ಬಿಜೆಪಿ ಸರಕಾರ ಸರ್ವಾಧಿಕಾರಕ್ಕೆ ಸವಾಲು ಒಡ್ಡಿದ್ದೇವೆ. ಇದು ತುಳುನಾಡು ಒಗ್ಗಟ್ಟಿನಿಂದ ನಿಂತ ಫಲ. ಈ ಗೆಲುವು ಸರ್ವರಿಗೂ ಸಲ್ಲುತ್ತದೆ. ಮತ್ತೆ ಬುಧವಾರ ಹೋರಾಟ ಸಮಿತಿ ಸಭೆ ಸೇರಲಿದೆ ಎಂಬುದಾಗಿ ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ಪ್ರಧಾನ ಸಂಚಾಲಕ ಮುನೀರ್ ಕಾಟಿಪಳ್ಳ ಹೇಳಿದ್ದಾರೆ. ಬುಧವಾರ ಸಭೆ ಸೇರಿದ ಹೋರಾಟ ಸಮಿತಿಯು ಅಕ್ಟೋಬರ್ 28 ರಿಂದ ಟೋಲ್‌ಗೇಟ್ ಬಳಿ ಅಹೋರಾತ್ರಿ ಧರಣಿ ನಡೆಸುವುದಾಗಿ ತೀರ್ಮಾನಿಸಿದೆ.

**ಸುರತ್ಕಲ್ ಎನ್ಐಟಿಕೆ ಟೋಲ್‌ಗೇಟ್ ಹೋರಾಟದ ಹಿನ್ನೆಲೆ**

ಮುಂಬಯಿ–ಕೇರಳ ರಾಷ್ಟ್ರೀಯ ಹೆದ್ದಾರಿ ಉಡುಪಿಯಿಂದ ಮಂಗಳೂರಿಗಾಗಿ ಕೇರಳಕ್ಕೆ ದಕ್ಷಿಣಾಭಿಮುಖ ಸಾಗುತ್ತದೆ. ಈ ಹೆದ್ದಾರಿಯಲ್ಲಿ ಮಂಗಳೂರಿನ ನಂತೂರು ಎಂಬಲ್ಲಿಂದ ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ಪೂರ್ವಾಭಿಮುಖವಾಗಿ ಆರಂಭವಾಗಿದ್ದು, ಅಲ್ಲಿಂದ ಮೂರ್ನಾಲ್ಕು ಕಿ.ಮೀ. ದೂರದಲ್ಲಿರುವ ಪಡೀಲು ಎಂಬಲ್ಲಿಂದ ಹಳೆಯ ಮಂಗಳೂರು–ಬೆಂಗಳೂರು ಹೆದ್ದಾರಿಯೇ ಮುಂದುವರಿಯುತ್ತದೆ. ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಪುನರ್ ನಿರ್ಮಾಣ ಪ್ರಕ್ರಿಯೆ ಪ್ರಾರಂಭವಾದಾಗ, ಪಡೀಲಿನಿಂದ ಸುಮಾರು 15 ಕಿ.ಮೀ.ಪೂರ್ವಕ್ಕೆ ಬ್ರಹ್ಮರಕೂಡ್ಲು ಎಂಬಲ್ಲಿ ಟೋಲ್‌ಗೇಟ್ ರಚಿಸಲು ಆ ರಸ್ತೆಯ ಗುತ್ತಿಗೆದಾರರಿಗೆ ಅವಕಾಶ ನೀಡಲಾಗಿತ್ತು ಹಾಗೂ ಆ ಗೇಟು ಆರಂಭವೂ ಆಗಿತ್ತು. ಅದರ ಬಳಿಕ ಬ್ರಹ್ಮರಕೂಡ್ಲು–ನಂತೂರು–ಸುರತ್ಕಲ್



ವರೆಗಿನ ರಾಷ್ಟ್ರೀಯ ಹೆದ್ದಾರಿಯನ್ನು ಬಲಪಡಿಸುವ ಅಗತ್ಯ ಕಂಡಿದ್ದು ನಾಲ್ಕು ಫ್ಲೈ ಓವರ್‌ಗಳನ್ನೊಳಗೊಂಡ ಹೆದ್ದಾರಿಯನ್ನು ಪುನಾರಚಿಸುವ ಯೋಜನೆಗೆ ಈ ಹೆದ್ದಾರಿ ಮಧ್ಯೆಯೇ ಬರುವ ನವಮಂಗಳೂರು ಬಂದರು ಮಂಡಳಿ (ಎನ್‌ಎಂಪಿಟಿ) ಹೂಡಿಕೆಗೆ ಮುಂದಾಗಿ ನಿರ್ಮಾಣ ಗುತ್ತಿಗೆ ನೀಡಿತು. ಈ ಗುತ್ತಿಗೆದಾರರು ಉಡುಪಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಮೇಲೆಯೇ ಇರುವ ಸುರತ್ಕಲ್ ಎನ್ಐಟಿಕೆ ಬಳಿ ಟೋಲ್‌ಗೇಟ್ ಆರಂಭಿಸಿ ಟೋಲ್‌ಸಂಗ್ರಹ ಆರಂಭಿಸಿಯೇ ಬಿಟ್ಟರು. ಇದು 7 ವರ್ಷಗಳ ಹಿಂದೆ.

ಇದರ ಮುಂದಿನ ವರ್ಷ ಮುಂಬಯಿ–ಕೇರಳ ರಾಷ್ಟ್ರೀಯ ಹೆದ್ದಾರಿಯ ನವೀಕರಣ ಹಾಗೂ ಅಗಲೀಕರಣ ಪ್ರಕ್ರಿಯೆ ಪ್ರಾರಂಭವಾಗಿ ಉಡುಪಿ ಜಿಲ್ಲೆಯ ಸಾಸ್ತಾನದಲ್ಲಿ ಒಂದು ಟೋಲ್‌ಗೇಟ್, ಆ ಜಿಲ್ಲೆಯ ದಕ್ಷಿಣ ಗಡಿಯಲ್ಲಿ ಹೆಜಮಾಡಿ ಎಂಬಲ್ಲಿ ಒಂದು ಟೋಲ್‌ಗೇಟ್, ಅಲ್ಲಿಂದ ಮುಂದೆ ತೀರಾ ದಕ್ಷಿಣಕ್ಕೆ ಕೇರಳದ ಗಡಿಯಲ್ಲಿರುವ ದ.ಕ.ಜಿಲ್ಲೆಯ ತಲಪಾಡಿ ಎಂಬಲ್ಲಿ ಮತ್ತೊಂದು ಟೋಲ್‌ಗೇಟನ್ನು ಆ ಅಷ್ಟು ಭಾಗದ ನಿರ್ಮಾಣ ಗುತ್ತಿಗೆದಾರರು ಆರಂಭಿಸಿದರು. ತಲಪಾಡಿ ಮತ್ತು ಹೆಜಮಾಡಿ ಮಧ್ಯೆ ಸುಮಾರು 55 ಕಿ.ಮೀ. ಅಂತರ ಇದೆ. ಸುರತ್ಕಲ್ ಟೋಲ್‌ಗೇಟ್ ಈ ಮೊದಲೇ ಪ್ರಾರಂಭವಾದದ್ದರಿಂದ ಇವೆರಡು ಗೇಟುಗಳ ಮಧ್ಯೆ ಮೂರನೇ ಟೋಲ್‌ಗೇಟ್ ಹೆಜಮಾಡಿ ಗೇಟಿನಿಂದ ಕೇವಲ 15 ಕಿ.ಮೀ.ಗಳ ಅಂತರದಲ್ಲಿ ಇರುವಂತಾಗಿದೆ. ಹೆದ್ದಾರಿಯಲ್ಲಿ 2 ಟೋಲ್‌ಗೇಟ್‌ಗಳ ಮಧ್ಯೆ 60 ಕಿ.ಮೀ.ಗಿಂತ ಕಡಿಮೆ ಅಂತರ ಇರುವಂತಿಲ್ಲ ಎಂಬುದನ್ನು ಕೇಂದ್ರ ಹೆದ್ದಾರಿ ಸಚಿವರಾದ ನಿತಿನ್ ಗಡ್ಕರಿಯವರು ಈಚೆಗೆ ಪಾರ್ಲಿಮೆಂಟಿನಲ್ಲೂ ಹೇಳಿದರು. ಮಂಗಳೂರು–ಉಡುಪಿ ಪ್ರದೇಶದ ನಾಗರಿಕರು ಹೆಜಮಾಡಿಯಲ್ಲಿ ಟೋಲ್‌ಗೇಟ್ ಬಂದಿರುವುದರಿಂದ ಸುರತ್ಕಲ್‌ನ ಟೋಲ್‌ಗೇಟನ್ನು ರದ್ದುಪಡಿಸಬೇಕೆಂದು ಸರಕಾರವನ್ನು ಆಗ್ರಹಿಸಲು ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿಯನ್ನು ಈಗ 6 ವರ್ಷಗಳ ಹಿಂದೆ ರಚಿಸಿಕೊಂಡಿದ್ದು, ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ, ಕೇಂದ್ರ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸುತ್ತಲೇ ಬಂದಿದ್ದಾರೆ. 15 ಕಿ.ಮೀ.ಗಳ ಅಂತರದಲ್ಲಿ ಒಂದೇ ಹೆದ್ದಾರಿಯಲ್ಲಿ 2 ಕಡೆ ಟೋಲ್ ಸಂಗ್ರಹಿಸುವುದು ಅಕ್ರಮ ಎಂಬುದನ್ನು ಸ್ಥಳೀಯಾಡಳಿತಕ್ಕೆ ಸರಕಾರಗಳಿಗೆ ಮನವರಿಕೆ ಮಾಡುತ್ತಾ ಬಂದಿದ್ದಾರೆ. ರಾಜ್ಯದ ವಿಧಾನಸಭೆಯಲ್ಲೂ ಕೇಂದ್ರದ ಲೋಕಸಭೆಯಲ್ಲೂ ಈ ವಿಷಯ ಚರ್ಚೆಯಾಗಿದ್ದು ಸುರತ್ಕಲ್ ಟೋಲ್‌ಗೇಟನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಕೇಂದ್ರದ ಹೆದ್ದಾರಿ ಸಚಿವರು, ರಾಜ್ಯದ ಸಾರಿಗೆ ಸಚಿವರುಗಳೂ ಶಾಸನ ಸಭೆಗಳಲ್ಲೇ ಭರವಸೆ ಕೊಟ್ಟಿದ್ದರೂ ಇಲ್ಲಿನವರೆಗೂ ಸುರತ್ಕಲ್ ಟೋಲ್‌ಗೇಟ್ ತೆರವಾಗಿರುವುದಿಲ್ಲ.

ವಿಶೇಷವೆಂದರೆ, ರಾಷ್ಟ್ರೀಯ ಹೆದ್ದಾರಿಯು ಕೇಂದ್ರ ಸರಕಾರದ ವ್ಯಾಪ್ತಿಗೆ ಬರುವುದರಿಂದ ದ.ಕ.ಜಿಲ್ಲೆಯ ಸಂಸತ್ ಸದಸ್ಯ ನಳಿನ್ ಕುಮಾರ್ ಕಟೀಲ್ ಅವರು ಸುರತ್ಕಲ್ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿಯು ಪ್ರತಿಭಟನೆಗೆ ಕರೆಕೊಟ್ಟಾಗಲೆಲ್ಲಾ, ಇನ್ನೆರಡು ತಿಂಗಳೊಳಗೆ–ಒಂದು ತಿಂಗಳೊಳಗೆ–ಹದಿನೈದು ದಿನಗಳೊಳಗೆ ಗೇಟ್ ತೆರವುಗೊಳಿಸುವುದಾಗಿ ಭರವಸೆಗಳನ್ನು ಕೊಡುತ್ತಾ ಬಂದಿದ್ದಾರೆ. ಈ ಟೋಲ್‌ಗೇಟ್ ಬಾಧಿತರು ವಾಸವಾಗುಳ್ಳ ಪ್ರದೇಶದ ಮಂಗಳೂರು ದಕ್ಷಿಣ, ಮಂಗಳೂರು ಉತ್ತರ, ಮುಲ್ಕಿ ಶಾಸಕರು ತಮ್ಮ ಪಕ್ಷದ ಸಂಸತ್ ಸದಸ್ಯರಾದ ಕಟೀಲ್ ಅವರ ಮಾತನ್ನೇ ಪುನರುಚ್ಚರಿಸುತ್ತಾರೆ. ಸುರತ್ಕಲ್ ಗೇಟ್ ಒಂದರಲ್ಲೇ ದಿನಕ್ಕೆ ರೂ.12–13 ಲಕ್ಷ ಟೋಲ್ ಸಂಗ್ರಹವಾಗುತ್ತದೆ. ಗೇಟ್ ನಿರ್ವಹಣೆ ಮುಂದುವರಿಯುವಲ್ಲಿ ಶಾಸಕ–ಸಂಸದರಿಗೆ ಆರ್ಥಿಕ ಹಿತಾಸಕ್ತಿ ಇದೆಯೇ? ಇರುವುದಾಗಿ ಜನರು ಸಂದೇಹ ಪಡುತ್ತಿದ್ದಾರೆ.

ಈ ವರ್ಷ ಮಾರ್ಚ್ 22 ರಂದು ಹೆಜಮಾಡಿ ಟೋಲ್‌ಗೇಟ್‌ನಿಂದ ಸುರತ್ಕಲ್ ಟೋಲ್‌ಗೇಟ್ ವರೆಗಿನ 15 ಕಿ.ಮೀ.ಹೆದ್ದಾರಿಯಲ್ಲಿ ಉಡುಪಿ ಹಾಗೂ ದ.ಕ.ಜಿಲ್ಲೆಯ 1000 ಕ್ಕೂ ನಾಗರಿಕರು ಹೋರಾಟ ಸಮಿತಿ ನೇತೃತ್ವದಲ್ಲಿ ಬೃಹತ್ ಜಾಥಾ ನಡೆಸಿದ್ದಾರೆ. ಕಳೆದ ತಿಂಗಳ ಸೆಪ್ಟೆಂಬರ್ 13 ರಂದು ಸುರತ್ಕಲ್ ಟೋಲ್‌ಗೇಟ್ ಸಮೀಪ ಪ್ರತಿಭಟನಾ ಪ್ರದರ್ಶನ ನಡೆದಿದ್ದೆ. ಅಕ್ಟೋಬರ್ 18ರೊಳಗೆ ಟೋಲ್ ತೆರವುಗೊಳಿಸದಿದ್ದರೆ ಅಕ್ಟೋಬರ್ 18 ರಂದು ಟೋಲ್‌ಗೇಟ್‌ಗೆ ಮುತ್ತಿಗೆ ಹಾಕಲಾಗುವುದೆಂದು ಎಚ್ಚರಿಕೆ ನೀಡಿದ್ದಾರೆ. ಸಂಸದರು ಹಾಗೂ ಜಿಲ್ಲಾಡಳಿತದ ಬಳಿಕದ ಒಂದು ದಿನಾಂಕದ ಭರವಸೆ ಕೊಟ್ಟಿದ್ದರೂ ಜನರು ಅದನ್ನು ನಂಬುತ್ತಿಲ್ಲ. ಹಾಗಾಗಿ ಇದೇ 18 ರಂದು ಟೋಲ್‌ಗೇಟ್ ಮುತ್ತಿಗೆ ಕಾರ್ಯಕ್ರಮ ನಡೆದಿದೆ. 300ಕ್ಕೂ ಹೆಚ್ಚು ಜನರನ್ನು ಪೊಲೀಸರು ಬಂಧಿಸಿ ಬಿಡುಗಡೆಗೊಳಿಸಿದ್ದಾರೆ. 25–30 ಮಂದಿಯ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

# ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಭಾರತವನ್ನು ವಿಶ್ವದ ಹಸಿವಿನ ತಾಣವನ್ನಾಗಿ ಮಾಡಿದೆ

**ಪುಟ 9 ರಿಂದ**

ತಿಂಗಳುಗಳಲ್ಲಿ ಚಾಲ್ತಿಯಲ್ಲಿರುವ ಬೆಲೆಗಳಿಗಿಂತ ಶೇಕಡಾ 7–9 ರಷ್ಟು ಹೆಚ್ಚಾಗಿದೆ. ಮೋದಿ ಸರ್ಕಾರದ ಅಧಿಕಾರದ ಹೆಚ್ಚಿನ ಅವಧಿಯಲ್ಲಿ, ಆಡಳಿತದ ಹೆಚ್ಚಿನ ಹಣಕಾಸು ಖರ್ಚುಗಳ ತುಂಬಿಸುವಿಕೆಗಾಗಿ, ಇಂಧನದ ಮೇಲೆ ಭಾರೀ ತೆರಿಗೆಯನ್ನು ಬಳಸಿದೆ. ಸರ್ಕಾರದ ಖರ್ಚು. ಪ್ರಾಥಮಿಕವಾಗಿ ಭಾರೀ ತೆರಿಗೆಯಿಂದ ಉಂಟಾಗುವ ಇಂಧನದ ಹೆಚ್ಚಿನ ಬೆಲೆಗಳು ಜನರ ಮೇಲೆ ದುರಂತಕಾರಿ ಪರಿಣಾಮವನ್ನು ಬೀರುತ್ತದೆ. ಆಹಾರ ಸೇರಿದಂತೆ ಇತರ ಸರಕುಗಳ ಬೆಲೆಗಳ ಮೇಲೆ ದುರಂತಮಯ ಪರಿಣಾಮವನ್ನು ಬೀರುತ್ತದೆ ಎಂಬುದು ಸ್ಪಷ್ಟವಾಗಿದೆ.

ಕೇಂದ್ರ ಸರ್ಕಾರವು ಸಾಮಾನ್ಯ ಜನರು ಮತ್ತು ಸಣ್ಣ ಉತ್ಪಾದಕರ ಮೇಲೆ ಹೆಚ್ಚಿನ ತೆರಿಗೆ ಹೊರೆಯನ್ನು ಹೇರಲು ಹೊಸ ಜಿಎಸ್‌ಟಿ ಆಡಳಿತದ ಕ್ರಮವನ್ನು ಬಳಸಿದೆ ಮತ್ತು ಈ ಆದಾಯದ ಕಾನೂನುಬದ್ಧ ಪಾಲನ್ನು ರಾಜ್ಯಗಳಿಗೆ ವರ್ಗಾಯಿಸುವ ಬದಲು ಜಿಎಸ್‌ಟಿ ಸಂಗ್ರಹಣೆಯಲ್ಲಿ ಸಿಂಹಪಾಲು ಪಡೆಯುತ್ತಿದೆ. ದೊಡ್ಡ ಸಂಸ್ಥೆಗಳಿಗೆ ತೆರಿಗೆ ರಿಯಾಯಿತಿಗಳನ್ನು ನೀಡಲಾಗಿದೆ ಮತ್ತು ಅವರ ಸಾಲಗಳನ್ನೂ ಕೂಡಾ ಮನ್ನಾ ಮಾಡಲಾಗಿದೆ. ಸಾಮಾನ್ಯ ಜನರು ಅವರ ಖರೀದಿಗಳ ಮೇಲೆ ತೆರಿಗೆ ವಿಧಿಸಲಾಗಿದೆ. ಮೂರು ದಶಕಗಳ ಆರ್ಥಿಕ ಉದಾರೀಕರಣದ ಪರಿಣಾಮವಾಗಿ ರಸಗೊಬ್ಬರಗಳು, ಖಾದ್ಯ ತೈಲಗಳು ಮತ್ತು ಬೇಳೆಕಾಳುಗಳಿಗೆ ಹೆಚ್ಚಿದ ಆಮದು ಅವಲಂಬನೆ–ಇತ್ತೀಚಿನ ವರ್ಷಗಳಲ್ಲಿ ಈ ಸರಕುಗಳ ಬೆಲೆಗಳಲ್ಲಿ ಹಣದುಬ್ಬರವನ್ನು ಜಾಗತಿಕವಾಗಿಯೂ ಆಮದು ಮಾಡಿಕೊಳ್ಳಲು ಕೊಡುಗೆ ನೀಡಿದೆ.

ಸುಳ್ಳು ಅಂಕಿಅಂಶಗಳನ್ನು ನೆಪವಾಗಿಟ್ಟುಕೊಂಡು ಈ ದೇಶದ ದುಡಿಯುವ ಜನರನ್ನು ಮೂರ್ಖರನ್ನಾಗಿಸಲು ಸಾಧ್ಯವಿಲ್ಲ. ಈ ಸರ್ಕಾರದ ದುರಂತ ಆರ್ಥಿಕ ನೀತಿಗಳಿಂದ ಅವರು ಎದುರಿಸಿದ ಸಂಕಷ್ಟಗಳು ಎಂದಿಗೂ ಮರೆಯಲಾಗದು. ನಿರುದ್ಯೋಗ, ಬಡತನ ಮತ್ತು ಆಹಾರದ ಅಭದ್ರತೆ ಪ್ರಸ್ತುತ ಜ್ವಲಂತ ಸಮಸ್ಯೆಗಳಾಗಿವೆ. ಈ ಜೀವನೋಪಾಯದ ಸಮಸ್ಯೆಗಳ ಬಗ್ಗೆ ಜನತೆಯನ್ನು ಒಟ್ಟುಗೂಡಿಸಲು ಸಿಪಿಐ(ಎಂ) ಬದ್ಧವಾಗಿದೆ ಮತ್ತು ಜನರು ಎದುರಿಸುತ್ತಿರುವ ಕಷ್ಟಗಳಿಗೆ ಈ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡಲು ದೇಶದ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸಿಪಿಐ(ಎಂ) ಕೈಜೋಡಿಸುತ್ತದೆ.

**ಅನು: ನಾಗರಾಜ ನಂಜುಂಡಯ್ಯ**



ತನ್ನ ಪಕ್ಷದಿಂದ ಬೆಂಬಲದ ಬದಲು ಪಕ್ಷದ ಮುಖ್ಯಸ್ಥರಿಂದ ಅಸಮಾಧಾನ ಎದುರಿಸಬೇಕಾಗಿ ಬಂದು ರಾಜೀನಾಮೆ ನೀಡಿದ ಎಎಪಿ ಮುಖಂಡ ರಾಜೇಂದ್ರ ಪಾಲ್ ಗೌತಮ್

# ಬಿಜೆಪಿಗಷ್ಟೇ ಅಲ್ಲ, ಆಮ್ ಆದ್ಮಿ ಪಕ್ಷಕ್ಕೂ ಅಂಬೇಡ್ಕರ್ ರವರು ಚುನಾವಣಾ ಸಾಧನವಷ್ಟೇ!

**ದಿಲ್ಲಿಯ ಎಎಪಿ ನಾಯಕರೊಬ್ಬರು ಬೌದ್ಧಧರ್ಮ ದೀಕ್ಷಾ ಸಮಾರಂಭದಲ್ಲಿ ಭಾಗವಹಿಸಿದ್ದಕ್ಕೆ ಸಂಘ ಪರಿವಾರದ ರೋಷಕ್ಕೆ ಗುರಿಯಾದಾಗ ತನ್ನ ಪಕ್ಷದಿಂದಲೂ ಬೆಂಬಲ ಸಿಗದೇ ರಾಜೀನಾಮೆ ನೀಡಬೇಕಾಗಿ ಬಂದಿರುವ ಘಟನೆ ಆರೆಸ್ಸೆಸ್–ಬಿಜೆಪಿಗಷ್ಟೇ ಅಲ್ಲ, ಅದಕ್ಕೆ ತಾನೇ ರಾಷ್ಟ್ರೀಯ ಪರ್ಯಾಯವೆಂದು ಬಿಂಬಿಸಿಕೊಳ್ಳುತ್ತಿರುವ ಆಮ್ ಆದ್ಮಿ ಪಕ್ಷಕ್ಕೂ ಡಾ.ಬಿ.ಆರ್. ಅಂಬೇಡ್ಕರ್ ಕೇವಲ ಒಂದು ಚುನಾವಣಾ ಗಳಿಕೆಯ ಸಾಧನವಷ್ಟೇ ಆಗಿದ್ದಾರೆ ಎಂಬುದನ್ನು ತೋರಿಸುತ್ತದೆ. ಈ ಸಂದರ್ಭದಲ್ಲಿ ಕೇಜ್ರೀವಾಲ್ ಚಾರಿತ್ರಿಕವಾಗಿ ಅಂಚಿಗೆ ತಳ್ಳಲ್ಪಟ್ಟವರಿಗೆ ಮೀಸಲಾತಿಯ ಕ್ರಮವನ್ನು ವಿರೋಧಿಸುವ 'ಯೂತ್ ಫಾರ್ ಇಕ್ವಾಲಿಟಿ'ಯಲ್ಲಿ ಸಕ್ರಿಯರಾಗಿದ್ದರು ಎಂಬುದನ್ನು ಮರೆಯುವುದು ಕಷ್ಟ, ಎಎಪಿ ಆಡಳಿತವಿರುವ ರಾಜ್ಯಗಳಲ್ಲಿ ಅಂಬೇಡ್ಕರ್ ಅವರನ್ನು ಆರಾಧಿಸುತ್ತಿರುವುದು ಕೇವಲ ಚುನಾವಣಾ ಲಾಭಕ್ಕಾಗಿಯೇ ಹೊರತು ಸೈದ್ಧಾಂತಿಕ ಬದ್ಧತೆಯಿಂದಲ್ಲ ಎಂಬುದು ಕಳೆದ ಕೆಲವು ದಿನಗಳ ಘಟನೆಗಳಿಂದ ತೋರುತ್ತದೆ. ಬಹುಶಃ ಎಎಪಿ ಈ ಆರೋಪವನ್ನು ಅಲ್ಲಗಳೆಯುವುದು ಬಹಳ ಕಷ್ಟ ಎನ್ನುತ್ತಾರೆ ಡಾ. ರಾಮ್ ಪುನಿಯಾನಿ, ಐಐಟಿ –ಮುಂಬೈಯ ನಿವೃತ್ತ ಪ್ರಾಧ್ಯಾಪಕರು ಮತ್ತು ಈಗ ಮಾನವ ಹಕ್ಕುಗಳ ಹೋರಾಟದಲ್ಲಿ ಸಕ್ರಿಯರಾಗಿರುವವರು.**

**ಪ್ರೊ. ರಾಮ್ ಪುನಿಯಾನಿ** ಕೃಪೆ: ನ್ಯೂಸ್‌ಕ್ಲಿಕ್, ಅಕ್ಟೋಬರ್ 15

ಇತ್ತೀಚೆಗೆ, ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ ಮತ್ತು ದಿಲ್ಲಿಯಲ್ಲಿ ಆ ಪಕ್ಷದ ಸರಕಾರದಲ್ಲಿ ಸಚಿವ ರಾಜೇಂದ್ರ ಪಾಲ್ ಗೌತಮ್ ಅವರು ಅಕ್ಟೋಬರ್ 5 ರಂದು ಅಶೋಕ್ ವಿಜಯದಶಮಿಯಂದು ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ರಾಜೀನಾಮೆ ನೀಡಬೇಕಾಯಿತು. ಈ ಕಾರ್ಯಕ್ರಮವು ಬೌದ್ಧ ಧರ್ಮ ದೀಕ್ಷಾ ಸಮಾರಂಭವಾಗಿದ್ದು, ಸಾವಿರಾರು ಜನರು, ಹೆಚ್ಚಾಗಿ ದಲಿತರು, ಭಾಗವಹಿಸಿದ್ದರು. ಅವರಿಗೆ ಇದು ಬೌದ್ಧ ಧರ್ಮವನ್ನು ಸ್ವೀಕರಿಸುವ ಮತ್ತು ಹಿಂದೂ ಧರ್ಮವನ್ನು ತ್ಯಜಿಸುವ ಒಂದು ಗಂಭೀರ ಸಂದರ್ಭವಾಗಿತ್ತು. ಅವರು ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿ ಮತ್ತು ಭಾರತೀಯ ಸಂವಿಧಾನದ ಕರಡು ರಚನಾ ಸಮಿತಿಯ ಮುಖ್ಯಸ್ಥ ಡಾ ಬಿಆರ್ ಅಂಬೇಡ್ಕರ್ ಅವರ ಹೆಜ್ಜೆಗಳನ್ನು ಅನುಸರಿಸಿ ಬಂದಿದ್ದರು. 1956 ರಲ್ಲಿ ಇದ್ದಂತೆ, ಸಮಾರಂಭದಲ್ಲಿ ಇಪ್ಪತ್ತೆರಡು ಪ್ರತಿಜ್ಞೆಗಳನ್ನು ತೆಗೆದುಕೊಳ್ಳುವುದು ಇತ್ತು. ಬೌದ್ಧ ಧರ್ಮವನ್ನು ಸ್ವೀಕರಿಸುವವರು ಬ್ರಹ್ಮ, ವಿಷ್ಣು, ಮಹೇಶ್ವರ ಮತ್ತು ಗೌರಿಯಂತಹ ಹಿಂದೂ ದೇವರುಗಳು ಮತ್ತು ದೇವತೆಗಳನ್ನು ಪೂಜಿಸುವುದನ್ನು ಬಿಟ್ಟು ಮಾನವತಾವಾದ, ತಾರತಮ್ಯರಹಿತತೆ, ಪ್ರಾಮಾಣಿಕತೆ, ಅಹಿಂಸೆ, ಸತ್ಯತೆ ಇತ್ಯಾದಿಗಳನ್ನು ಅಳವಡಿಸಿಕೊಳ್ಳಬೇಕೆಂದು ನಿರೀಕ್ಷಿಸಲಾಗುತ್ತದೆ.

**ವಿಲಕ್ಷಣ ಪ್ರತಿಕ್ರಿಯೆಗಳು**

ವಿಪರ್ಯಾಸವೆಂದರೆ ಆರೆಸ್ಸೆಸ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಹಾರ ಹಾಕುತ್ತಲೇ ಅವರ ಇಪ್ಪತ್ತೆರಡು ಪ್ರತಿಜ್ಞೆಗಳನ್ನು ವಿರೋಧಿಸಬಹುದು. ಸಮಾರಂಭದಲ್ಲಿ ಗೌತಮ್ ಅವರ ಉಪಸ್ಥಿತಿಯು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರೆಸ್ಸೆಸ್) ಮತ್ತು ಅದರ ಅಂಗಸಂಘಟನೆಗಳನ್ನು ಎಷ್ಟೊಂದು ರೊಚ್ಚಿಗೆಬ್ಬಿಸಿತು ಎಂದರೆ, ಅವರಿಗೆ ಹಿಂದೂ ವಿರೋಧಿ ಎಂಬ ಹಣೆಪಟ್ಟಿ ಹಚ್ಚುವ ಅಭಿಯಾನವನ್ನೇ ಆರಂಭಿಸಿತು. ದೆಹಲಿಯಲ್ಲಿ ಸರ್ಕಾರವನ್ನು ನಡೆಸುತ್ತಿರುವ ಆದರೆ ತನ್ನ ಒಬ್ಬ ನಾಯಕ ಮತ್ತು ಸಚಿವರನ್ನು ಬೆಂಬಲಿಸದ ಎಎಪಿಯ ವರ್ತನೆ ಕೂಡ ಅಷ್ಟೇ ಗಮನಾರ್ಹವಾಗಿದೆ. ಇವು ವಿಲಕ್ಷಣ ಪ್ರತಿಕ್ರಿಯೆಗಳು. ಏಕೆಂದರೆ ಎರಡೂ ಸಂಘಟನೆಗಳು ಅಂಬೇಡ್ಕರ್ ಅವರನ್ನು ಆರಾಧಿಸುವುದಾಗಿ ಹೇಳಿಕೊಳ್ಳುತ್ತವೆ ಮತ್ತು ಸರ್ಕಾರಿ ಕಚೇರಿಗಳಲ್ಲಿ ಅವರ ಭಾವಚಿತ್ರಗಳನ್ನು ಪ್ರಮುಖವಾಗಿ ಪ್ರದರ್ಶಿಸುತ್ತವೆ. ಕೇಂದ್ರದಲ್ಲಿ ಅಧಿಕಾರದ ಸೂತ್ರಗಳನ್ನು ನಿಯಂತ್ರಿಸುವ ಬಿಜೆಪಿಯ ಮೂಲಸಂಘಟನೆ ಆರೆಸ್ಸೆಸ್ ಮತ್ತು ಎಎಪಿ, ಅಂಬೇಡ್ಕರ್ ಅವರ ವಿಚಾರಗಳು ಮತ್ತು ಮಾತುಗಳು ಮತ್ತು ಜೀವನದುದ್ದಕ್ಕೂ ಅವರು ಶ್ರಮಿಸಿದ ಮೌಲ್ಯಗಳನ್ನು ಎಷ್ಟು ಸುಲಭವಾಗಿ ತೊಡೆದು ಹಾಕಿದವು ಎಂಬುದನ್ನು ಅವರ ಪ್ರತಿಕ್ರಿಯೆಗಳು ಪ್ರದರ್ಶಿಸಿವೆ.

ಗೌತಮ್ ಅವರ ಮನೆಯ ಹೊರಗೆ ಜಮಾಯಿಸಿದ ಬಿಜೆಪಿ ಕಾರ್ಯಕರ್ತರ ಗುಂಪು ಗೌತಮ್ ಅವರ ವಿರುದ್ಧ ಘೋಷಣೆಗಳನ್ನು ಕೂಗಿದರು, ನಂತರ ಭಗವಾನ್ ರಾಮನ ಚಿತ್ರವಿರುವ ಕೇಸರಿ ಧ್ವಜವನ್ನು ಹಾರಿಸಿದರು. ಕಾರ್ಯಕ್ರಮದಲ್ಲಿ ಗೌತಮ್ ಹಿಂದೂ ದೇವರು ಮತ್ತು ದೇವತೆಗಳನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿ ಸಾಮಾಜಿಕ ಮಾಧ್ಯಮಗಳು ಮತ್ತು ಸರ್ಕಾರದ ಪರ ಮಾಧ್ಯಮಗಳು ಮಿತಿಮೀರಿ ಪ್ರಚಾರ ಮಾಡಿದವು. ದೆಹಲಿ ಬಿಜೆಪಿ ಅಧ್ಯಕ್ಷ ಆದೇಶ್ ಗುಪ್ತಾ ಗೌತಮ್ ವಿರುದ್ಧ ದೂರು ದಾಖಲಿಸಿದ್ದು, ದೆಹಲಿ ಪೊಲೀಸರು ಅವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಹಿಂದೂ ವಿರೋಧಿ ಎಂದು ಹೆಸರಿಸುವ ಪೋಸ್ಟರ್‌ಗಳು ಗುಜರಾತ್‌ನಲ್ಲಿ ಚುನಾವಣಾ ಪ್ರಚಾರದಲ್ಲಿ ಕಾಣಿಸಿಕೊಂಡಿವೆ. ಕೇಜ್ರಿವಾಲ್ ತಕ್ಷಣವೇ ತಾನು ಕೃಷ್ಣ ಜನ್ಮಾಷ್ಟಮಿಯಂದು ಜನಿಸಿದವರು ಮತ್ತು ಕಟ್ಟಾ ಹಿಂದೂ ಎಂದು ಹೇಳಿದರು, ನಂತರ ಗೌತಮ್ ಇಪ್ಪತ್ತೆರಡು ಪ್ರತಿಜ್ಞೆಗಳನ್ನು ತೆಗೆದುಕೊಳ್ಳುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಕೊನೆಗೂ ಗೌತಮ್ ರಾಜೀನಾಮೆ ನೀಡಿದರು. ಮತ್ತೆ–ಮತ್ತೆ ಸ್ಪಷ್ಟಪಡಿಸಿದಂತೆ, ಅಕ್ಟೋಬರ್ 5 ರಂದು ಜನರು ಕೈಗೊಂಡ ಪ್ರತಿಜ್ಞೆಗಳು ಅಂಬೇಡ್ಕರ್ ಅವರು 1956 ರಲ್ಲಿ ಸುಮಾರು ಮೂರು ಲಕ್ಷ ಅನುಯಾಯಿಗಳಿಗೆ ಬೋಧಿಸಿದವುಗಳೇ. ಅವರ ಬರಹಗಳಲ್ಲಿ ಈ ಪ್ರತಿಜ್ಞೆಗಳು ಪ್ರಮುಖ ಸ್ಥಾನವನ್ನು ಹೊಂದಿವೆ ಮತ್ತು ಇವು ಹಿಂದೂ ದೇವತೆಗಳನ್ನು ಪೂಜಿಸಬೇಡಿ ಎಂದು ಅನುಯಾಯಿಗಳನ್ನು ಕೇಳುತ್ತವೆ. ಆದಾಗ್ಯೂ, ಹಿಂದೂ ದೇವರುಗಳನ್ನು ಯಾವುದೇ ರೀತಿಯಲ್ಲಿ ಅವಮಾನಿಸುವುದಿಲ್ಲ.

**ಪ್ರಾತಃಸ್ಮರಣೀಯರು ಎಂಬ ಪೊಳ್ಳು ಮಾತು**

ಕಳೆದ ವಾರದ ಈ ಘಟನೆಯಿಂದ ಆರ್‌ಎಸ್‌ಎಸ್–ಬಿಜೆಪಿ ಆಧುನಿಕ ಭಾರತದಲ್ಲಿ ದಲಿತರ ದೊಡ್ಡ ಪೂಜನೀಯ ರಾಜಕೀಯ ಮೂರ್ತಿಯನ್ನುಬುಡವೇಲು ಮಾಡುತ್ತಲೇ ದಲಿತರನ್ನು ಓಲೈಸುವ ಸಂಕೀರ್ಣ ತಂತ್ರಮತ್ತು ಕೇಜ್ರಿವಾಲ್ ಅವರ ಅಂಬೇಡ್ಕರ್‌ರವರನ್ನು ಪೂಜನೀಯುಗೊಳಿಸುತ್ತಿರುವುದು ಎಷ್ಟು ಪೊಳ್ಳು ಎಂಬುದುಎದ್ದು ಕಂಡಿತು. ಆರ್‌ಎಸ್‌ಎಸ್ ಅಂಬೇಡ್ಕರ್ ಅವರನ್ನು ಪ್ರಾತಃಸ್ಮರಣೀಯರು ಎನ್ನುತ್ತದೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಆರ್‌ಎಸ್‌ಎಸ್ ಹಿನ್ನೆಲೆಯ ಪ್ರಮುಖ ನಾಯಕರು ತಮ್ಮ ವೃತ್ತಿಜೀವನಕ್ಕೆ ಅಂಬೇಡ್ಕರ್ ಅವರ ಸಮಾನತೆ ಮತ್ತು ನ್ಯಾಯದ ಹೋರಾಟಗಳಿಗೆ ಋಣಿಯಾಗಿರುವುದಾಗಿ ಹೇಳಿದ್ದಾರೆ. ಆರೆಸ್ಸೆಸ್ ಸಂಘಟನೆಗಳು ಅಂಬೇಡ್ಕರ್ ಅವರ ಜನ್ಮದಿನವನ್ನು ವಿಜೃಂಭಣೆಯಿಂದ ಆಚರಿಸುತ್ತವೆ.

ನಾಣ್ಯದ ಇನ್ನೊಂದು ಬದಿ ಅಂಬೇಡ್ಕರ್‌ರವರಮುಖಸ್ತುತಿ, ಇದು ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಬದಲಾಯಿಸುವ ಆರೆಸ್ಸೆಸ್ ಯೋಜನೆಯ ಭಾಗವಾಗಿದೆ. ಸ್ವಾಭಾವಿಕವಾಗಿಯೇ, ಇದು ಅಂಬೇಡ್ಕರರ ವಿಚಾರಗಳಿಗೆ ವಿರುದ್ಧವಾಗಿದೆ. (ಶತಮಾನದ ಹಿಂದೆ ಆರ್‌ಎಸ್‌ಎಸ್ ರಚನೆಯಾಗಿದ್ದುಕೂಡ ನಾಗ್ಪುರ ಪ್ರದೇಶದಲ್ಲಿ 'ಬ್ರಾಹ್ಮಣೇತರ' ಚಳವಳಿಯನ್ನು ಎದುರಿಸಲು). ಜಾತಿ–ವಿರೋಧಿ ಅಭಿಯಾನವು ಜಾತಿ ಆಧಾರಿತ ಶ್ರೇಣಿವ್ಯವಸ್ಥೆಯನ್ನು ಗುರಿಯಾಗಿಸಿದರೆ, ಆರ್‌ಎಸ್‌ಎಸ್ ಆರಂಭದಲ್ಲಿ ಜಾತಿಯ ಆಳವಾದ ಸಾಮಾಜಿಕ ಮತ್ತು ಆರ್ಥಿಕ ಬೇರುಗಳ ಬಗ್ಗೆ ಹೇಳದೆ ಎಲ್ಲಾ ಹಿಂದೂಗಳನ್ನು ಒಂದೇ ಸೂರಿನಡಿಯಲ್ಲಿ ಸಂಯೋಜಿಸಲು ಪ್ರಯತ್ನಿಸಿತು. ಹಿಂದೊಂದು ಸುವರ್ಣ ಕಾಲ ಇತ್ತು ಎನ್ನುವ ಆರೆಸ್ಸೆಸ್ ಈ ಪುರಾಣಕ್ಕೆ ತೋರಿಸಿದಉದಾಹರಣೆ ಭವಿಷ್ಯದಲ್ಲಿ ಮನುಸ್ಮೃತಿಯ ಆದೇಶಗಳನ್ನು ಪಾಲಿಸುವ ಪ್ರಭುತ್ವದ ಬ್ರಾಹ್ಮಣ ಹೇರಿಕೆ. ಕ್ರಮೇಣ, ಆರೆಸ್ಸೆಸ್ ತನ್ನ ಕಾರ್ಯತಂತ್ರಗಳು ಮತ್ತು ಭಾಷೆಯನ್ನು ಬದಲಾಯಿಸಿತು. ಇದು ಹಿಂದೂ ರಾಷ್ಟ್ರದ ಮೂಲ ಯೋಜನೆಯನ್ನು ಉಳಿಸಿಕೊಂಡಿದೆ, 1947 ರಲ್ಲಿ ರಚಿಸಲಾದ ಜಾತ್ಯತೀತ ಪ್ರಜಾಪ್ರಭುತ್ವ ಭಾರತಕ್ಕೆ ವಿರುದ್ಧವಾಗಿ ಆದರೆ ಹಿಂದೂ ಮಹಾಸಭಾದೊಂದಿಗೆ, ಅದು ಹಿಂದೂ ರಾಷ್ಟ್ರದ ಪ್ರಯತ್ನ ನಡೆಸಿತು. ಅದಕ್ಕೆ, ಕೇವಲ ಮುಸ್ಲಿಮರಿಗೆ ಸೀಮಿತವಾದ ಮುಸ್ಲಿಂ ದೇಶವೊಂದರ ಪ್ರಯತ್ನದಲ್ಲಿದ್ದ ಮುಸ್ಲಿಂ ಲೀಗ್‌ನಲ್ಲಿ ಒಂದು ಅವಳಿಯೂ ಸಿಕ್ಕಿತು ಎಂಬುದರಲ್ಲಿ ಸಂದೇಹವಿಲ್ಲ.

ಅಂಬೇಡ್ಕರ್ ಈ ಎರಡೂ ಧರ್ಮ ಆಧಾರಿತ ರಾಷ್ಟ್ರೀಯತೆಗಳು ನಿಷ್ಪ್ರಯೋಜಕವೆಂದು ಕಂಡುಕೊಂಡರು ಮತ್ತು ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತ ಪ್ರಭುತ್ವ ಬೇಕೆಂದರು. ಪಾಕಿಸ್ತಾನದ ಕುರಿತಾದ ಅವರ ಪುಸ್ತಕದ ಪರಿಷ್ಕೃತ ಆವೃತ್ತಿಯಲ್ಲಿ, ಅವರು ಹೊಸ ದೇಶದ ಬೇಡಿಕೆಯನ್ನು ವಿರೋಧಿಸಿದರು ಏಕೆಂದರೆ ಅದು ಪಾಕಿಸ್ತಾನದ ಆಚೆಗೆ ಬ್ರಿಟಿಷ್ ಭಾರತದಲ್ಲಿ ಉಳಿದಿರುವ ವಿಶಾಲವಾದ ಪ್ರದೇಶದಲ್ಲಿ ಹಿಂದೂ ರಾಷ್ಟ್ರಕ್ಕೆ ದಾರಿ ಮಾಡಿಕೊಡಬಹುದು ಎಂದು. ಧರ್ಮಾಧಾರಿತ ದೇಶಗಳ ಈ ಕಣ್ಣೋಟಗಳಲ್ಲಿ ಅಂಬೇಡ್ಕರ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಿಪತ್ತನ್ನು ಮುಂಗಂಡರು. ಇದಕ್ಕೆ ವ್ಯತಿರಿಕ್ತವಾಗಿ, ಆರೆಸ್ಸೆಸ್ ಅವರು ಪಾಶ್ಚಿಮಾತ್ಯ ವಿಚಾರಗಳನ್ನು ಎರವಲು ಪಡೆದರು ಮತ್ತು ಹಿಂದೂ ಪವಿತ್ರ ಪುಸ್ತಕಗಳಲ್ಲಿ ತಾವು ವೈಭವಯುತವೆಂದು ಪರಿಗಣಿಸುವದನ್ನು ನಿರ್ಲಕ್ಷಿಸಿದರು ಎಂದು ಸಂವಿಧಾನದ ಅವರ ಕರಡನ್ನು ಟೀಕಿಸಿದರು.

ಜಾತಿಯ ಬಗ್ಗೆ ಹೇಳುವುದಾದರೆ, ಅಂಬೇಡ್ಕರ್ ಎಂದಿಗೂ ಅದರ ನಿರ್ಮೂಲನೆಯೇ ಆಗಬೇಕು ಎಂದು ಬಯಸಿದರು. ಅವರ ಸಂವಿಧಾನವು ಕಾಲಾನಂತರದಲ್ಲಿ ಜಾತಿ ವ್ಯತ್ಯಾಸಗಳು ಮತ್ತು ತಾರತಮ್ಯವನ್ನು ನಿರ್ಮೂಲನೆ ಮಾಡುವ ಪರಿಸ್ಥಿತಿಗಳನ್ನು ಸೃಷ್ಟಿಸಲು ಮೀಸಲಾತಿ ನೀತಿಯನ್ನು ಮುಂದುವರೆಸಿತು. ಪ್ರಬಲ ಸಮುದಾಯಗಳಲ್ಲಿ ಮೀಸಲಾತಿಗೆ ವಿರೋಧವು 1981 ರಲ್ಲಿ ಗುಜರಾತ್‌ನಲ್ಲಿ ದಲಿತ ವಿರೋಧಿ ಹಿಂಸಾಚಾರ ಮತ್ತು 1986 ರಲ್ಲಿ ಉದ್ಯೋಗ ಮೀಸಲಾತಿಗಾಗಿ ಹಿಂದುಳಿದ ವರ್ಗಗಳ ವಿರುದ್ಧ ಇದೇ ರೀತಿಯ ಹಿಂಸಾಚಾರವಾಗಿ ಹೊರಹೊಮ್ಮಿತು.

**ಸಾಮಾಜಿಕ ಇಂಜಿನಿಯರಿಂಗ್ ಮತ್ತು ಯೂತ್ ಫಾರ್ ಇಕ್ವಾಲಿಟಿ**

ಭಾರತವು ಮಂಡಲ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಿದ ನಂತರ, ಆರೆಸ್ಸೆಸ್ ಬಾಬರಿ ಮಸೀದಿ ಇದ್ದಲ್ಲಿ ರಾಮಮಂದಿರ ಕಟ್ಟಬೇಕೆಂದು

ಪುಟ 14 ಕ್ಕೆ




ಈಗ ಆತ (ಹಿಂದೂ ವೋಟ್) ದೇವರುಗಳಿಗೆ ರೇವ್ಡಿ ಅರ್ಪಿಸುತ್ತಿದ್ದಾರೆ...
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

# ಐ.ಬಿ. ಪೆಗಸಸ್ ತಂತ್ರಾಂಶವನ್ನು ಖರೀದಿಸಿದೆಯೇ?

**ಇದು ಅಮೃತ ಕಾಲ**

**ಭಾರತದ ಪ್ರಮುಖ ಬೇಹುಗಾರಿಕೆ ಸಂಸ್ಥೆ ಐ.ಬಿ.(ಇಂಟಲಿಜೆನ್ಸ್ ಬ್ಯುರೊ) ಇಸ್ರೇಲ್ ಮೂಲದ ಎನ್‌ಎಸ್‌ಒ ಗ್ರೂಪ್ ಕಂಪನಿಯಿಂದ ಆ ಕಂಪನಿಯ ಬೇಹುಗಾರಿಕಾ ತಂತ್ರಾಂಶ ಪೆಗಸಸ್‌ಗೆ ಬೇರೆಡೆಗಳಲ್ಲಿ ಬಳಸಿರುವ ಕಂಪ್ಯೂಟರ್ ಯಂತ್ರಾಂಶ(ಹಾರ್ಡ್‌ವೇರ್) ಗಳನ್ನು ಹೋಲುವ ಯಂತ್ರಾಂಶವನ್ನು ಖರೀದಿಸಿದೆ ಎಂದು ಆಮದು ದಸ್ತಾವೇಜುಗಳಲ್ಲಿ ಕಂಡು ಬಂದಿದೆ ಎಂದು ತನಿಖಾ ಪತ್ರಕರ್ತರ ಜಾಗತಿಕ ಜಾಲವಾದ ಒ.ಸಿ.ಸಿ.ಆರ್.ಪಿ.(ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿಗಾರಿಕೆ ಪರಿಯೋಜನೆಯ ಸಂಘಟನೆ)ಯ ಇಬ್ಬರು ಲೇಖಕರು, ಶರದ್ ವ್ಯಾಸ್ ಮತ್ತು ಯುರೆ ಬರ್ಗರ್ ಅಕ್ಟೋಬರ್ 20ರಂದು ಪ್ರಕಟವಾಗಿರುವ ಲೇಖನದಲ್ಲಿ ಹೇಳಿದ್ದಾರೆ.**

ಇಸ್ರೇಲ್‌ನೊಂದಿಗಿನ ಪ್ರಮುಖ ಶಸ್ತ್ರಾಸ್ತ್ರ ಒಪ್ಪಂದದ ಭಾಗವಾಗಿ ಭಾರತ ಸರ್ಕಾರವು 2017 ರಲ್ಲಿ ಪೆಗಸಸ್ ಬೇಹುಗಾರಿಕೆ ತಂತ್ರಾಂಶವನ್ನು ಖರೀದಿಸಿದೆ ಎಂದು ಈ ವರ್ಷದ ಆರಂಭದಲ್ಲಿ ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದ ಹೇಳಿಕೆಯನ್ನು ಈ ಸಂಗತಿ ಬಲಪಡಿಸುತ್ತದೆ ಎಂಬುದಾಗಿ ಅವರು ಹೇಳುತ್ತಾರೆ.

ಈ ಮೊದಲೇ ವರದಿಯಾಗಿರುವಂತೆ ಅನೇಕ ಸಂದರ್ಭಗಳಲ್ಲಿ ಪತ್ರಕರ್ತರು, ಕಾರ್ಯಕರ್ತರು, ವಿರೋಧ ಪಕ್ಷದ ರಾಜಕಾರಣಿಗಳು ಮತ್ತು ಭಿನ್ನಮತೀಯರ ಮೇಲೆ ಕಣ್ಣಿಡಲು ಅವರ ಮೊಬೈಲ್ ಫೋನುಗಳನ್ನು ರಹಸ್ಯವಾಗಿ ಹೊಕ್ಕುವಂತೆ ಮಾಡಲು ಪೆಗಾಸಸ್ ಅನ್ನು ವಿವಿಧ ದೇಶಗಳಲ್ಲಿ ನಿಯೋಜಿಸಲಾಗಿದೆ, ಭಾರತದಲ್ಲೂ ಇದು ನಡೆದಿದೆ ಎಂದು ಆಗ ಹೇಳಲಾಗಿತ್ತು.

ಎನ್‌ಎಸ್‌ಒ ಗ್ರೂಪ್ ಈ ತಂತ್ರಾಂಶವನ್ನು ಸರಕಾರಗಳಿಗೆ ಮಾತ್ರ ಮಾರಲಾಗಿದೆ ಎಂದು ಹೇಳಿರುವುದರಿಂದ ಭಾರತ ಸರಕಾರ ಇದನ್ನು ಖರೀದಿಸಿದೆಯೇ, ಯಾವ ಸಂಸ್ಥೆ ಇದನ್ನು ಖರೀದಿಸಿದೆ ಎಂಬ ಪ್ರಶ್ನೆ ಎದ್ದು ಬಂತು. ಆದರೆ ಭಾರತ ಸರ್ಕಾರವು ಪೆಗಸಸ್ ತಂತ್ರಾಂಶವನ್ನು ಖರೀದಿಸಿದೆಯೇ ಎಂಬುದನ್ನು ಖಚಿತಪಡಿಸಿಯೂ ಇಲ್ಲ, ಅಥವಾ ನಿರಾಕರಿಸಿಯೂ ಇಲ್ಲ. ಕಳೆದ ವರ್ಷ ಜುಲೈನಲ್ಲಿ, ದೇಶದ ಮಾಹಿತಿ ತಂತ್ರಜ್ಞಾನ ಸಚಿವರು ಇದನ್ನು ಅನಗತ್ಯ ಕೋಲಾಹಲ ಎಬ್ಬಿಸುವ ಮತ್ತು "ಭಾರತೀಯ ಪ್ರಜಾಪ್ರಭುತ್ವ ಮತ್ತು ಅದರ ಸುಸ್ಥಾಪಿತ ಸಂಸ್ಥೆಗಳ ಹೆಸರು ಕೆಡಿಸುವ ಪ್ರಯತ್ನ" ಎಂದು ತಳ್ಳಿ ಹಾಕಿದ್ದರು.

ಅಕ್ಟೋಬರ್‌ನಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯವು ಈ ಕುರಿತು ತನಿಖೆ ನಡೆಸಲು ನೇಮಿಸಿದ್ದ ಸಮಿತಿಯು ಕೋರ್ಟಿಗೆ ಸಲ್ಲಿಸಿದ ವರದಿಯಲ್ಲಿ, ತಾನು ಪರೀಕ್ಷಿಸಿದ ಕೆಲವು ಫೋನ್‌ಗಳು ಬೇಹುಗಾರಿಕೆ ನಡೆಸಬಹುದಾದ ತಂತ್ರಾಂಶಗಳನ್ನು ಹೊಂದಿರುವುದು ಕಂಡುಬಂದಿದೆ, ಆದರೆ ಅಲ್ಲಿ ಪೆಗಸಸ್‌ನ್ನೇ ನಿಯೋಜಿಸಲಾಗಿದೆ ಎಂಬುದಕ್ಕೆ ನಿರ್ಣಾಯಕ ಪುರಾವೆಗಳು ಸಿಕ್ಕಿಲ್ಲ ಎಂದು ಹೇಳಿತು. ಜತೆಗೇ ಭಾರತ ಸರಕಾರ ಈ ತನಿಖೆಯಲ್ಲಿ ಸಹಕರಿಸಲಿಲ್ಲ ಎಂದೂ ಹೇಳಿತು ಎಂದು ಮುಖ್ಯ ನ್ಯಾಯಾಧೀಶರು ಆಗ ಹೇಳಿದ್ದರು. ಆದರೆ ಆ ವರದಿಯನ್ನು ಇನ್ನೂ ಬಹಿರಂಗ ಪಡಿಸಿಲ್ಲ.

ಈ ಹಿನ್ನೆಲೆಯಲ್ಲಿ ಒ.ಸಿ.ಸಿ.ಆರ್.ಪಿ. ಪರಿಶೀಲಿಸಿದ ಆಮದು ದತ್ತಾಂಶಗಳಿಂದ ತಿಳಿದು ಬಂದಿರುವ ಸಂಗತಿ ಬಹಳ ಮಹತ್ವದ್ದಾಗಿದೆ. ಇದರ ಪ್ರಕಾರ ಎಪ್ರಿಲ್ 2017 ರಲ್ಲಿ ನವದೆಹಲಿಯಲ್ಲಿರುವ ಐ.ಬಿ. (ಇಂಟಲಿಜೆನ್ಸ್ ಬ್ಯುರೊ) ಕಚೇರಿ ಇಸ್ರೇಲಿನ ಎನ್‌ಎಸ್‌ಒ ಗ್ರೂಪ್ ದಿಂದ ಒಂದು ಸರಕು ರವಾನೆಯನ್ನು ಸ್ವೀಕರಿಸಿತು. ಇದರಲ್ಲಿ ಡೆಲ್ ಕಂಪ್ಯೂಟರ್ ಸರ್ವರ್‌ಗಳು, ಸಿಸ್ಕೊ ನೆಟ್‌ವರ್ಕ್ ಉಪಕರಣಗಳು ಮತ್ತು "ತಡೆರಹಿತ ವಿದ್ಯುತ್ ಸರಬರಾಜು" ಬ್ಯಾಟರಿಗಳು ಇದ್ದವು, ಇವು ಬೇರೆಡೆಗಳಲ್ಲಿ ಪೆಗಸಸ್ ಬಳಕೆಗೆ ರೂಪಿಸಿದ ಯಂತ್ರಾಂಶಗಳಿಗೆ ಸರಿಯಾಗಿ ಹೋಲುವ ತಾಂತ್ರಿಕ ವಿವರಗಳನ್ನು ಹೊಂದಿದ್ದವು. ವಿಮಾನದ ಮೂಲಕ ತಲುಪಿಸಲಾದ ಇದರ ಮೇಲೆ "ರಕ್ಷಣೆ ಮತ್ತು ಮಿಲಿಟರಿ ಬಳಕೆಗಾಗಿ" ಎಂದು ಗುರುತು ಮಾಡಲಾಗಿತ್ತು. ಇದರ ಬಿಲ್ ಮೊತ್ತ 315,000 ಡಾಲರ್ ಎಂದೂ ತಿಳಿದು ಬಂದಿದೆ. ಆರಂಭದಲ್ಲಿ ಹೇಳಿದ ನ್ಯೂಯಾರ್ಕ್ ಟೈಮ್ಸ್ ವರದಿ ಪೆಗಸಸ್ ಮತ್ತು ಕ್ಷಿಪಣಿ ವ್ಯವಸ್ಥೆಯು ಇಸ್ರೇಲ್ ಮತ್ತು ಭಾರತದ ನಡುವಿನ 2017 ರ ಶಸ್ತ್ರಾಸ್ತ್ರ ಒಪ್ಪಂದದ "ಪ್ರಮುಖ ಆಕರ್ಷಣೆ"ಗಳು ಎಂದಿತ್ತು ಎಂದು ಈ ಇಬ್ಬರು ಲೇಖಕರು ಹೇಳುತ್ತಾರೆ.

ಇದರಲ್ಲಿ ಆಮದು ಮಾಡಿದ ಯಂತ್ರಾಂಶವನ್ನು ಪೆಗಾಸಸ್‌ಗೆ ಬಳಸಲಾಗಿದೆಯೇ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಅದರ ವಿವರಗಳು 2019 ರಲ್ಲಿ ಎನ್‌ಎಸ್‌ಒ ಗ್ರೂಪ್ ವಿರುದ್ಧ ಫೇಸ್‌ಬುಕ್ ಮತ್ತು ವಾಟ್ಸಾಪ್‌ನ ಮೂಲ ಕಂಪನಿಯಾದ ಮೆಟಾ ಹೂಡಿರುವ ಮೊಕದ್ದಮೆಯಲ್ಲಿ ಅಮೆರಿಕಾದ ನ್ಯಾಯಾಲಯಕ್ಕೆ ಸಲ್ಲಿಸಿದ ಪೆಗಾಸಸ್ ತಂತ್ರಾಂಶದ ಬ್ರೋಷರ್‌ನಲ್ಲಿ ಕೊಟ್ಟಿರುವ ತಾಂತ್ರಿಕ ವಿವರಗಳನ್ನು ಹೋಲುತ್ತವೆ ಎಂದು ಈ ಲೇಖಕರು ಹೇಳುತ್ತಾರೆ.

ಇಸ್ರೇಲಿನ ಎನ್‌ಎಸ್‌ಒ ಗ್ರೂಪ್ ಆಗಲೀ, ಮತ್ತು ಭಾರತದ ಐ.ಬಿ. ಆಗಲೀ ಒ.ಸಿ.ಸಿ.ಆರ್‌ಪಿ ಈ ಕುರಿತು ಕೇಳಿದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲಿಲ್ಲ ಎಂದೂ ಅವರು ಹೇಳುತ್ತಾರೆ.

ಭಾರತದ ಗುಪ್ತಚರ ವ್ಯವಸ್ಥೆಯಲ್ಲಿರುವ ಇಬ್ಬರು –ಒಬ್ಬರು ಹಿರಿಯ ಅಧಿಕಾರಿ ಮತ್ತೊಬ್ಬರು ಗುತ್ತಿಗೆದಾರರು – 2017 ರಲ್ಲಿ ಪೆಗಸಸ್ ಅನ್ನು ಸರ್ಕಾರವು ಖರೀದಿಸಿದೆ ಎಂದು ತಮ್ಮ ಹೆಸರು ಪ್ರಕಟಿಸಬಾರದು ಎಂಬ ಷರತ್ತಿನ ಮೇಲೆ ತಿಳಿಸಿದ್ದಾರೆ ಎಂದೂ ಈ ಲೇಖಕರು ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಜುಲೈನಲ್ಲಿ ಇಸ್ರೇಲ್‌ಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಐತಿಹಾಸಿಕ ಭೇಟಿಯ ಮೊದಲು ಫೆಬ್ರವರಿ ಅಂತ್ಯದಲ್ಲಿ ಇಸ್ರೇಲ್‌ಗೆ ಭೇಟಿ ನೀಡಿದ್ದರು ಎಂದು ಈ ಮೊದಲು ವರದಿಯಾಗಿತ್ತು ಎಂದೂ ಅವರು ನೆನಪಿಸಿದ್ದಾರೆ.

**"ಮೋದಿ ಸರಕಾರದಿಂದ ಜವಾಬು ಕೇಳಬೇಕಾಗಿದೆ, ನ್ಯಾಯಾಲಯಗಳು ಇದನ್ನು ಗಮನಕ್ಕೆ ತಗೊಂಡು ಹೊಣೆಯನ್ನು ನಿಗದಿಪಡಿಸಬೇಕಾಗಿದೆ."**

ಪೆಗಸಸ್ ತಂತ್ರಾಂಶವನ್ನು ಪ್ರತಿಪಕ್ಷಗಳ ಮುಖಂಡರು, ಚುನಾವಣಾ ಆಯುಕ್ತರುಗಳು, ನ್ಯಾಯಾಂಗದ ಸದಸ್ಯರು, ವಕೀಲರು ಮತ್ತು ಪತ್ರಕರ್ತರ ಫೋನುಗಳ ಒಳನುಸುಳಲು ಮತ್ತು ಕಣ್ಗಾವಲು ಇಡಲು ಬಳಸಲಾಗಿದೆ. ಈಗಲಾದರೂ ಮೋದಿ ಸರಕಾರ ಈ ಬೇಹುಗಾರಿಕಾ ತಂತ್ರಾಂಶದ ಬಳಕೆಯ ಬಗ್ಗೆ ಮಾಹಿತಿಯನ್ನು ಕೊಡಬೇಕು, ಸತ್ಯವನ್ನು ಬಹಳ ದಿನ ಮುಚ್ಚಿಡಲಾಗದು.

ಮೋದಿ ಸರಕಾರ ಸಂವಿಧಾನಿಕ ಸಂಸ್ಥೆಗಳ ಮೂಲಕ ನಡೆಸಿರುವ ಕೃತ್ಯಗಳಿಗೆ ಅದರಿಂದ ಜವಾಬು ಕೇಳಬೇಕಾಗಿದೆ, ನ್ಯಾಯಾಲಯಗಳು ಇದನ್ನು ಗಮನಕ್ಕೆ ತಗೊಂಡು ಹೊಣೆಯನ್ನು ನಿಗದಿಪಡಿಸಬೇಕಾಗಿದೆ.

**–ಸೀತಾರಾಂ ಯೆಚುರಿ**




ಇದು 26 ಆಗಸ್ಟ್ 2022ರಂದು ಇಕನಾಮಿಕ್‌ಟೈಮ್ಸ್ ನಲ್ಲಿ ಪ್ರಕಟವಾದ **ಆರ್. ಪ್ರಸಾದ್** ಅವರ ವ್ಯಂಗ್ಯಚಿತ್ರ. ಅವರು ಕಲ್ಪಿಸಿರುವಂತೆ ಭಾರತ ಸರಕಾರ ತನ್ನ ಮೇಲೆಯೇ ದೋಷಾರೋಪಣೆ ಮಾಡಿಕೊಳ್ಳುವುದು ಸಾಧ್ಯವಿರದ್ದರಿಂದಲೇ ಸಹಕರಿಸಲಿಲ್ಲವೇ?




ಈ ಹಿಂದೆ ಪಾರಿವಾಳಗಳನ್ನು ಬಿಡುಗಡೆ ಮಾಡುತ್ತಿದ್ದೆವು...., ಈಗ ಅತ್ಯಾಚಾರಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ!
**ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಮೊಲಿಟಿಕ್ಸ್.ಇನ್**

# ಬಿಲ್ಕಿಸ್ ಬಾನೊ ಪ್ರಕರಣದಲ್ಲಿ ಅನಾವರಣಗೊಳ್ಳುತ್ತಿರುವ ಅಮೃತ ಕಾಲ ಮತ್ತು 'ಸನ್ನಡತೆ'

ಗುಜರಾತಿನ 2002 ಕೋಮು ಗಲಭೆಗಳ ಸಮಯದ ಬಿಲ್ಕಿಸ್ ಬಾನೊ ಅತ್ಯಾಚಾರ ಪ್ರಕರಣದಲ್ಲಿ 11 ಮಂದಿ ಜೀವಾವಧಿ ಶಿಕ್ಷೆಗೊಳಗಾದ ಅಪರಾಧಿಗಳ ಅವಧಿಪೂರ್ಣ ಬಿಡುಗಡೆಗೆ ಕೇಂದ್ರ ಗೃಹ ಸಚಿವಾಲಯವೇ, ಅದೂ ಕೇವಲ 13 ದಿನಗಳಲ್ಲಿಯೇ ಅನುಮತಿ ನೀಡಿತು ಎಂದು ಸ್ವತಃ ಗುಜರಾತ್ ಸರಕಾರವೇ ಸುಪ್ರಿಂ ಕೋರ್ಟ್ ಸಮ್ಮುಖ ಸಲ್ಲಿಸಿದ ಅಫಿಡವಿಟ್‌ನಲ್ಲಿ ಹೇಳಿದೆ.

ಇದಾದ ನಂತರ ಕೇಂದ್ರ ಸರಕಾರ ಮೊತ್ತಮೊದಲ ಬಾರಿಗೆ ತನ್ನ ದಿವ್ಯಮೌನ ಮುರಿದು ಎಲ್ಲವನ್ನೂ ಕಾನೂನಿನ ಪ್ರಕಾರವೇ ಮಾಡಲಾಗಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಮಂತ್ರಿಗಳು ಹೇಳಿದ್ದಾರೆ.

ಆದರೆ, ಈ ಅವಧಿಪೂರ್ವ ಬಿಡುಗಡೆಗೆ ದೇಶಾದ್ಯಂತ ವ್ಯಕ್ತಗೊಂಡ ಆಕ್ರೋಶದ ಹಿನ್ನೆಲೆಯಲ್ಲಿ ಇದನ್ನು ಪ್ರಶ್ನಿಸಿದ್ದ ಅರ್ಜಿಯನ್ನು ಕೈಗೆತ್ತಿಕೊಂಡ ಸುಪ್ರಿಂ ಕೋರ್ಟ್ ಪೀಠ ಈ ಪ್ರಕರಣದ ಸಮಸ್ತ ದಾಖಲೆಗಳನ್ನು ಮತ್ತು ಹೇಗೆ ಅಪರಾಧಿಗಳನ್ನು ಬಿಡಗಡೆ ಮಾಡಲಾಗಿದೆ ಎಂಬುದರ ವಿವರಗಳನ್ನು ಸಲ್ಲಿಸಬೇಕು ಎಂದು ಗುಜರಾತ್ ಸರಕಾರಕ್ಕೆ ಹೇಳಿತ್ತು. ಇದರಿಂದಾಗಿ ಗುಜರಾತ್ ಸರಕಾರ ಸಲ್ಲಿಸಲೇ ಬೇಕಾದ ಭಾರೀ ಗಾತ್ರದ ಅಫಿಡವಿಟ್‌ನಿಂದ ಹಲವು ಆಶ್ಚರ್ಯಜನಕ ಸಂಗತಿಗಳು ಬಯಲಿಗೆ ಬಂದಿವೆ. ಇಲ್ಲಿದೆ ಒಂದು ಪಟ್ಟಿ:

1. ಈ ಬಿಡುಗಡೆಗೆ ಇದರ ತನಿಖೆ ನಡೆಸಿದ್ದ ಸಿಬಿಐ ಆಕ್ಷೇಪ ವ್ಯಕ್ತಪಡಿಸಿತ್ತು. ಇದು ಅತ್ಯಂತ ಹೀನ, ಗಂಭೀರ ಅಪರಾಧ ಕೃತ್ಯವಾದ್ದರಿಂದ ಉದಾರತೆಗೆ ಅರ್ಹವಾಗಿಲ್ಲ ಎಂದು ಅದು ಹೇಳಿತ್ತು.
2. ಈ ಪ್ರಕರಣದ ತನಿಖೆ ನಡೆಸಿದ್ದ ವಿಶೇಷ ನ್ಯಾಯಾಧೀಶರೂ ಇದು ಅತ್ಯಂತ ಹೊಲಸು ಸ್ವರೂಪದ ದ್ವೇಷ ಕೃತ್ಯ.. ಬಲಿಯಾದವರು ಒಂದು ನಿರ್ದಿಷ್ಟ ಧರ್ಮಕ್ಕೆ ಸೇರಿದವರು ಎಂಬ ಏಕೈಕ ಕಾರಣಕ್ಕೆ ನಡೆಸಿರುವ ಕೃತ್ಯ. ಇಲ್ಲಿ ಮಕ್ಕಳನ್ನೂ ಬಿಟ್ಟಿಲ್ಲ ಎಂದು ಅವರು ಖೇದದಿಂದ ಹೇಳಿದ್ದರು.
3. ಕೇಂದ್ರ ಸರಕಾರ ಮತ್ತು ಗುಜರಾತ್ ಸರಕಾರಗಳೆರಡೂ ಸಿಬಿಐ ಮತ್ತು ವಿಶೇಷ ನ್ಯಾಯಾಧೀಶರ ಬಲವಾದ ಆಕ್ಷೇಪಗಳನ್ನು

ಪುಟ 14 ಕ್ಕೆ

"ಇದು ಅದೇ ದೇಶ, ಒಂದೊಮ್ಮೆ ಪಾರಿವಾಳಗಳನ್ನು ಬಿಡುಗಡೆ ಮಾಡುತ್ತಿತ್ತು, ಈಗ ಅದು ಚೀತಾಗಳನ್ನು ಬಿಡುಗಡೆ ಮಾಡುವ ಒಂದು ಹಂತವನ್ನು ತಲುಪಿದೆ. ಇವು ಸಣ್ಣ ಘಟನೆಗಳಾಗಿ ಕಾಣಬಹುದು, ಆದರೆ ಅದರ ಹಿಂದೆ ಇರುವ ಸಂದೇಶ ಬಹಳ ದೊಡ್ಡದು" ಹೀಗೆಂದು ಪ್ರಧಾನ ಮಂತ್ರಿಗಳು ತಮ್ಮ ಸ್ವಂತ ರಾಜ್ಯ ಗುಜರಾತಿನ ರಾಜಧಾನಿ ಗಾಂಧಿನಗರದಲ್ಲಿ ಡಿಫೆನ್ಸ್ ಎಕ್ಸ್ಪೊ 22 ನ್ನು ಉದ್ಘಾಟಿಸುತ್ತ ಹೇಳಿದ್ದಾರೆ.–ಸುದ್ದಿ




# ತೈಲ ಉತ್ಪಾದನೆಯ ಕಡಿತದ 'ಒಪೆಕ್' ನಿರ್ಧಾರ ಅಮೆರಿಕಾದ ಪ್ರಾಬಲ್ಯಕ್ಕೆ ಮಿತ್ರರಿಂದಲೇ ಸವಾಲು

**ಕಾರ್ಪೊರೇಟ್ ದುರಾಸೆಗೆ ಕಡಿವಾಣ ಹಾಕುವ ಬದಲು ಕಾರ್ಮಿಕರು ಮತ್ತು ಪ್ರಾಥಮಿಕ ಸರಕುಗಳ ಉತ್ಪಾದಕರ ಹಿತಗಳನ್ನು ಬಲಿಕೊಟ್ಟು ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಹಣದುಬ್ಬರವನ್ನು ನಿಯಂತ್ರಿಸುವುದು ಅಮೆರಿಕಾದ ಉದ್ದೇಶ. ತೈಲ ಉತ್ಪಾದಕ ದೇಶಗಳು ಉತ್ಪಾದನೆಯ ಕಡಿತದ ಮೂಲಕ ಈ ಉದ್ದೇಶವನ್ನು ವಿಫಲಗೊಳಿಸಿವೆ. ಇದು ರಷ್ಯಾವನ್ನು ಮಂಡಿಯೂರುವಂತೆ ಮಾಡುವ ಉದ್ದೇಶದಿಂದ ಅದರ ಮೇಲೆ ನಿರ್ಬಂಧಗಳನ್ನು ಹೇರುವ ಅಭಿಯಾನದಲ್ಲಿ ತೊಡಗಿರುವ ಅಮೆರಿಕದ ಪಾಲಿಗೆ ಒಂದು ಸ್ಪಷ್ಟ ಹಿನ್ನಡೆಯೇ. ನಿಜ, ಒಪೆಕ್‌ನ ನಿರ್ಧಾರವನ್ನು ಅದರ ದೃಷ್ಟಿಯಿಂದ ನೋಡಿದರೆ ಅರ್ಥಮಾಡಿಕೊಳ್ಳಬಹುದು. ಆದರೂ, ತೈಲ ಉತ್ಪಾದನೆಯನ್ನು ತಗ್ಗಿಸಬಾರದೆಂದು ಅಮೆರಿಕಾ ಹೇರುತ್ತಿರುವ ಒತ್ತಡವನ್ನು ಅದು ಎದುರಿಸಿ ನಿಂತಿರುವುದು ವಿಶೇಷವೇ. ಅಮೆರಿಕಾದ ಪ್ರಾಬಲ್ಯಕ್ಕೆ ನೆನ್ನೆ ಮೊನ್ನೆಯವರೆಗೆ ಅದರ ಆಪ್ತ ಮಿತ್ರರಾಗಿದ್ದ ದೇಶಗಳಿಂದಲೂ ಸವಾಲು ಬರುತ್ತಿರುವುದು ಬದಲಾಗುತ್ತಿರುವ ಸಮಯದ ಸಂಕೇತವಾಗಿದೆ.**

**ಪ್ರೊ. ಪ್ರಭಾತ್ ಪಟ್ನಾಯಕ್**

**ಅನು: ಕೆ.ಎಂ.ನಾಗರಾಜ್**

ತೈಲ ರಫ್ತು ದೇಶಗಳ ಸಂಘಟನೆಯಾದ 'ಒಪೆಕ್'(ಪೆಟ್ರೋಲಿಯಂ ರಫ್ತು ಮಾಡುವ ದೇಶಗಳ ಸಂಘಟನೆ) ನ 13 ಸದಸ್ಯ ದೇಶಗಳು ಮತ್ತು ರಷ್ಯಾ ನೇತೃತ್ವದ 11 ಪೆಟ್ರೋಲಿಯಂ ರಫ್ತು ದೇಶಗಳು ನವೆಂಬರ್‌ನಿಂದ ದೈನಿಕ 2 ಮಿಲಿಯನ್ ಬ್ಯಾರೆಲ್ ತೈಲ ಉತ್ಪಾದನೆಯನ್ನು ಕಡಿತಗೊಳಿಸುವುದಾಗಿ ಅಕ್ಟೋಬರ್ 5 ರಂದು ನಿರ್ಧರಿಸಿವೆ. ಈ ನಿರ್ಧಾರವನ್ನು ಕೈಗೊಳ್ಳದಂತೆ ಒಪೆಕ್ ಮೇಲೆ ಅಮೆರಿಕಾ ಒತ್ತಡ ಹೇರುತ್ತಲೇ ಬಂತು ಮತ್ತು ಅದನ್ನು ತಪ್ಪಿಸುವ ಉದ್ದೇಶದಿಂದ ಅಧ್ಯಕ್ಷ ಜೋ ಬಿಡೆನ್ ಸೇರಿದಂತೆ ಅಮೆರಿಕದ ಉನ್ನತ ಅಧಿಕಾರಿಗಳು ಹಲವು ಬಾರಿ ಸೌದಿ ಅರೇಬಿಯಾಕ್ಕೆ ಭೇಟಿ ನೀಡಿದ್ದರು. ವಶೀಲಿಗಾರಿಕೆ (ಲಾಬ್ಬಿಯಿಂಗ್) ಮೂಲಕ ಪ್ರಭಾವ ಬೀರುವ ಕೆಲಸವನ್ನೂ ಅಮೆರಿಕಾ ಮಾಡಿತ್ತು. ಆದಾಗ್ಯೂ ಒಪೆಕ್ ಬೇರೆಯೇ ನಿರ್ಧರಿಸಿತು. ಒಪೆಕ್‌ನ ಈ ನಿರ್ಧಾರವನ್ನು "ಬೈಡನ್‌ಗೆ ದೊರೆತ ಕಪಾಳಮೋಕ್ಷ" ಎಂದು ಪಾಶ್ಚಾತ್ಯ ಮಾಧ್ಯಮಗಳು ಬಣ್ಣಿಸಿರುವುದು ಆಶ್ಚರ್ಯವಲ್ಲ.

ಉತ್ಪಾದನೆಯನ್ನು ಕಡಿತಗೊಳಿಸುವ ಒಪೆಕ್‌ನ ಈ ನಿರ್ಧಾರವನ್ನು ತಪ್ಪಿಸಲು ಅಮೆರಿಕನ್ನರು ಏಕೆ ತುಂಬಾ ಉತ್ಸುಕರಾಗಿದ್ದರು ಎಂಬುದರ ಕಾರಣವನ್ನು ಮೂರು ಭಾಗಗಳಲ್ಲಿ ಕೊಡಬಹುದು: ಮೊದಲನೆಯದಾಗಿ, ಜಾಗತಿಕ ತೈಲ ಬೆಲೆಗಳ ಏರಿಕೆಯ ಪರಿಣಾಮವಾಗಿ ಅಮೆರಿಕಾ ಮತ್ತು ಇತರೆ ದೇಶಗಳಲ್ಲಿ ಹಣದುಬ್ಬರ ಉಲ್ಬಣಗೊಳ್ಳುತ್ತದೆ. ಹಣದುಬ್ಬರವನ್ನು ಎದುರಿಸಲು ಬಡ್ಡಿ ದರಗಳನ್ನು ಏರಿಸಬೇಕಾಗುತ್ತದೆ. ಬಡ್ಡಿ ದರ ಏರಿಕೆಯಿಂದಾಗಿ ಅಮೆರಿಕವೂ ಸೇರಿದಂತೆ ಅನೇಕ ದೇಶಗಳಲ್ಲಿ ಆರ್ಥಿಕ ಹಿಂಜರಿತದ ಬೆದರಿಕೆ ಹೆಚ್ಚುತ್ತದೆ. ಎರಡನೆಯದಾಗಿ, ಕಾರ್ಯತಃ ಪ್ರಕಟಗೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳುವ ಈ ಪರಿಣಾಮಗಳನ್ನು ಬದಿಗಿಟ್ಟರೂ ಸಹ, ಇಂಧನ ಬೆಲೆಗಳ ಏರಿಕೆಯು ಅಮೆರಿಕದ ಗ್ರಾಹಕರಿಗೆ ತಕ್ಷಣ ನಷ್ಟವನ್ನೂ ಮತ್ತು ಕಿರಿಕಿರಿಯನ್ನೂ ಉಂಟುಮಾಡುವ ಪರಿಣಾಮವನ್ನು ಬೀರುತ್ತದೆ. ಇದು ಮುಂಬರುವ ನವೆಂಬರ್‌ನಲ್ಲಿ ಆ ದೇಶದಲ್ಲಿ ಕಾಂಗ್ರೆಸ್ ಮತ್ತು ಸೆನೆಟ್‌ಗೆ ನಡೆಯಲಿರುವ ಚುನಾವಣೆಗಳಲ್ಲಿ ಡೆಮಾಕ್ರಟಿಕ್ ಪಕ್ಷದ ಚುನಾವಣಾ ಭವಿಷ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಮೂರನೆಯದಾಗಿ, ಒಪೆಕ್‌ನ ತೈಲ ಉತ್ಪಾದನೆ ತಗ್ಗಿದಷ್ಟೂ ರಷ್ಯಾದ ತೈಲ ಆದಾಯ ಹೆಚ್ಚುತ್ತದೆ. ರಷ್ಯಾದ ಆದಾಯ ಹೆಚ್ಚುವುದನ್ನು ಅಮೆರಿಕಾ ಸುತರಾಂ ಬಯಸುವುದಿಲ್ಲ. ಏಕೆಂದರೆ ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ರಷ್ಯಾದ ಮೇಲೆ ಹೇರಿದ ನಿರ್ಬಂಧಗಳ ಉದ್ದೇಶವೇ ಸೋಲುತ್ತದೆ.

ಒಪೆಕ್‌ನ ತೈಲ ಉತ್ಪಾದನೆಯ ಕಡಿತದಿಂದಾಗಿ ರಷ್ಯಾದ ಆದಾಯ ಹೆಚ್ಚುವ ವಿಷಯವು ಎಷ್ಟು ಗಂಭೀರವಾದದ್ದು ಎಂದರೆ, ಸೌದಿ ಅರೇಬಿಯಾಕ್ಕೆ ಭೇಟಿ ನೀಡಿದ ಅಮೆರಿಕಾದ ಅಧಿಕಾರಿಗಳು ಈ ವಿಷಯವನ್ನು, ಅಮೆರಿಕ ಮತ್ತು ರಷ್ಯಾಗಳ ನಡುವೆ ಆಯ್ಕೆ ಮಾಡಿಕೊಳ್ಳಬೇಕಾದ ಪ್ರಶ್ನೆಯಾಗಿ ಆ ದೇಶದ ಮುಂದೆ ಇಟ್ಟಿದ್ದರು. ಈ ಹಿನ್ನೆಲೆಯಲ್ಲಿ, ಉತ್ಪಾದನೆಯನ್ನು ಕಡಿತಗೊಳಿಸುವ ಒಪೆಕ್‌ನ ನಿರ್ಧಾರವು ಅಮೆರಿಕಾ–ಸೌದಿ ಅರೇಬಿಯಾ ಸಂಬಂಧವಾಗಿ ವಿಶ್ವ ರಾಜಕೀಯ ಮಹತ್ವ ಹೊಂದಿದೆ ಎಂದು ಪರಿಗಣಿಸಲಾಗಿದೆ.

ಒಪೆಕ್‌ನ ತೈಲ ಉತ್ಪಾದನೆಯ ಕಡಿತವು ರಷ್ಯಾಕ್ಕೆ ಸಹಾಯವಾಗುತ್ತದೆ. ಅದರಲ್ಲಿ ಅನುಮಾನವಿಲ್ಲ. ಹಾಗೆ ನೋಡಿದರೆ ಈ ಕಡಿತದಿಂದಾಗಿ ಬೇರೆ ಯಾವುದೇ ದೇಶಕ್ಕಿಂತಲೂ ಹೆಚ್ಚು ಅನುಕೂಲ ರಷ್ಯಾಕ್ಕೆ ಆಗುತ್ತದೆ. ಏಕೆಂದರೆ, ಒಪೆಕ್+ನ ಹಲವು ದೇಶಗಳು ತಮ್ಮ ತೈಲ ಕೋಟಾವನ್ನು ಪೂರ್ಣವಾಗಿ ಉತ್ಪಾದಿಸುತ್ತಿಲ್ಲ. ಈ ಗುಂಪಿನಲ್ಲಿ ತಮ್ಮ ತೈಲ ಉತ್ಪಾದನೆಯನ್ನು ಹೆಚ್ಚಿಸಲು ಈ ಹಿಂದೆ ಸಾಕಷ್ಟು ಹೂಡಿಕೆ ಮಾಡಲಾಗದ ನೈಜೀರಿಯಾ ಮತ್ತು ಅಂಗೋಲಾ ದೇಶಗಳು ಸೇರಿವೆ ಮಾತ್ರವಲ್ಲ, ನಿರ್ಬಂಧಗಳಿಂದಾಗಿ ತನ್ನ ಕೋಟಾಕ್ಕಿಂತ ಕಡಿಮೆ ತೈಲ ಉತ್ಪಾದಿಸುತ್ತಿರುವ ರಷ್ಯಾವೂ ಇದೆ. ಉತ್ಪಾದನೆಯನ್ನು ದಿನಕ್ಕೆ 2 ಮಿಲಿಯನ್ ಬ್ಯಾರೆಲ್‌ಗಳಷ್ಟನ್ನು ಕಡಿಮೆ ಮಾಡುವ ನಿರ್ಧಾರದ ಪ್ರಕಾರವಾಗಿ ಎಲ್ಲ ಸದಸ್ಯ ದೇಶಗಳೂ ತಮ್ಮ ಉತ್ಪಾದನಾ ಕೋಟಾಗಳಲ್ಲಿ ಕಡಿತ ಮಾಡಬೇಕಾಗುತ್ತದೆ. ಆದರೆ ರಷ್ಯಾದ ಕೋಟಾ ಮಾತ್ರ ಅದರ ಪ್ರಸ್ತುತ ಉತ್ಪಾದನೆಗಿಂತಲೂ ಇನ್ನೂ ಹೆಚ್ಚಿಗೆ ಉತ್ಪಾದಿಸುವಷ್ಟು ಎತ್ತರದ ಮಟ್ಟದಲ್ಲಿದೆ. ಹಾಗಾಗಿ ರಷ್ಯಾ ಉತ್ಪಾದನೆಯನ್ನು ಕಡಿಮೆ ಮಾಡುವುದಿಲ್ಲ. ವಿಶ್ವ ತೈಲ ಬೆಲೆಗಳ ಏರಿಕೆಯು ರಷ್ಯಾಕ್ಕೆ ಲಾಭದಾಯಕವಾಗಲಿದೆ. ರಷ್ಯಾದ ತೈಲ ಆದಾಯದ ಹೆಚ್ಚಳವು ಕೇವಲ ಹೆಚ್ಚಳವಲ್ಲ, ಎಲ್ಲ ಪ್ರಮುಖ ತೈಲ ಉತ್ಪಾದಕ ದೇಶಗಳಿಗಿಂತಲೂ ಉನ್ನತ ಮಟ್ಟದ ಹೆಚ್ಚಳ. ಇದು ರಷ್ಯಾವನ್ನು ಮಂಡಿಯೂರುವಂತೆ ಮಾಡುವ ಉದ್ದೇಶದಿಂದ ಅದರ ಮೇಲೆ ನಿರ್ಬಂಧಗಳನ್ನು ಹೇರುವ ಅಭಿಯಾನವನ್ನು ಮುನ್ನಡೆಸುತ್ತಿರುವ ಅಮೆರಿಕದ ಪಾಲಿಗೆ ಒಂದು ಸ್ಪಷ್ಟ ಹಿನ್ನಡೆಯೇ.

**ತೈಲ ಉತ್ಪಾದನೆಯನ್ನು ಕಡಿತಗೊಳಿಸಲು ಒಪೆಕ್ ನಿರ್ಧರಿಸಿತಾದರೂ ಏಕೆ?**

ಈ ಬಗ್ಗೆ ವಿವರಣೆಯಾಗಿ ಒಪೆಕ್ ಮುಂದಿಡುವ ವಾದವು ಮೆಟ್ರೋಪಾಲಿಟನ್(ಕೈಗಾರಿಕೀಕೃತ ಬಂಡವಾಳಶಾಹಿ) ದೇಶಗಳು ಈ ಕಡಿತದ ವಿರುದ್ಧವಾಗಿ ಮಂಡಿಸುತ್ತಿರುವ ವಾದದೊಂದಿಗೆ ಹೋಲುತ್ತಿರುವುದು ಒಂದು ವಿಡಂಬನೆಯಾಗಿ ತೋರುತ್ತದೆ. ಮೆಟ್ರೋಪಾಲಿಟನ್ ದೇಶಗಳ ವಾದವು, ಉತ್ಪಾದನೆಯ ಕಡಿತವು ಹಣದುಬ್ಬರವನ್ನು ಉಲ್ಬಣಗೊಳಿಸುತ್ತದೆ, ಹಣದುಬ್ಬರವು ಬಡ್ಡಿ ದರಗಳ ಏರಿಕೆಗೆ ಕಾರಣವಾಗುತ್ತದೆ ಮತ್ತು ಬಡ್ಡಿ ದರ ಏರಿಕೆಯು ಒಂದು ಗಂಭೀರ ಆರ್ಥಿಕ ಹಿಂಜರಿತಕ್ಕೆ ಕಾರಣವಾಗುತ್ತದೆ ಎಂದು ಹೇಳುತ್ತದೆ. ಒಪೆಕ್‌ನ ವಾದವೇನೆಂದರೆ, ಸತತವಾಗಿ ಕೈಗೊಳ್ಳುತ್ತಿರುವ ಬಡ್ಡಿ ದರ ಏರಿಕೆಯು ಆರ್ಥಿಕ ಹಿಂಜರಿತಕ್ಕೆ ಕಾರಣವಾಗುತ್ತದೆ. ಆರ್ಥಿಕ ಹಿಂಜರಿತವು ತೈಲದ ಮೇಲಿನ ಬೇಡಿಕೆಯನ್ನು ಕಡಿಮೆ ಮಾಡುತ್ತದೆ ಮತ್ತು ಬೇಡಿಕೆಯ ಇಳಿಕೆಯು ತೈಲದ ಬೆಲೆ ಇಳಿಕೆಗೆ ಕಾರಣವಾಗುತ್ತದೆ. ಈ ಬೆಲೆ ಇಳಿಕೆಯನ್ನು ತಪ್ಪಿಸಲು ತೈಲ ಉತ್ಪಾದನೆಯಲ್ಲಿ ಕಡಿತ ಮಾಡಬೇಕಾಗುತ್ತದೆ ಎಂಬುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಮುಂದಿನ ದಿನಗಳಲ್ಲಿ ಸನ್ನಿಹಿತವಾಗುವ ಆರ್ಥಿಕ ಹಿಂಜರಿತದ ಸನ್ನಿವೇಶದಲ್ಲಿ ವಿಶ್ವ ತೈಲ ಬೆಲೆಯನ್ನು ಸ್ಥಿರಗೊಳಿಸುವುದೇ ಒಪೆಕ್‌ನ ಉದ್ದೇಶ.

ಪ್ರಾಥಮಿಕ ಸರಕುಗಳಿಗೆ ಬೇಡಿಕೆ ತಗ್ಗಿದ ಪರಿಸ್ಥಿತಿಯಲ್ಲಿ ಪೂರೈಕೆಯಲ್ಲಿ ಕಡಿತ ಮಾಡದಿದ್ದರೆ, ಬೆಲೆಗಳು ಕುಸಿಯುತ್ತವೆ. ಉದಾಹರಣೆಗೆ, 1930ರ ದಶಕದ ಮಹಾ ಆರ್ಥಿಕ ಕುಸಿತದಲ್ಲಿ, ತಯಾರಿಕಾ ಸರಕುಗಳಿಗೆ ಹೋಲಿಸಿದರೆ ಪ್ರಾಥಮಿಕ ಸರಕುಗಳ ಬೆಲೆಗಳು ತೀವ್ರವಾಗಿ ಕುಸಿದವು. ಅದರಿಂದಾಗಿ ಕೃಷಿ ಉತ್ಪನ್ನಗಳೂ ಸೇರಿದಂತೆ ಪ್ರಾಥಮಿಕ ಸರಕುಗಳ ವ್ಯಾಪಾರವು ಭಾರೀ ಪೆಟ್ಟು ತಿಂದಿತು ಮತ್ತು ಭಾರತವೂ ಸೇರಿದಂತೆ ಎಲ್ಲೆಡೆಯೂ ರೈತಾಪಿ ವರ್ಗವು ಸಾಲದ ಸುಳಿಗೆ ಸಿಲುಕಿತು. ರೈತಾಪಿ ವರ್ಗದ ಈ ಸಂಕಷ್ಟಗಳು ಅವರನ್ನು ವಸಾಹತುಶಾಹಿ–ವಿರೋಧಿ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಬದಲಾಯಿಸಿದವು.




ಬೇಡಿಕೆ ಕುಸಿದಾಗ ಪೂರೈಕೆಯು ಕಡಿತಗೊಳ್ಳದ ಸಂದರ್ಭದಲ್ಲಿ ಉಂಟಾಗುವ ಬೆಲೆ ಕುಸಿತವನ್ನು "ಬೆಲೆ ಹೊಂದಾಣಿಕೆ" ಎಂದು ಕರೆಯುತ್ತಾರೆ. ಇದಕ್ಕೆ ಪ್ರತಿಯಾಗಿ, ಒಂದು ಪ್ರಾಥಮಿಕ ಸರಕಿನ ಬೇಡಿಕೆ ಕುಸಿದಾಗ ಅದಕ್ಕೆ ತಕ್ಕಂತೆ ಪೂರೈಕೆಯನ್ನು ಕಡಿತ ಮಾಡುವ ಮೂಲಕ ಬೆಲೆ ಬದಲಾಗದಂತೆ ನೋಡಿಕೊಳ್ಳುವ ಕ್ರಮವನ್ನು "ಪರಿಮಾಣ ಹೊಂದಾಣಿಕೆ" ಎಂದು ಕರೆಯುತ್ತಾರೆ. ತೈಲ ಮಾರುಕಟ್ಟೆಯಲ್ಲಿ ಒಪೆಕ್ ಈಗ ಪ್ರಯತ್ನಿಸುತ್ತಿರುವುದು ಈ ಪರಿಮಾಣ ಹೊಂದಾಣಿಕೆ ಕ್ರಮವನ್ನು. ಆದರೆ ಅಮೆರಿಕನ್ನರು ಒಪೆಕ್‌ನಿಂದ ಬಯಸುವುದು ಬೆಲೆ ಹೊಂದಾಣಿಕೆಯನ್ನು.

ಪ್ರಾಥಮಿಕ ಸರಕುಗಳ ಮಾರುಕಟ್ಟೆಗಳಲ್ಲಿ ನಡೆಯುವ ಈ ಎರಡು ರೀತಿಯ ಹೊಂದಾಣಿಕೆಗಳ ಪೈಕಿ, ಉತ್ಪಾದಕರ ದೃಷ್ಟಿಯಲ್ಲಿ ಪರಿಮಾಣದ ಹೊಂದಾಣಿಕೆಯು ಹೆಚ್ಚು ಅನುಕೂಲಕರವಾಗಿರುತ್ತದೆ. ಒಂದು ಉದಾಹರಣೆಯ ಮೂಲಕ ಈ ಅಂಶವನ್ನು ಸ್ಪಷ್ಟಪಡಿಸಬಹುದು. ಬೇಡಿಕೆ ಶೇ. 10ರಷ್ಟು ಕುಸಿದಿದೆ ಎಂದು ಭಾವಿಸೋಣ. ಪೂರೈಕೆಯು ಒಂದು ವೇಳೆ ಶೇ. 10ರಷ್ಟು ಇಳಿಕೆಯಾದರೆ ಮತ್ತು ಬೆಲೆಗಳು ಬದಲಾಗದಂತೆ ನೋಡಿಕೊಂಡ ಪರಿಸ್ಥಿತಿಯಲ್ಲಿ ಉತ್ಪಾದಕರ ಆದಾಯವು ಶೇ. 10ರಷ್ಟು ಕುಸಿದಿರುತ್ತದೆ. ಆದರೆ, ಪೂರೈಕೆಯಲ್ಲಿ ಒಂದು ವೇಳೆ ಯಾವ ಬದಲಾವಣೆಯನ್ನೂ ಮಾಡದೆ, ಬೆಲೆಗಳನ್ನು ಮಾತ್ರ ಕುಸಿಯಲು ಬಿಟ್ಟರೆ, ಆಗ, ಬೇಡಿಕೆ ಬದಲಾಗದಂತೆ (ಏರಿಕೆ ಅಥವಾ ಇಳಿಕೆ ಇಲ್ಲದಂತೆ) ನೋಡಿಕೊಳ್ಳಬೇಕು ಎಂದಾದರೆ, ಬೆಲೆ ಕುಸಿತವು ಶೇ. 10ಕ್ಕಿಂತಲೂ ಹೆಚ್ಚಿಗೆ ಇರುತ್ತದೆ. ಬೆಲೆಗಳು ಒಂದು ವೇಳೆ ಶೇ. 20ರಷ್ಟು ಇಳಿಕೆಯಾಗುತ್ತವೆ ಎಂದು ಭಾವಿಸೋಣ. ಆಗ ಆದಾಯವೂ ಸಹ ಶೇ. 20ರಷ್ಟು ಕುಸಿದಿರುತ್ತದೆ.

**ಉತ್ಪಾದಕರ ಸಹಜ ಆಯ್ಕೆ**

ಹಾಗಾಗಿ, ಬೆಲೆ ಹೊಂದಾಣಿಕೆಯು ಪರಿಮಾಣ ಹೊಂದಾಣಿಕೆಗಿಂತಲೂ ಕಡಿಮೆ ಆದಾಯವನ್ನು ತರುತ್ತದೆ. ಜೊತೆಗೆ, ಪರಿಮಾಣ ಹೊಂದಾಣಿಕೆಗಿಂತಲೂ ಹೆಚ್ಚು ನಷ್ಟ ಉಂಟುಮಾಡುತ್ತದೆ. ಏಕೆಂದರೆ, ಉತ್ಪಾದನೆಯಲ್ಲಿ ಕಡಿತವಾಗಿರುವುದಿಲ್ಲ. ಈ ಎರಡೂ ಕಾರಣಗಳಿಂದಾಗಿ ಬೆಲೆ ಹೊಂದಾಣಿಕೆಯು ಉತ್ಪಾದಕರಿಗೆ ಒಂದು ಕೆಟ್ಟ ಆಯ್ಕೆಯಾಗುತ್ತದೆ.

ಆದ್ದರಿಂದ, ಒಪೆಕ್‌ನ ನಿರ್ಧಾರದಲ್ಲಿ ಯಾವ ದುರುದ್ದೇಶವೂ ಇಲ್ಲ, ಅಮೆರಿಕಾದ ಬಗ್ಗೆ ತಿರಸ್ಕಾರವೂ ಇಲ್ಲ. ಮತ್ತು, ಈ ನಿರ್ಧಾರವನ್ನು ಒಪೆಕ್‌ನ ದೃಷ್ಟಿಕೋನದ ಮೂಲಕ ನೋಡಿದಾಗ ಅದನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು. ನಿಜ, ತೈಲ ಉತ್ಪಾದನೆಯನ್ನು ತಗ್ಗಿಸಬಾರದೆಂದು ಅಮೆರಿಕಾ ಹೇರುತ್ತಿರುವ ಒತ್ತಡವನ್ನು ಎದುರಿಸಿ ನಿಲ್ಲಲು ಅವರಿಗೆ ಸಾಧ್ಯವಾಗಿದೆ. ಅಮೆರಿಕಾದ ಪ್ರಾಬಲ್ಯಕ್ಕೆ

ಪುಟ 14 ಕ್ಕೆ

## ತೈಲ ಉತ್ಪಾದನೆಯ ಕಡಿತದ 'ಒಪೆಕ್' ನಿರ್ಧಾರ ಅಮೆರಿಕಾದ ಪ್ರಾಬಲ್ಯಕ್ಕೆ ಮಿತ್ರರಿಂದಲೇ ಸವಾಲು

ಪುಟ 13 ರಿಂದ

ನೆನ್ನೆ ಮೊನ್ನೆಯವರೆಗೆ ಅದರ ಆಪ್ತ ಮಿತ್ರರಾಗಿದ್ದ ದೇಶಗಳಿಂದಲೂ ಸವಾಲು ಬರುತ್ತಿರುವುದು ಬದಲಾಗುತ್ತಿರುವ ಸಮಯದ ಸಂಕೇತವಾಗಿದೆ.

ಕಚ್ಚಾ ತೈಲದ ಬೆಲೆಗಳು ಇತ್ತೀಚೆಗೆ ಇಳಿದಿವೆ, ನಿಜ. ಈ ವರ್ಷದ ಜೂನ್‌ನಲ್ಲಿ ಪ್ರತಿ ಬ್ಯಾರೆಲ್‌ಗೆ 120 ಡಾಲರ್ ಮಟ್ಟದಲ್ಲಿದ್ದ ಬ್ರೆಂಟ್ ಕಚ್ಚಾ ತೈಲದ ಬೆಲೆಯು, ಉತ್ಪಾದನೆಯನ್ನು ಕಡಿತಗೊಳಿಸುವ ಬಗ್ಗೆ ಒಪೆಕ್ ನಿರ್ಧಾರ ತೆಗೆದುಕೊಳ್ಳುವ ಹೊತ್ತಿಗೆ 100 ಡಾಲರ್‌ಗಳಿಗಿಂತಲೂ ಕೆಳಗೆ ಇಳಿದಿತ್ತು. ಆದರೆ, ಒಪೆಕ್‌ನ ಈ ನಿರ್ಧಾರವು ಹಣದುಬ್ಬರವನ್ನು ಏರಿಸುವುದಿಲ್ಲವೇ ಎಂದು ಕೇಳಬಹುದು. ಹಣದುಬ್ಬರವು ನಾಗಾಲೋಟ ಕಿತ್ತಿರುವ ಸಮಯದಲ್ಲಿ, ಪೆಟ್ರೋ-ಉತ್ಪನ್ನಗಳ ತಯಾರಕರೂ ಸೇರಿದಂತೆ ಕಾರ್ಪೊರೇಟ್ ಸಂಸ್ಥೆಗಳ ಲಾಭದ ಅಂತರ ಹೆಚ್ಚುತ್ತಿರುವ ಅಂಶವು ಗಮನಾರ್ಹವಾಗಿದೆ. ಈಗ, ಕಚ್ಚಾ ತೈಲ ಬೆಲೆಗಳು ಏರಿದರೆ ಮತ್ತು ಈ ಏರಿಕೆಯನ್ನು ಹಾಗೆಯೇ ಗ್ರಾಹಕರಿಗೆ "ವರ್ಗಾಯಿಸಿದರೆ", ಮುಂದೆ ಸಂಭವಿಸುವ ಹಣದುಬ್ಬರವು ಕಚ್ಚಾ ತೈಲದ ಬೆಲೆ ಏರಿಕೆಯ ಕಾರಣದಿಂದಲೇ ಎಂದು ಹೇಳಬಹುದು. ಆದರೆ, ಲಾಭದ ಅಂತರವು ಮತ್ತಷ್ಟು ಹೆಚ್ಚಿದರೆ, ಅದು ಕಾರ್ಪೊರೇಟ್ ದುರಾಸೆಯೇ. ಕಚ್ಚಾ ತೈಲದ ಬೆಲೆ ಏರಿಕೆಯಲ್ಲ, ದುರಾಸೆಯೇ ಹಣದುಬ್ಬರದ ಹಿಂದಿರುವ ತಕ್ಷಣದ ಕಾರಣವಾಗುತ್ತದೆ.

ಮೆಟ್ರೋಪಾಲಿಟನ್ ಬಂಡವಾಳಶಾಹಿ ದೇಶಗಳಲ್ಲಿ ಹಣದುಬ್ಬರದ ಇಂದಿನ ಏರಿಕೆಯ ಹಿಂದಿರುವ ತೀರಾ ಸಮೀಪದ ಅಂಶವೆಂದರೆ ಕಾರ್ಪೊರೇಟ್ ದುರಾಸೆಯೇ ಎಂಬುದನ್ನು ವಿಶಾಲವಾಗಿ ಗುರುತಿಸಲಾಗಿದೆ. ವಾಸ್ತವವಾಗಿ, ಬ್ರಿಟನ್‌ನಲ್ಲಿ ತೈಲ ಕಂಪನಿಗಳ ಮೇಲಿನ ತೆರಿಗೆಗಳನ್ನು ಹೆಚ್ಚಿಸಬೇಕೆಂಬ ಬೇಡಿಕೆ ಬಲವಾಗಿಯೇ ಇತ್ತು. ಅದನ್ನು ನಡು-ಪಂಥೀಯ ಲಿಬರಲ್ ಡೆಮಾಕ್ರಾಟ್‌ಗಳೂ ಸಹ ಬೆಂಬಲಿಸಿದರು. ಆದರೆ, ಅಂದಿನ ಪ್ರಧಾನಿ ಬೋರಿಸ್ ಜಾನ್ಸನ್ ಅದನ್ನು ತಿರಸ್ಕರಿಸಿದರು.

ಅಮೆರಿಕಾ ಬಯಸುವ ಪರಿಸ್ಥಿತಿ ಎಂಥದ್ದು ಎಂದರೆ, ಅದರಲ್ಲಿ ಒಟ್ಟಾರೆ ಬೇಡಿಕೆಯ ಇಳಿಕೆಯ ಮೂಲಕ ಹಣದುಬ್ಬರವನ್ನು ಅಂಕೆಯಲ್ಲಿಡಬೇಕಾದ ಬಡ್ಡಿ ದರ ಏರಿಕೆಯು ಒಂದಲ್ಲ, ಎರಡು ಮಾರ್ಗಗಳ ಮೂಲಕ ಕೆಲಸ ಮಾಡುತ್ತದೆ: ಮೊದಲನೆಯದಾಗಿ, ನಿರುದ್ಯೋಗವನ್ನು ಉಂಟುಮಾಡುವ ಮೂಲಕ, ಅಂದರೆ, ಕಾರ್ಮಿಕರ ಚೌಕಾಶಿಯ ಸಾಮರ್ಥ್ಯವನ್ನು ದುರ್ಬಲಗೊಳಿಸಿದ ನಂತರ ಹಣದುಬ್ಬರದ ವಿರುದ್ಧ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಾಧ್ಯವಾಗದ ಮಟ್ಟದ ಹಣ-ವೇತನದ ಮೂಲಕ; ಮತ್ತು ಎರಡನೆಯದಾಗಿ, ಪ್ರಾಥಮಿಕ ಸರಕುಗಳ ಬೆಲೆಗಳನ್ನು, ವಿಶೇಷವಾಗಿ ಗ್ರಾಹಕರಿಗೆ ಬಹಳ ಮುಖ್ಯವಾದ ತೈಲದ ಬೆಲೆಯನ್ನು ಇಳಿಕೆ ಮಾಡುವ ಮೂಲಕ, ಗ್ರಾಹಕ ಬೆಲೆ-ಸೂಚ್ಯಂಕವನ್ನು ನಿಯಂತ್ರಿಸುವುದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಕಾರ್ಮಿಕರನ್ನು ಮತ್ತು ಪ್ರಾಥಮಿಕ ಸರಕುಗಳ ಉತ್ಪಾದಕರನ್ನು ಬಲಿಕೊಟ್ಟು ಮೆಟ್ರೋಪಾಲಿಟನ್ ದೇಶಗಳಲ್ಲಿ ಹಣದುಬ್ಬರವನ್ನು ನಿಯಂತ್ರಿಸುವುದು ಅಮೆರಿಕಾದ ಉದ್ದೇಶ. ಈ ಕಾರ್ಯಸೂಚಿಯಲ್ಲಿ ಇಲ್ಲದಿರುವ ಅಂಶವೆಂದರೆ, ಹಣದುಬ್ಬರಕ್ಕೆ ತೀರಾ ಹತ್ತಿರದ ಕಾರಣವಾಗಿರುವ ಕಾರ್ಪೊರೇಟ್ ಲಾಭದ ಅಂತರದ ನಿಯಂತ್ರಣವೇ. ಉತ್ಪಾದನೆಯ ಕಡಿತವು ಕಚ್ಚಾ ತೈಲದ ಬೆಲೆ-ಕುಸಿತವನ್ನು ತಡೆಯುತ್ತದೆ. ಈ ಮೂಲಕ ತೈಲ ಉತ್ಪಾದಕರು ಮೇಲೆ ತಿಳಿಸಿದ ಎರಡನೇ ಮಾರ್ಗದ ಉದ್ದೇಶವನ್ನು ವಿಫಲಗೊಳಿಸುತ್ತಾರೆ.

ಒಪೆಕ್‌ನ ನಿರ್ಧಾರದಿಂದಾಗಿ ಉಂಟಾಗುವ ತೈಲ ಬೆಲೆ ಏರಿಕೆಯ ಪರಿಣಾಮವನ್ನು ಎದುರಿಸಲು ತನ್ನ ಮೀಸಲು ಸಂಗ್ರಹದಿಂದ ಹತ್ತು ಮಿಲಿಯನ್ ಬ್ಯಾರೆಲ್ ತೈಲವನ್ನು ನವೆಂಬರ್‌ನಲ್ಲಿ ಬಿಡುಗಡೆ ಮಾಡುವುದಾಗಿ ಅಮೆರಿಕಾ ಘೋಷಿಸಿದೆ. ಇದು ಅಮೆರಿಕದಲ್ಲಿ ನವೆಂಬರ್‌ನಲ್ಲಿ ನಡೆಯುವ ಚುನಾವಣೆಗಳ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಬಹುದು. ತೆರೆದುಕೊಳ್ಳುತ್ತಿರುವ ಬಿಕ್ಕಟ್ಟಿನಿಂದಾಗಿ ಅಮೆರಿಕದ ಗ್ರಾಹಕರೂ ಸಹ ನವೆಂಬರ್ ನಂತರ ಮತ್ತಷ್ಟು ಒತ್ತಡಕ್ಕೆ ಒಳಗಾಗುತ್ತಾರೆ.

## ಬಿಲ್ಕಿಸ್ ಬಾನೊ ಪ್ರಕರಣದಲ್ಲಿ ಅನಾವರಣಗೊಳ್ಳುತ್ತಿರುವ ಅಮೃತ ಕಾಲ ಮತ್ತು 'ಸನ್ನಡತೆ'

ಪುಟ 12 ರಿಂದ

ಬದಿಗೊತ್ತಿ 14 ವರ್ಷಗಳ ಜೈಲುವಾಸ ಪೂರೈಸಿದ್ದಾರೆ ಮತ್ತು ಸನ್ನಡತೆಯಿಂದ ವರ್ತಿಸಿದ್ದಾರೆ ಎಂದು ಕಾರಣ ಕೊಟ್ಟು ಅವರನ್ನು ಬಿಡುಗಡೆ ಮಾಡುವ ನಿರ್ಧಾರಕ್ಕೆ ಬಂದುದಾಗಿ ಹೇಳಲಾಗಿದೆ- ಅದೂ ಫಾಸ್ಟ್ ಟ್ರಾಕ್‌ನಲ್ಲಿ.

4. ಆದರೆ ದಾಖಲೆಗಳ ಪ್ರಕಾರ ಈ 11 ಮಂದಿಯಲ್ಲಿ 10 ಮಂದಿ 1000ಕ್ಕೂ ಹೆಚ್ಚು ದಿನ ಪೆರೋಲ್, ತುರ್ತು ಸ್ಥಿತಿ ಇತ್ಯಾದಿ ಕಾರಣಗಳಿಂದಾಗಿ ಜೈಲಿನಿಂದ ಹೊರಗಿದ್ದರು. 11ನೇ ಯವರೂ 998 ದಿನಗಳ ಕಾಲ ಹೊರಗಿದ್ದರು. ಒಟ್ಟಾಗಿ ಸರಾಸರಿ 1176 ದಿನಗಳ ಕಾಲ ಜೈಲಿನಿಂದ ಹೊರಗಿದ್ದರು, ಅಂದರೆ ವಾಸ್ತವ ಜೈಲುವಾಸ ಸುಮಾರು 11 ವರ್ಷ ಮಾತ್ರ.
5. ಅತೀ ಹೆಚ್ಚು ಕಾಲ ಹೊರಗಿದ್ದ ವ್ಯಕ್ತಿ ಕಳೆದ 14 ವರ್ಷಗಳಲ್ಲಿ 11 ಬಾರಿ ಹೊರಗೆ ಹೋಗಿದ್ದು ಮೂರು ಬಾರಿ ಕೊಟ್ಟ ಅವಧಿ ದಾಟಿ ಹೋದ ನಂತರವೇ ಮರಳಿದ್ದು, ಒಮ್ಮೆಯಂತೂ ಈ ವಿಷಯದಲ್ಲಿ ಆತನ ಮೇಲೆ ಪ್ರಕರಣ ದಾಖಲಿಸಲಾಗಿತ್ತು. ಇನ್ನೊಬ್ಬರು 90ದಿನ ಪೆರೋಲ್ ಪಡೆದಿದ್ದರೂ ಮರಳಿದ್ದು 287 ದಿನಗಳ ನಂತರವೇ
6. ಒಬ್ಬ ಅಪರಾಧಿ ಪೆರೋಲ್‌ನಲ್ಲಿದ್ದಾಗ ಆತನ ಮೇಲೆ ಐಪಿಸಿ ಸೆಕ್ಷನ್ 354 (ಮಹಿಳೆಯ ಮಾನಾಪಹರಣ ಪ್ರಯತ್ನ), ಸೆಕ್ಷನ್ 504(ಶಾಂತಿ ಕದಡುವ ಉದ್ದೇಶದಿಂದಲೇ ಅವಮಾನ ಮಾಡುವುದು), ಸೆಕ್ಷನ್ 506(2) (ಕ್ರಿಮಿನಲ್ ಬೆದರಿಕೆ ಹಾಕುವುದು) ಅಡಿಯಲ್ಲಿ ಜೂನ್ 2020ರಲ್ಲಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿತ್ತು
7. ಕೇವಲ ಒಬ್ಬ ಅಪರಾಧಿಯ ಬಗ್ಗೆ ಮಾತ್ರವೇ ದಹೋಡ್ ಎಸ್‌ಪಿ ಅವಧಿಪೂರ್ವ ಬಿಡುಗಡೆಯ ಬಗ್ಗೆ ಬಾನೊ ಮತ್ತು ಅವರ ಕುಟುಂಬದವರ ಅಭಿಪ್ರಾಯ ಕೇಳಿದ್ದರು, ಅವರು ಇದು ಸಲ್ಲದು ಎಂದು ಖಡಾಖಂಡಿತವಾಗಿ ಹೇಳಿದ್ದರು.

## ಬಿಜೆಪಿಗಷ್ಟೇ ಅಲ್ಲ, ಆಮ್ ಆದ್ಮಿ ಪಕ್ಷಕ್ಕೂ ಅಂಬೇಡ್ಕರ್ ಚುನಾವಣಾ ಸಾಧನವಷ್ಟೇ!

ಪುಟ 11 ರಿಂದ

ಒತ್ತಾಯಿಸಿ ತನ್ನ ಚಳುವಳಿಯನ್ನು ಬಲಪಡಿಸಿತು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಈ ವಿದ್ಯಮಾನವನ್ನು ಅಚ್ಚುಕಟ್ಟಾಗಿ ವಿವರಿಸಿದರು, ಮಂಡಲಕ್ಕೆ ಒಂದು ಸ್ಪಂದನೇ ಬೇಕಾಗಿತ್ತು, ಅದು ಕಮಂಡಲದಲ್ಲಿ, ಅಂದರೆ ಹಿಂದೂ ಧರ್ಮದಲ್ಲಿ ಸಿಕ್ಕಿತು ಎಂದರು.

ಹೀಗೆ, ಒಂದೆರಡು ವರ್ಷಗಳ ಹಿಂದೆ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಮೀಸಲಾತಿಯನ್ನು ಪರಿಚಯಿಸಿದಂತೆ, ಆರೆಸ್ಸೆಸ್ ದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ನ್ಯಾ ಒದಗಿಸುವ ಮೀಸಲಾತಿ ಕ್ರಮವನ್ನು ದುರ್ಬಲಗೊಳಿಸಬಲ್ಲದು. ಇದು ಸಾಮಾನ್ಯವಾಗಿ "ಸಾಮಾಜಿಕ ಎಂಜಿನಿಯರಿಂಗ್" ಎಂದು ಕರೆಯಲ್ಪಡುವ ಕ್ರಿಯೆಯ ಮೂಲಕ ಅದು ದಲಿತ, ಹಿಂದುಳಿದ ಮತ್ತು ಆದಿವಾಸಿ ಸಮುದಾಯಗಳ ಸದಸ್ಯರಿಗೆ ತನ್ನಲ್ಲಿ ಅವಕಾಶ ಕಲ್ಪಿಸಿ ಕೊಟ್ಟಿದೆ. ದಲಿತರು ಮತ್ತು ಹಿಂದುಳಿದವರಿಗಾಗಿ ಸಾಮಾಜಿಕ ಸಮರಸತಾ ಮಂಚ್, ಆದಿವಾಸಿಗಳಿಗಾಗಿ ವನವಾಸಿ ಕಲ್ಯಾಣ ಆಶ್ರಮ, ಮತ್ತು ಇತರ ಅನೇಕ ಸಮುದಾಯಗಳನ್ನು ತನ್ನ ಹಿಂದೂ ರಾಷ್ಟ್ರದ ಅಜೆಂಡಾಕ್ಕೆ ಗೆದ್ದುಕೊಳ್ಳುವ ಸಂಸ್ಥೆಗಳನ್ನು ಇದು ತೇಲ ಬಿಡುತ್ತದೆ. ತಳ ಸಮುದಾಯಗಳ ವೀರರನ್ನು ಮುಸ್ಲಿಮರಿಗೆ ಎದುರಾಗಿ ಶತ್ರುಗಳಲ್ಲದಿದ್ದರೂ, 'ಐತಿಹಾಸಿಕ ಎದುರಾಳಿ'ಗಳಾಗಿ, ಆರಿಸಿ ಪ್ರಸ್ತುತ ಪಡಿಸುತ್ತದೆ. ಇದಕ್ಕೆ ಅತ್ಯುತ್ತಮ ಉದಾಹರಣೆ, ಪಾಸ್ಸಿ ದಲಿತ ಸಮುದಾಯದ ರಾಜಾ ಸುಹೇಲ್‌ದೇವ್. ಮೊದಲು ಆತನನ್ನು ವೈಭವೀಕರಿಸಿತು, ಮುಸ್ಲಿಂ-ವಿರೋಧಿಯೆಂಬ ಸ್ವರೂಪ ಕೊಟ್ಟಿತು. ಅವರು ಇದಕ್ಕೆ ಉತ್ತಮ ಉದಾಹರಣೆಯಾಗಿದ್ದು, ಅವರನ್ನು ಮೊದಲು ವೈಭವೀಕರಿಸಿ ನಂತರ ಮುಸ್ಲಿಂ ವಿರೋಧಿ ಓಲೈಕೆಯನ್ನು ನೀಡಿದರು.

ದಲಿತ ನಾಯಕರು ಬಿಜೆಪಿಯ ಅಧಿಕಾರದತ್ತ ಸೆಳೆಯಲ್ಪಟ್ಟಿದ್ದಾರೆ, ವಿಶೇಷವಾಗಿ 2014 ರಿಂದ ಅದು ರಾಷ್ಟ್ರೀಯ ಚುನಾವಣೆಗಳನ್ನು ವ್ಯಾಪಕವಾಗಿ ಪ್ರಾರಂಭಿಸಿದಾಗಿನಿಂದ. ಇದು ಹಿಂದುತ್ವ ದೇವಗಣದಲ್ಲಿತುಂಬಾ ಕೆಳಗಣ ಸ್ಥಾನಮಾನ ಪಡೆದಿರುವ ಸಮುದಾಯಗಳ ನಡುವೆ ತನ್ನ ಚುನಾವಣಾ ಮತ್ತು ಸೈದ್ಧಾಂತಿಕ ಬೇರುಗಳನ್ನು ಅಗೆದು ಸೇರಿಸಲು ಆರೆಸ್ಸೆಸ್‌ಗೆ ಸಹಾಯ ಮಾಡಿತು. ಅದು ಮೀಸಲಾತಿಯ ಸಕಾರಾತ್ಮಕಕ್ರಮವನ್ನು ಬುಡಮೇಲು ಮಾಡುವ ರೀತಿಯಲ್ಲಿ 'ಸೇವೆ' ಎಂಬುದನ್ನೂ ಮಾಡುತ್ತದೆ.

ಗೌತಮ್ ಅವರು ತಮ್ಮ ಪಕ್ಷವು ತಮ್ಮ ಪರವಾಗಿ ನಿಲ್ಲದೇ ಹೋದಾಗ ರಾಜೀನಾಮೆ ನೀಡಿರುವುದರಲ್ಲಿ ಆಶ್ಚರ್ಯವೇನಿದೆ? ಅದು ತಮ್ಮ ಧಾರ್ಮಿಕ ಗುರುತನ್ನು ಆರಿಸಿಕೊಳ್ಳುವ ನಾಗರಿಕರ ಹಕ್ಕುಗಳ ಪರವಾಗಿಯೂ ನಿಲ್ಲಲಿಲ್ಲ. ನಿಜವಾಗಿ, ಇದು ಅಂಬೇಡ್ಕರ್ ಹೋರಾಟ ಮಾಡಿದ ಸಾಮಾಜಿಕ ನ್ಯಾಯದ ಗುರಿಸಾಧನೆಗೆ ದ್ರೋಹ ಬಗೆದಿದೆ. ಕೇಜ್ರೀವಾಲ್ ಚಾರಿತ್ರಿಕವಾಗಿ ಅಂಚಿಗೆ ತಳ್ಳಲ್ಪಟ್ಟವರಿಗೆ ಮೀಸಲಾತಿಯ ಕ್ರಮವನ್ನು ವಿರೋಧಿಸುವ 'ಯೂತ್ ಫಾರ್ ಇಕ್ವಾಲಿಟಿ'ಯಲ್ಲಿ ಸಕ್ರಿಯರಾಗಿದ್ದರು ಎಂಬುದನ್ನು ಮರೆಯುವುದು ಕಷ್ಟ, ಎಎಪಿ ಆಡಳಿತವಿರುವ ರಾಜ್ಯಗಳಲ್ಲಿ ಅಂಬೇಡ್ಕರ್ ಅವರನ್ನು ಪೂಜನೀಯರು ಎಂದು ಬಿಂಬಿಸಿರುವುದು ಕೇವಲ ಚುನಾವಣಾ ಲಾಭಕ್ಕಾಗಿಯೇ ಹೊರತು ಸೈದ್ಧಾಂತಿಕ ಬದ್ಧತೆಯಿಂದಲ್ಲ ಎಂಬುದು ಕಳೆದ ಕೆಲವು ದಿನಗಳ ಘಟನೆಗಳಿಂದ ತೋರುತ್ತದೆ. ಬಹುಶಃ ಎಎಪಿ ಈ ಆರೋಪವನ್ನು ಅಲ್ಲಗಳೆಯುವುದು ಬಹಳ ಕಷ್ಟ.

## ಹೆಚ್ಚುತ್ತಿರುವ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದ ಎಂಎಸ್‌ಪಿ ಪ್ರಕಟಣೆ: ರೈತರಿಗೆ ಮತ್ತೊಮ್ಮೆ ಮೋದಿ ಸರಕಾರದ ದ್ರೋಹ-ಎಐಕೆಎಸ್ ಖಂಡನೆ

ಪುಟ 2 ರಿಂದ

ಇಂಧನ ಮತ್ತು ರಸಗೊಬ್ಬರಗಳ ಬೆಲೆಯಲ್ಲಿಯೂ ತೀವ್ರ ಏರಿಕೆಯಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಕಳೆದ ಕೆಲವು ಋತುಗಳಲ್ಲಿ ರಸಗೊಬ್ಬರಗಳ ಪೂರೈಕೆಯಲ್ಲಿನ ಕೊರತೆಯು ದೇಶದ ಅನೇಕ ಭಾಗಗಳಲ್ಲಿ ದೊಡ್ಡ ಪ್ರಮಾಣದಲ್ಲಿ ರಸಗೊಬ್ಬರಗಳ ಕಾಳಸಂತೆಗೆ ಕಾರಣವಾಗಿದೆ. ಆದಾಗ್ಯೂ, ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗವು (ಸಿಎಸಿಪಿ) ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಗಣನೆಗೇ ತೆಗೆದುಕೊಳ್ಳದೆ ಸಾಗುವಳಿ ವೆಚ್ಚದ ಹೆಚ್ಚಳವನ್ನು ಕಡಿಮೆ ಅಂದಾಜು ಮಾಡಿದೆ. ಸಿಎಸಿಪಿ ಪ್ರಕಾರ, ಹೆಚ್ಚಿನ ಹಿಂಗಾರು ಬೆಳೆಗಳ ಕೃಷಿ ವೆಚ್ಚವು ಗೋಧಿಗೆ 3.8 %, ಕಡಲೆಗೆ 5.4% ಮತ್ತು ರೇಪ್‌ಸೀಡ್ ಮತ್ತು ಸಾಸಿವೆಗೆ 6.7% ದಷ್ಟು ಹೆಚ್ಚಾಗಿದೆಯಷ್ಟೇ. ಇದು ಕೃಷಿ ಲಾಗುವಾಡುಗಳ ಬೆಲೆಗಳಲ್ಲಿ ಆಗಿರುವ ಭಾರೀ ಹೆಚ್ಚಳವನ್ನು ಎಷ್ಟೊಂದು ಕೀಳಂದಾಜು ಮಾಡಲಾಗಿದೆ ಎಂಬುದನ್ನು ತೋರಿಸುತ್ತದೆ.

ಸಿಎಸಿಪಿ ಮಾಡಿರುವ ಕೃಷಿವೆಚ್ಚದ ಅಂದಾಜುಗಳು ನಿಜವಾದ ವೆಚ್ಚ ಹೆಚ್ಚಳಗಳನ್ನು ಬಿಂಬಿಸುತ್ತವೆ ಎಂದಿಟ್ಟುಕೊಂಡರೂ, ವಿವಿಧ ಹಿಂಗಾರು ಬೆಳೆಗಳ ಕೃಷಿಯಿಂದ ನಿರೀಕ್ಷಿತ ಪ್ರತಿಫಲವು ಅತ್ಯಲ್ಪವಾಗಿದೆ ಮತ್ತು ಅವನ್ನು ಕಳೆದ ವರ್ಷದ ಮಟ್ಟದಲ್ಲಿಯೇ ಇಡಲಾಗಿದೆ. ಉದಾಹರಣೆಗೆ, ಅತ್ಯಂತ ಪ್ರಮುಖ ಹಿಂಗಾರು ಬೆಳೆಯಾದ ಗೋಧಿಗೆ ಪ್ರಕಟಿಸಿರುವ ಬೆಂಬಲ ಬೆಲೆ ಸಿಎಸಿಪಿ ಅಂದಾಜು ಮಾಡಿದ ವೆಚ್ಚದ ಆಧಾರದಲ್ಲಿ ಲೆಕ್ಕ ಹಾಕಿದ ಸಿ2 ವೆಚ್ಚಕ್ಕಿಂತ ಕೇವಲ 30%ದಷ್ಟು ಹೆಚ್ಚಿದೆ. ಬೇಳೆಗೆ ಪ್ರತಿಫಲ ಕೇವಲ 20%. ಈ ಸಿ2 ನ ಅಧಿಕೃತ ಅಂದಾಜು ವಾಸ್ತವ ವೆಚ್ಚಕ್ಕಿಂತ ತುಂಬಾ ಕಡಿಮೆಯಿರುವುದರಿಂದ, ನಿಜವಾದ ಪ್ರತಿಫಲ ಈ 30% ಅಥವ 20%ದಷ್ಟೂ ಆಗುವುದಿಲ್ಲ ಎಂದು ಎಐಕೆಎಸ್ ಹೇಳಿದೆ.

ಇದಲ್ಲದೆ, ಆಯ್ದ ಮುಂಗಾರು ಮತ್ತು ಹಿಂಗಾರು ಬೆಳೆಗಳಿಗೆ ಪ್ರತಿ ಆರು ತಿಂಗಳಿಗೊಮ್ಮೆ ಪ್ರಕಟಿಸುವ ಎಂಎಸ್‌ಪಿಗಳು ದೇಶದ ಹೆಚ್ಚಿನ ಭಾಗಗಳಲ್ಲಿನ ರೈತರಿಗೆ ಸಂಪೂರ್ಣ ಅರ್ಥಹೀನವಾಗಿವೆ, ಏಕೆಂದರೆ ಕೇಂದ್ರ ಸರ್ಕಾರದಿಂದ ಈ ಬೆಳೆಗಳ ಯಾವುದೇ ಸಂಗ್ರಹಣೆ/ಖರೀದಿಯ ವ್ಯವಸ್ಥೆ ಇಲ್ಲ ಎಂಬುದನ್ನು ಮತ್ತೆ ಹೇಳಬೇಕಾಗಿದೆ ಎಂದಿರುವ ಎಐಕೆಎಸ್, ಹೀಗಾಗಿ ರೈತರು ಸ್ಥಳೀಯ ವರ್ತಕರಿಗೆ ಎಂಎಸ್‌ಪಿಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲೇ ಬೇಕಾಗುತ್ತದೆ ಎಂದು ಹೇಳಿದೆ.

ಹೀಗೆ ಇದು ರೈತ ವಿರೋಧಿ ಘೋಷಣೆ ಎಂದು ಖಂಡಿಸಿರುವ ಅಖಿಲ ಭಾರತ ಕಿಸಾನ್ ಸಭಾ ಸ್ವಾಮಿನಾಥನ್ ಆಯೋಗದ ಸೂತ್ರದ ಪ್ರಕಾರವೇ ಎಂಎಸ್‌ಪಿಯನ್ನು ನಿಗದಿಪಡಿಸಬೇಕು ಎಂಬ ಬೇಡಿಕೆಯನ್ನು ಪುನರುಚ್ಚರಿಸಿದೆ ಮತ್ತು ಸಮಗ್ರ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ದರದಲ್ಲಿ ಎಂಎಸ್‌ಪಿಗೆ ಕಾನೂನು ಖಾತರಿಗಾಗಿ ತಮ್ಮ ದೇಶವ್ಯಾಪಿ ಹೋರಾಟವನ್ನು ಹೆಚ್ಚು ತೀವ್ರಗೊಳಿಸಲು ಭಾರತದ ರೈತರಿಗೆ ಅದು ಕರೆ ನೀಡಿದೆ.

# ಗುಜರಾತಿನಲ್ಲಿ ಕಾರ್ಮಿಕರು ಮತದಾನ ಮಾಡುವಂತೆ ನಿಗಾ ಇಡಲು ಮಾಲಕರಿಗೆ ಅಧಿಕಾರ ನೀಡುವ ಎಂ.ಓ.ಯು – ಸಿಐಟಿಯು ಖಂಡನೆ; ಚುನಾವಣಾ ಆಯೋಗದ ಮತ್ತೊಂದು ವಿಲಕ್ಷಣ ಕ್ರಮ–ಇಎಎಸ್ ಶರ್ಮ

ಗುಜರಾತಿನಲ್ಲಿ, ಚುನಾವಣಾ ಆಯೋಗ ದೇಶದಲ್ಲೇ ಮೊತ್ತ ಮೊದಲ ಬಾರಿಗೆ 1000 ಕಾರ್ಪೊರೇಟ್‌ಗಳು ಅವರ ಬಳಿ ದುಡಿಯುವ ಕಾರ್ಮಿಕರ 'ಚುನಾವಣಾ ಭಾಗವಹಿಸುವಿಕೆ'ಯ ಮೇಲೆ ನಿಗಾ ಇಡುವ ಬಗ್ಗೆ ಒಂದು 'ತಿಳುವಳಿಕೆ ಪತ್ರ'(ಎಂಒಯು)ಕ್ಕೆ ಸಹಿ ಹಾಕಿರುವುದು 'ಕಾರ್ಮಿಕರ ಮೇಲೆ ನಡೆಸುವ ಪ್ರಚೋದನಕಾರಿ, ಬಲಾತ್ಕಾರಿ ಮತ್ತು ಅವರ ಹೆಸರುಗೆಡಿಸುವ ಕ್ರಮ' ಎಂದು ಸಿಐಟಿಯು ಖಂಡಿಸಿದರೆ, ಭಾರತ ಸರಕಾರದ ನಿವೃತ್ತ ಕಾರ್ಯದರ್ಶಿ ಇಎಎಸ್ ಶರ್ಮ ಕೂಡ ಇದನ್ನು ಬಲಾತ್ಕಾರ ಹೇರುವ ಕ್ರಿಯೆ ಎನ್ನುತ್ತ ಚುನಾವಣಾ ಆಯೋಗ ಇದರಲ್ಲಿ ಭಾಗಿಯಾಗಬಾರದು ಎಂದು ಆಗ್ರಹಿಸಿ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಈ ರೀತಿ ಕಾರ್ಮಿಕರನ್ನು ಮತ ನೀಡುವಂತೆ ಬಲಾತ್ಕರಿಸುವ ಕ್ರಮ ಒಂದು ನಿರ್ದಿಷ್ಟ ಪಕ್ಷಕ್ಕೆ ಅವರು ಮತ ನೀಡುವಂತೆ ಬಲವಂತಪಡಿಸುವ 'ಭ್ರಷ್ಟ ನಡವಳಿಕೆ'ಯ ಮಟ್ಟಕ್ಕೆ ಇಳಿಯಬಹುದು ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಕಾರ್ಪೊರೇಟ್‌ಗಳು ಮತ್ತು ಚುನಾವಣಾ ಆಯೋಗದ ನಡುವಿನ ಈ ಒಪ್ಪಂದದ ಪ್ರಕಾರ ಅವು ಮತದಾನದಲ್ಲಿ ಭಾಗವಹಿಸದ ತಮ್ಮ ಕಾರ್ಮಿಕರ ಹೆಸರುಗಳನ್ನು ತಮ್ಮ ನೋಟೀಸ್ ಫಲಕಗಳಲ್ಲಿ, ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಿ ಸಾರ್ವಜನಿಕ ಅವಮಾನದ ಕ್ರಮಕೈಗೊಳ್ಳುವ ಅಧಿಕಾರ ಪಡೆಯುತ್ತವೆ.

**ಹದ್ದು ಮೀರಿದ ಕಸರತ್ತು ನಡೆಸಬೇಡಿ– ಆಯೋಗಕ್ಕೆ ಸಿಐಟಿಯು ಆಗ್ರಹ**

ಈ ಕ್ರಮ ಚುನಾವಣೆಗಳಲ್ಲಿ ಮತದಾರರ ನಿರಾಸಕ್ತಿ ನಿವಾರಣೆಗಾಗಿ ಮಾತ್ರವೇ ಅಲ್ಲ ಎಂಬುದು ಸ್ಪಷ್ಟವಾಗಿದೆ; ಮತದಾನ ಮಾಡದವರನ್ನು (ಕಾರ್ಮಿಕರಲ್ಲಿ) ಗುರುತಿಸುವ, ಹೆಸರಿಸುವ ಮತ್ತು ನಾಚಿಕೆಗೀಡು ಮಾಡುವ ಅರ್ಹತೆ ಚುನಾವಣಾ ಆಯೋಗ ಕ್ಕಾಗಲೀ ಉದ್ಯೋಗದಾತರಿಗಾಗಲೀ ಇಲ್ಲ. ಆದ್ದರಿಂದ ಹೀಗೆ ಬಲವಂತ ಪಡಿಸುವುದು ಬೆದರಿಸುವ, ತಪ್ಪಾಗಿ ಶಿಕ್ಷಿಸುವ ಕ್ರಮವಾಗುತ್ತದೆ, ಮತದಾನವು ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರಿಕನ ಹಕ್ಕು, ಮತ್ತು ಆ ಹಕ್ಕನ್ನು ಚಲಾಯಿಸುವುದನ್ನು ಕಡ್ಡಾಯ ಮಾಡಲಾಗುವುದಿಲ್ಲ. ಹಿಂದೊಮ್ಮೆ ಇಂತಹ ಪ್ರಯತ್ನ ನಡೆದಾಗ ಅದನ್ನು ಗುಜರಾತ್‌ನಲ್ಲಿಯೇ ನ್ಯಾಯಾಂಗವು ತಡೆಹಿಡಿಯಿತು ಎಂಬ ಸಂಗತಿಯನ್ನು ಈ ಹೇಳಿಕೆಯಲ್ಲಿ ಸಿಐಟಿಯು ಪ್ರಧಾನ ಕಾರ್ಯದ ತಪನ್‌ಸೆನ್ ನೆನಪಿಸಿದ್ದಾರೆ.

ಅಲ್ಲದೆ ಚುನಾವಣಾ ಆಯೋಗವು ಸಂವಿಧಾನ ತನಗೆ ವಿಧಿಸಿರುವ ಕಾರ್ಯವ್ಯಾಪ್ತಿಯನ್ನು ಮೀರಿ ಹೋಗುತ್ತಿರುವುದರ ಇನ್ನೊಂದು ಉದಾಹರಣೆಯಾಗಿ ಇದು ಕಾಣುತ್ತಿದೆ. ಕೆಲವೇ ದಿನಗಳ ಹಿಂದೆ ಚುನಾವಣಾ–ಭರವಸೆಗಳ ವಿಷಯದಲ್ಲಿ ರಾಜಕೀಯ ಪಕ್ಷಗಳ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡುವ ಪ್ರಸ್ತಾಪವನ್ನು ಆಯೋಗ ಮುಂದಿಟ್ಟಿದ್ದನ್ನು ಸಿಐಟಿಯು ಹೇಳಿಕೆ ನೆನಪಿಸಿದೆ.

ಇದಲ್ಲದೆ ಇದು ಮಾಲಕ ವರ್ಗಕ್ಕೆ ದುಡಿಯುವ ಜನರನ್ನು ಬೆದರಿಸಲು ಮತ್ತು ಕಿರುಕುಳ ನೀಡಲು ಮತ್ತೊಂದು ಹಿಡಿತವನ್ನು ನೀಡುತ್ತದೆ ಮಾತ್ರವಲ್ಲ, ಮಾಲಕರು ಮತದಾರರ ಮೇಲೆ, ವಿಶೇಷವಾಗಿ ಆಳುವವರ ಪರವಾಗಿ ಅನಗತ್ಯ ಒತ್ತಡ ಹೇರಲು, ಕೈಚಳಕ ತೋರಲು ಅಥವಾ ಪ್ರಭಾವ ಬೀರಲು ಮಾರ್ಗವನ್ನು ತೆರೆಯಬಹುದು ಎಂಬ ಸಂದೇಹವನ್ನು ಸಿಐಟಿಯು ವ್ಯಕ್ತಪಡಿಸಿದೆ.

ಇಂತಹ ಕ್ರಮಕ್ಕೆ, ವಿಶೇಷವಾಗಿ ಕಾರ್ಮಿಕರನ್ನು ಗುರಿಯಾಗಿಸುವುದಕ್ಕೆ ಹೊರಟಿರುವ ಚುನಾವಣಾ ಆಯೋಗವನ್ನು ಖಂಡಿಸುತ್ತಲೇ, ಸಿಐಟಿಯು "ದಯವಿಟ್ಟು ಇಂತಹ ಹದ್ದುಮೀರುವ ಕಸರತ್ತು ನಡೆಸಲು ಹೋಗಬೇಡಿ" ಎಂದು ಆಗ್ರಹಿಸಿದೆ ಮತ್ತು ಇಂತಹ ಅಸಾಂವಿಧಾನಿಕ ಮತ್ತು ನಿರಂಕುಶ ಕ್ರಮದ ವಿರುದ್ಧ ಪ್ರತಿಭಟನೆಗೆ ಕಾರ್ಮಿಕರು ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಎದ್ದೇಳಬೇಕೆಂದು ಕರೆ ನೀಡಿದೆ.

**ಕಾರ್ಪೊರೇಟ್‌ಗಳನ್ನು ಒಳಗೊಳ್ಳುವುದಾದರೂ ಏಕೆ?–ಶರ್ಮಾ ಪ್ರಶ್ನೆ**

ಈ ಎಂಒಯುಗಳನ್ನು ಉದ್ಯಮ ಸಂಸ್ಥೆಗಳು, ಮಾತ್ರವಲ್ಲ, ಅವುಗಳ ಪ್ರತ್ಯೇಕ ಘಟಕಗಳೊಂದಿಗೆಯೂ ಮಾಡಿಕೊಳ್ಳಲಾಗಿದೆ. ಮತ್ತು ಮತದಾನದ ದಿನದವರೆಗೆ ಇನ್ನಷ್ಟು ಮಾಲಕರೊಡನೆ ಈ ರೀತಿಯ ಎಂಒಯುಗಳ ಪ್ರಯತ್ನ ಮುಂದುವರಿಯಲಿದೆ. ಗುಜರಾತಿನಲ್ಲಿ ಈ ವರ್ಷದ ಕೊನೆಯಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಹಿಮಾಚಲ ಪ್ರದೇಶದಲ್ಲೂ ವಿಧಾನಸಭಾ ಚುನಾವಣೆ ನಡೆಯಬೇಕಾಗಿದ್ದು, ಚುನಾವಣಾ ಆಯೋಗ ಅಲ್ಲಿ ಮತದಾನದ ದಿನಾಂಕಗಳನ್ನು ಪ್ರಕಟಿಸಿದರೂ, ಗುಜರಾತಿನ ಸಂದರ್ಭದಲ್ಲಿ ದಿನಾಂಕ ಪ್ರಕಟಿಸುವುದನ್ನು ಮುಂದೂಡಿರುವುದು ಈಗಾಗಲೇ ಹಲವರಲ್ಲಿ ಸಂದೇಹ ಮೂಡಿಸಿದೆ.

ಚುನಾವಣಾ ಆಯೋಗವು ಮತದಾರರನ್ನು ಚುನಾವಣೆಯಲ್ಲಿ ಭಾಗವಹಿಸುವಂತೆ ಒತ್ತಾಯಿಸಲು ಬಲವಂತದ ಕ್ರಮವನ್ನು ಅಳವಡಿಸಿಕೊಳ್ಳಲು ಕಾರ್ಪೊರೇಟ್‌ಗಳನ್ನು, ಅದೂ ಚುನಾವಣೆಗಳಲ್ಲಿ ಅವುಗಳ ಪಾತ್ರದ ಬಗ್ಗೆ ಬಹಳಷ್ಟು ಆತಂಕಗಳು ಇರುವಾಗ, ಏಕೆ ಒಳಗೊಳ್ಳಬೇಕು ಎಂದು ಅನುಭವೀ ಆಡಳಿತಗಾರ ಇ.ಎ.ಎಸ್ ಶರ್ಮ ಮುಖ್ಯ ಚುನಾವಣಾ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

"ಭಾರತದಲ್ಲಿ ಈ ಕಾರ್ಪೊರೇಟ್‌ಗಳು ವಿವಾದಾತ್ಮಕ ಚುನಾವಣಾ ಬಾಂಡ್‌ಗಳ ಮೂಲಕ ನಿಧಿ ಒದಗಿಸುವುದು, ರಾಜಕೀಯ ರ್‍ಯಾಲಿಗಳಿಗೆ ಸಂಚಾರ–ಸಾರಿಗೆ ಮತ್ತು ಇತರ ಬೆಂಬಲಗಳನ್ನು ಒದಗಿಸುವುದು ಸೇರಿದಂತೆ ಹಲವಾರು ಪಾರದರ್ಶಕವಲ್ಲದ ರೀತಿಯಲ್ಲಿ ರಾಜಕೀಯ ಪಕ್ಷಗಳಿಗೆ ಧನಸಹಾಯ ನೀಡುತ್ತಿರುವ ಬಗ್ಗೆ ದೂರುಗಳಿವೆ. ಹೀಗಿರುವಾಗ ಚುನಾವಣಾ ಆಯೋಗ ಕಾರ್ಮಿಕರನ್ನು ಮತ ಚಲಾಯಿಸಲು ಮನವೊಲಿಸಲು ಅದೇ ಕಾರ್ಪೊರೇಟ್ ಗಳನ್ನು ಅವಲಂಬಿಸುವುದು ಸ್ವಲ್ಪ ವಿಲಕ್ಷಣವಾಗಿದೆ ಎಂದು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಕಂಪನಿಗಳ ಕಾಯಿದೆ ಮತ್ತು ವಿದೇಶಿ ದೇಣಿಗೆ ನಿಯಂತ್ರಣ ಕಾಯಿದೆಯ ಅಸ್ತಿತ್ವದಲ್ಲಿರುವ ನಿಬಂಧನೆಗಳು, ರಾಜಕೀಯ ಪಕ್ಷಗಳು ಕಾರ್ಪೊರೇಟ್‌ಗಳಿಂದ ಹಣವನ್ನು ಪಡೆಯಲು ಅನುಮತಿ ನೀಡುತ್ತವೆ. ಹೀಗೆ ರಾಜಕೀಯ ಪಕ್ಷಗಳಿಗೆ ನಿಧಿ ಒದಗಿಸುವ ಕಾರ್ಪೊರೇಟ್‌ಗಳು ಮತ್ತು ಸಾಮಾನ್ಯ ನಾಗರಿಕ–ಮತದಾರರು ಚುನಾವಣೆಗಳಿಗೆ ಸಂಬಂಧಪಟ್ಟಂತೆ ಒಂದೇ ನೆಲೆಯಲ್ಲಿ ಇರುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಮತದಾರರ ಮೇಲೆ ನಿಗಾ ಇಡಲು ಕಾರ್ಪೊರೇಟ್‌ಗಳಿಗೆ ಅನುವು ಮಾಡಿ ಕೊಡುವುದು ಚುನಾವಣಾ ಪ್ರಕ್ರಿಯೆಯ ಸಮಗ್ರತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

**"ವಿಶ್ವಾಸಾರ್ಹತೆಯನ್ನು ಕೆಡಿಸುವ ಕ್ಷೇತ್ರಗಳಿಗೆ ಕಾಲಿಡಬೇಡಿ"**

ಇನ್ನೂ ವಿಲಕ್ಷಣ ಸಂಗತಿಯೆಂದರೆ ಹಲವು ಖಾಸಗಿ ಕಂಪನಿಗಳು ತಮ್ಮ ಕಾರ್ಮಿಕರು/ನೌಕರರು ಮತದಾನ ಮಾಡಲು ಬಿಡುವುದಕ್ಕೆ ಹಿಂದೇಟು ಹಾಕುವ ದೂರುಗಳ ಹಿನ್ನೆಲೆಯಲ್ಲಿ ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಸೆಕ್ಷನ್ 135 ಬಿ ಅಡಿಯಲ್ಲಿ ಮತದಾನದ ದಿನ ರಜಾ ಕೊಡಬೇಕೆಂದು ವಿಧಿಸಬೇಕಾಗಿ ಬಂದಿತ್ತು ಎಂಬುದನ್ನು ಮುಖ್ಯ ಚುನಾವಣಾ ಆಯುಕ್ತರ ಗಮನಕ್ಕೆ ತಂದಿರುವ ಶರ್ಮ ಅವರು "ಈ ಬಾಧ್ಯತೆಯ ಜಾರಿಯ ಮೇಲ್ವಿಚಾರಣೆಯ ಅಗತ್ಯವಿದ್ದಲ್ಲಿ, ಅಂತಹ ಮೇಲ್ವಿಚಾರಣೆಯು ಖಾಸಗಿ ಕಂಪನಿಗಳು ಮತ್ತು ಅವುಗಳ ಪ್ರವರ್ತಕರಿಗೆ ಸಂಬಂಧಿಸಿದಂತೆ ಮಾತ್ರ ಅಗತ್ಯವಿದೆಯೇ ಹೊರತು ಕಾರ್ಮಿಕರಿಗೆ ಸಂಬಂಧಿಸಿದಂತೆ ಅಲ್ಲ" ಎಂದು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಕಾರ್ಮಿಕರು ತಮ್ಮ ಮತಗಳನ್ನು ಚಲಾಯಿಸುವಂತೆ ಒತ್ತಾಯಿಸುವಲ್ಲಿ ಖಾಸಗಿ ಕಂಪನಿಗಳನ್ನು ತೊಡಗಿಸಿಕೊಳ್ಳುವುದರಿಂದ ಅವರು ನಿರ್ದಿಷ್ಟ ರಾಜಕೀಯ ಪಕ್ಷಕ್ಕೆ ಮತ ಚಲಾಯಿಸುವಂತೆ ಕಾರ್ಮಿಕರನ್ನು ಒತ್ತಾಯಿಸುವ ಭ್ರಷ್ಟ ಆಚರಣೆಗೆ ಅನುವು ಮಾಡಿಕೊಡಬಹುದು ಎಂದು ಭಯಪಡಲು ಸಾಕಷ್ಟು ಕಾರಣಗಳಿವೆ. ಆದ್ದರಿಂದ "ಮತದಾರರು ತಮ್ಮ ಮತ ಚಲಾಯಿಸುವಂತೆ ಬಲವಂತ ಪಡಿಸುವಲ್ಲಿ ಖಾಸಗಿ ಕಂಪನಿಗಳನ್ನು ತೊಡಗಿಸದಂತೆ ನಾನು ಭಾರತದ ಚುನಾವಣಾ ಆಯೋಗಕ್ಕೆ ಮನವಿ ಮಾಡುತ್ತೇನೆ, ಏಕೆಂದರೆ ಇದು ಇತರರಿಗೆ ಅನನುಕೂಲವಾಗುವಂತೆ ನಿರ್ದಿಷ್ಟ ರಾಜಕೀಯ ಪಕ್ಷಕ್ಕೆ ಪ್ರಯೋಜನಕಾರಿಯಾಗಿ ಪರಿಣಮಿಸಬಹುದು" ಎಂದಿರುವ ಇಎಎಸ್ ಶರ್ಮ, ಚುನಾವಣೆಗಳನ್ನು ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆಸುವ ಜವಾಬ್ದಾರಿಯಿರುವ ಸ್ವತಂತ್ರ ಸಾಂವಿಧಾನಿಕ ಪ್ರಾಧಿಕಾರವಾಗಿ ಚುನಾವಣಾ ಆಯೋಗ ತನ್ನ ವಿಶ್ವಾಸಾರ್ಹತೆಯನ್ನು ಸವೆಸುವ ಕ್ಷೇತ್ರಗಳಿಗೆ ಕಾಲಿಡುತ್ತಿದೆಯೇನೋ ಎಂಬ ಭೀತಿ ವ್ಯಕ್ತಪಡಿಸಿದ್ದಾರೆ.

# 'ಷಿ ಪಿಂಗ್ ಭಾಷಣದಲ್ಲಿ ತೈವಾನ್ ಗಿಂತ ಮುಖ್ಯವಾದ ವಿಷಯಗಳು ಇದ್ದವು'

ಪುಟ 16 ರಿಂದ


ನಿಜವಾಗಿಯೂ ಅದಕ್ಕೆ ವಿರುದ್ಧವಾದುದು ಆಗುತ್ತದೆ ಎಂದು ಷಿ ಅವರು ತಮ್ಮ ಭಾಷಣದಲ್ಲಿ ಬಲವಾಗಿ ಒತ್ತಿಹೇಳಿದರು. "ಶಾಂತಿಯುತ (ತೈವಾನಿನೊಂದಿಗೆ) ಪುನರ್–ಏಕೀಕರಣಕ್ಕಾಗಿ ಅತ್ಯಂತ ಪ್ರಾಮಾಣಿಕವಾದ ಹಾಗೂ ಕಟ್ಟಕಡೆಯ ಪ್ರಯತ್ನದೊಂದಿಗೆ ಶ್ರಮಿಸುವುದನ್ನು ನಾವು ಮುಂದುವರಿಸುತ್ತೇವೆ, ಆದರೆ ಸೇನೆಯ ಬಳಕೆಯನ್ನು ತೊರೆಯುತ್ತೇವೆಂದು ಎಂದಿಗೂ ನಾವು ಭರವಸೆ ನೀಡುವುದಿಲ್ಲ. ಚೈನಾದ ಪುನರ್–ಏಕೀಕರಣದತ್ತ ಮತ್ತು ಚೈನಾ ದೇಶದ ಹೊಸ ಚೈತನ್ಯದತ್ತ ಇತಿಹಾಸ ಚಕ್ರಗಳು ಉರುಳುತ್ತಿವೆ. ನಮ್ಮ ದೇಶದ ಸಂಪೂರ್ಣ ಪುನರ್–ಏಕೀಕರಣ ಆಗಲೇಬೇಕು ಮತ್ತು ನಿಸ್ಸಂದೇಹವಾಗಿ ಅದು ಆಗಿಯೇ ತೀರುತ್ತದೆ." ಎಂದು ಸ್ಪಷ್ಟಪಡಿಸಿದರು. ಇದು ಅಲ್ಲಿ ಬೀಜಿಂಗಿನ 'ಗ್ರೇಟ್ ಹಾಲ್ ಆಫ್ ಪೀಪಲ್' ಸಭಾಂಗಣದಲ್ಲಿ ಸೇರಿದ್ದ ಸರಿಸುಮಾರು 3,000 ಪ್ರತಿನಿಧಿಗಳ ಹರ್ಷೋದ್ಗಾರಕ್ಕೆ ಕಾರಣವಾಯಿತು.

ಒಂದು ವರ್ಷದ ಹಿಂದೆ ಸಿಪಿಸಿಯ ಶತಮಾನೋತ್ಸವ ಆಚರಿಸುವಾಗ ತೈವಾನ್ ಕುರಿತು ಜಗತ್ತು ಕೇಳಿಸಿಕೊಂಡಿದ್ದಕ್ಕಿಂತ ಮೃದುವಾಗಿ ಅವರ ಈ ಬಾರಿಯ ಮಾತು ಇತ್ತು. ಸಂದೇಹಕ್ಕೆ ಆಸ್ಪದವಿಲ್ಲದಂತೆ ಅಮೆರಿಕಾವನ್ನು ಗುರಿಯಾಗಿಸಿ ಅವರು ಆಗ ಒಂದು ಸಂದೇಶದಲ್ಲಿ "ವಿದೇಶಿ ಶಕ್ತಿಗಳು ನಮ್ಮನ್ನು ಬೆದರಿಸಲು, ಬಲಾತ್ಕರಿಸಲು ಮತ್ತು ಗುಲಾಮರನ್ನಾಗಿಸಲು ಚೈನಾದ ಜನರು ಎಂದಿಗೂ ಅವಕಾಶ ನೀಡುವುದಿಲ್ಲ. ಯಾರಾದರೂ ಹಾಗೆ ಮಾಡಲು ಯತ್ನಿಸಿದರೆ, 140 ಕೋಟಿ ಚೈನಾದ ಜನರು ತಮ್ಮ ರಕ್ತ ಮಾಂಸಗಳಿಂದ ನಿರ್ಮಿಸಿದ ಚೈನಾದ ಗೋಡೆಗೆ ಅವರ ತಲೆಯನ್ನು ಚಚ್ಚಿ ಒಡೆದುಹಾಕುತ್ತೇವೆ." ಎಂದಿದ್ದರು.

ಚೈನಾದ "ರಾಷ್ಟ್ರೀಯ ನವಚೈತನ್ಯ" ಎಂಬ ಪದವು ಅವರ ಭಾಷಣದಲ್ಲಿ ಎಂಟು ಬಾರಿ ಕಾಣಿಸಿಕೊಂಡಿದೆ. ಆ ವಿಶ್ವಾಸಪೂರ್ಣ ಸಂದೇಶವು ಹೀಗಿದೆ: ಚೈನಾ ಎದ್ದುನಿಂತಿದೆ, ಮತ್ತು ಪಾಶ್ಚಾತ್ಯರು ಅದರೊಂದಿಗೆ ರಾಜಿಮಾಡಿಕೊಳ್ಳಬೇಕು. "ಜಗತ್ತನ್ನು ನಿರ್ದೇಶಿಸುವ ಅಥವಾ ರೂಪಿಸುವ ಚೈನಾದ ಅಂತರ್‍ರಾಷ್ಟ್ರೀಯ ಪ್ರಭಾವ, ಆಕರ್ಷಣೆ ಮತ್ತು ಶಕ್ತಿ ಗಣನೀಯವಾಗಿ ಹೆಚ್ಚಾಗಿದೆ." ಎಂದು ಹೇಳಿದರು. ಪಾಶ್ಚಾತ್ಯವಲ್ಲದ ಆಧುನಿಕತೆಯ ಮಾದರಿಗಳಿಗಾಗಿ ಹುಡುಕಾಡುತ್ತಿರುವ ಜಗತ್ತಿನಲ್ಲಿ, "ಮಾನವಕೋಟಿಗೆ ಆಧುನಿಕತೆಯನ್ನು ಸಾಧಿಸಲು ಒಂದು ಹೊಸ ಆಯ್ಕೆಯನ್ನು ಚೈನಾದ ಆಧುನಿಕತೆಯು ನೀಡುತ್ತಿದೆ." ಎಂದು ಅವರು ವಿಶದಪಡಿಸಿದರು. ಸಂಪತ್ತಿನ ಅಸಮಾನತೆಯು ವ್ಯಾಪಕವಾಗುತ್ತಿರುವ ಭಾರತದಂತಹ ಸಮಾಜಕ್ಕೆ (ಆರ್.ಎಸ್.ಎಸ್ ಕೂಡ ಈ ಸಮಸ್ಯೆಯ ಬಗ್ಗೆ ಆತಂಕಪಡುತ್ತಿರುವಾಗ) ಚೈನಾ ಸಂದೇಶ ನೀಡುತ್ತಿದೆ. "ಎಲ್ಲಾ ಜನರಿಗೂ ಸಮಾನ ಏಳಿಗೆಯನ್ನು ನಾವು ದೃಢವಾಗಿ ಶ್ರಮವಹಿಸುತ್ತೇವೆ. ಆದಾಯ ವಿತರಣಾ ವ್ಯವಸ್ಥೆಯನ್ನು ನಾವು ಉತ್ತಮಗೊಳಿಸುತ್ತೇವೆ. ಸಂಪತ್ತಿನ ಕ್ರೋಢೀಕರಣವನ್ನು ನಾವು ಸರಿಯಾಗಿ ನಿಯಂತ್ರಿಸುತ್ತೇವೆ." ಚೈನಾದ "ಹಸಿರು ಅಭಿವೃದ್ಧಿ"ಯ ಕುರಿತು ಷಿ ಅವರ ಭಾಷಣದಲ್ಲಿ ಮತ್ತೆ ಮತ್ತೆ ಆಶ್ವಾಸನೆ ಇತ್ತು.

ಅಂತಿಮವಾಗಿ, ಚೈನಾದ ಎದ್ದುಬರುತ್ತಿರುವ ಶಕ್ತಿಯ ಬಗ್ಗೆ ಕಾಳಜಿ ಅಥವಾ ಆತಂಕ ಇರುವವರಿಗೆ ಅಲ್ಲಿ ಸ್ಪಷ್ಟವಾದ ಖಚಿತವಾದ ಭರವಸೆ ಇತ್ತು. "ಯಾವುದೇ ರೀತಿಯ ಅಧಿಪತ್ಯ ಮತ್ತು ವಿಸ್ತರಣಾವಾದದಲ್ಲಿ ಚೈನಾವು ತೊಡಗುವುದಿಲ್ಲ." ಈ ವಿಚಾರದಲ್ಲಿ ಚೈನಾವು ನುಡಿದಂತೆ ನಡೆಯುತ್ತದೆ ಎಂಬುದನ್ನು ಭಾರತೀಯರು ನಂಬುವಂತೆ, ಷಿ ಜಿನ್‌ಪಿಂಗ್ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿಯೊಂದಿಗೆ ಆದಷ್ಟು ಬೇಗ ಮಾತುಕತೆ ಪ್ರಾರಂಭಿಸುತ್ತಾರೆ ಮತ್ತು ಭಾರತ–ಚೈನಾ ಸಂಬಂಧಗಳು ಪೂರ್ಣ ಯಥಾಸ್ಥಿತಿಗೆ ಬರುವಲ್ಲಿನ ಎಲ್ಲಾ ಅಡಚಣೆಗಳನ್ನು ತೆಗೆದುಹಾಕುತ್ತಾರೆ ಎಂದು ಆಶಿಸಬೇಕಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE OCTOBER 24-30, 2022 Price: Rs. 10/- Date of Publication: 21 October 2022 RNI No. KARKAN /2006/17926 Posted on 25-10-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2





# ‘ಷಿ ಪಿಂಗ್ ಭಾಷಣದಲ್ಲಿ ತೈವಾನ್ ಗಿಂತ ಮುಖ್ಯವಾದ ವಿಷಯಗಳು ಇದ್ದವು’

ಚೈನಾದ ನಾಯಕತ್ವವು ಹಲವಾರು ಪ್ರಜಾಪ್ರಭುತ್ವಗಳಿಗಿಂತ ಹೆಚ್ಚು ಸಾಮೂಹಿಕವಾದುದು ಮತ್ತು ಪರಸ್ಪರ ಸಮಾಲೋಚನೆಗೆ ಒಳಪಟ್ಟಿದ್ದಾಗಿದೆ. .. .. ಷಿ ಅವರ ಭಾಷಣದ ವಸ್ತು ಹಾಗೂ ಮಂಡಿಸಿದ ವಿಷಯಕ್ಕೆ ಬಂದರೆ, ,,,ಅಲ್ಲಿ ಯಾವುದೇ ರೀತಿಯ ಪುಡಾರಿಕೆ ಇರಲಿಲ್ಲ – ಬಾಹ್ಯ ವಿರೋಧಿಗಳು ಅಥವಾ ಶತ್ರುಗಳ ಬಗ್ಗೆ ಸಂಬಂಧಪಟ್ಟಂತೆ “ಮನೆ ಒಳಗೆ ಹೋಗಿ ಹೊಡೆಯುತ್ತೇವೆ” ಎಂಬ ಭಾವೋತ್ತೇಜಕ ಮಾತುಗಳಿರಲಿಲ್ಲ. ಭಾರತದಲ್ಲಿ ಇಂತಹ ರಾಜಕೀಯ ಸಮ್ಮೇಳನಗಳಲ್ಲಿ ಸಾಮಾನ್ಯವಾಗಿ ನಾವು ಕಾಣುವಂತೆ, ಆಂತರಿಕ ವಿರೋಧಿಗಳನ್ನು ಗುರಿಯಾಗಿಸಿ ಅಲ್ಲಿ ಒಂದೇ ಒಂದು ಶಬ್ದವೂ ಇರಲಿಲ್ಲ... ..ಷಿ ಅವರು ಲಿಖಿತ ವರದಿಯಿಂದ ಓದಿದ ಎರಡು ಗಂಟೆಗಳ ಭಾಷಣದಲ್ಲಿ ಬಹಳಷ್ಟು ಸ್ವಾರಸ್ಯಪೂರ್ಣ ಸಂದೇಶಗಳು ಇದ್ದವು. ಒಂದು ದಶಕದ ಹಿಂದೆ ಷಿ ಅವರು ಪಕ್ಷದ ಮುಖ್ಯಸ್ಥರಾಗಿ “ಹೊಸ ಯುಗ” ಪ್ರಾರಂಭವಾದಾಗಿನಿಂದ ಚೈನಾದಲ್ಲಿ ಆದ ಎಲ್ಲಾ ಸಾಧನೆಗಳನ್ನು ಅದು ಸಮಗ್ರವಾಗಿ ಒಳಗೊಂಡಿತ್ತು. ಆದರೆ ಅದು ದೇಶವು ಇಂದು ಎದುರಿಸುತ್ತಿರುವ ಅಗಾಧ ಸವಾಲುಗಳನ್ನು ಮರೆಮಾಚಲಿಲ್ಲ. “ಭ್ರಷ್ಟಾಚಾರವು ಅತಿ ದೊಡ್ಡ ಕ್ಯಾನ್ಸರ್ ಆಗಿದ್ದು ಅದು ಪಕ್ಷದ ಚೈತನ್ಯವನ್ನು ಮತ್ತು ಹೋರಾಟದ ಶಕ್ತಿಯನ್ನು ಉಡುಗಿಸುತ್ತದೆ.” ಎಂದು ಹೇಳಿದರು.. .. “ಭ್ರಷ್ಟಾಚಾರ–ವಿರೋಧಿ ಆಂದೋಲನವು ಸ್ವಯಂ–ಕ್ರಾಂತಿಯ ಅತ್ಯಂತ ಶುದ್ಧ ವಿಧಾನವಾಗಿದೆ.” ಎಂದು ಷಿ ಹೇಳಿದರು. ಷಿ ಅವರ ಭಾಷಣದ ಬಹು ಭಾಗವು ಕಮ್ಯುನಿಸ್ಟ್ ಪಕ್ಷದ “ಸ್ವಯಂ–ಸುಧಾರಣಾ” ಕಾರ್ಯಕ್ಕೆ ಮೀಸಲಾಗಿತ್ತು.

**–ಸುಧೀಂದ್ರ ಕುಲಕರ್ಣಿ**
(ಲೇಖಕರು ಭಾರತದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರ ಸಹಾಯಕರಾಗಿದ್ದರು)
ಕೃಪೆ: NDTV ವೆಬ್ ಸೈಟ್ ಅನುವಾದ:ಟಿ.ಸುರೇಂದ್ರ ರಾವ್

ನಾವು ಭಾರತೀಯರು ಸಮಕಾಲೀನ ಚೈನಾ ವನ್ನು ಪಾಶ್ಚಾತ್ಯ ಮಾಧ್ಯಮಗಳು ಮತ್ತು ಬುದ್ಧಿಜೀವಿಗಳ ಕಣ್ಣಿನಿಂದ ನೋಡುವ ಒಂದು ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೇವೆ; ಅದರಿಂದಾಗಿ ನಮ್ಮ ನೆರೆಹೊರೆ ಚೈನಾವು ಸಾಧಿಸಿರುವ ಬೃಹದಾಕಾರದ ಸ್ವಯಂಪರಿವರ್ತನೆಯ ನೈಜ ಸ್ವರೂಪವನ್ನು ಅರಿಯುವಲ್ಲಿ ನಾವು ವಿಫಲರಾಗಿದ್ದೇವೆ. ಪಾಶ್ಚಾತ್ಯರು ಬಹಳ ಮುಖ್ಯವಾಗಿ ಅಮೆರಿಕಾ, ಚೈನಾದ ಬೆಳವಣಿಗೆಯ ಕುರಿತಂತೆ ಸಂಶಯಪಿಶಾಚಿಯಂತೆ ವರ್ತಿಸುತ್ತಿದ್ದಾರೆ. ಏಕೆಂದರೆ ಅವುಗಳಿಗೆ ತಮ್ಮ ಜಾಗತಿಕ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತೇವೆಯೋ ಎಂಬ ಭಯ ಶುರುವಾಗಿದೆ ಆದಕಾರಣ, ಅಮೆರಿಕಾ ಮತ್ತು ಯೂರೋಪಿನ ಬಲಪಂಥೀಯರು ಚೈನಾವನ್ನು – ವಿಶೇಷವಾಗಿ ದೃಢಸಂಕಲ್ಪದ ನೇತಾರ ಷಿ ಜಿಂಗ್‌ಪಿಂಗ್ ಅವರನ್ನು – ದೊಡ್ಡ ಅಪಾಯವೆಂದು ಪರಿಗಣಿಸುತ್ತಾರೆ. ಚೈನಾವನ್ನು ನಿಗ್ರಹಿಸಲು ವಾಷಿಂಗ್‌ಟನ್ (ಅಮೆರಿಕಾ ಸರಕಾರವು) ತನ್ನೆಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ; ಚೈನಾವು ತಮ್ಮದೆಂದು ಹೇಳಿಕೊಳ್ಳುತ್ತಿರುವ ತೈವಾನ್‌ನಲ್ಲಿ ಅರೆವಾಹಕ ತಂತ್ರಜ್ಞಾನದ ಶಸ್ತ್ರದಂತಹ ಬಳಕೆಯಿಂದ ಹಿಡಿದು ಪ್ರಚೋದನಕಾರಿ ಕಾರ್ಯಾಚರಣೆಗಳವರೆಗೆ ಎಲ್ಲವನ್ನೂ ಆರಂಭಿಸಿದೆ.

ರಾಜಕೀಯವನ್ನು ವೈಯಕ್ತಿಕ ನೆಲೆಯಲ್ಲಿ ಚರ್ಚಿಸುವ ಚಾಳಿಯನ್ನೂ ಪಾಶ್ಚಾತ್ಯರು ಹೊಂದಿದ್ದಾರೆ. ಆದ್ದರಿಂದ, ಚೈನಾ ಕಮ್ಯುನಿಸ್ಟ್ ಪಕ್ಷದ 20 ನೇ ರಾಷ್ಟ್ರೀಯ ಮಹಾಧಿವೇಶನದಲ್ಲಿ ಷಿ ಜಿಂಗ್‌ಪಿಂಗ್ ಹೇಗೆ ನಿಯಮಗಳನ್ನು ಉಲ್ಲಂಘಿಸಿ ಪಕ್ಷದ ಮುಖ್ಯಸ್ಥನಾಗಿ ಮರು ಆಯ್ಕೆಗೊಳ್ಳುವ ಮೂಲಕ ತನ್ನ ಹಿಡಿತವನ್ನು ಗಟ್ಟಿಗೊಳಿಸಿಕೊಳ್ಳುತ್ತಿದ್ದಾರೆ ಎಂಬುದರ ಬಗ್ಗೆಯೇ ಬಹುತೇಕ ಪಾಶ್ಚಾತ್ಯ ಮಾಧ್ಯಮಗಳ ವ್ಯಾಖ್ಯಾನಗಳೆಲ್ಲವೂ ಕೇಂದ್ರೀಕೃತವಾಗಿವೆ.

ಆದರೆ, ಅಕ್ಟೋಬರ್ 16 ರಂದು ಚೈನಾ ಕಮ್ಯುನಿಸ್ಟ್ ಪಕ್ಷದ (ಸಿಪಿಸಿ) ಮಹಾಧಿವೇಶನದಲ್ಲಿನ ಬಹಿರಂಗ ಸಭೆಯ ಕಲಾಪಗಳನ್ನು ವೀಕ್ಷಿಸಿದ ಹಾಗೂ ಷಿ ಅವರು ಮಾಡಿದ ಭಾಷಣವನ್ನು ಹೆಚ್ಚು ಗಮನ ಕೊಟ್ಟು ಆಲಿಸಿದವರು ಬೇರೆಯದೇ ಅಭಿಪ್ರಾಯಕ್ಕೆ ಬರುತ್ತಾರೆ. ಚೈನಾದ ಕಮ್ಯುನಿಸ್ಟ್ ಪಕ್ಷವು ಬಹು ದೊಡ್ಡ ಘಟಕವಾಗಿದ್ದು ಹಾಗೂ ಬಹಳ ಉತ್ತಮವಾದ ಸಾಂಸ್ಥಿಕ ಸಂರಚನೆಯನ್ನು ಹೊಂದಿದ್ದಾಗಿದೆ: ತನ್ನ ಉನ್ನತ ನೇತಾರನ ಮನಸೋ ಇಚ್ಛೆ ನಡೆಯುವ ಪಕ್ಷವಲ್ಲ ಅದು. ಸಿಪಿಸಿಯು ಮಾವೋ–ತ್ಸೆ–ತುಂಗ್ ಅವರ ಆಳ್ವಿಕೆಯ ಕೊನೆಯ ದಶಕಗಳಲ್ಲಿ ನಡೆದ ‘ಸಾಂಸ್ಕೃತಿಕ ಕ್ರಾಂತಿ’ ಎಂದು ಕರೆಯಲ್ಪಡುವ ಹುಚ್ಚಾಟದಿಂದ ಕಹಿ ಪಾಠಗಳನ್ನು ಕಲಿತಿದೆ; ‘ಸಾಂಸ್ಕೃತಿಕ ಕ್ರಾಂತಿ’ಯು ಇಡೀ ಚೀನಿ ಸಮಾಜವನ್ನು ಘಾಸಿಗೊಳಿಸಿತ್ತು ಮತ್ತು ಕಮ್ಯುನಿಸ್ಟ್ ಪಕ್ಷವನ್ನು ಹೆಚ್ಚೂ ಕಡಿಮೆ ನಾಶಗೊಳಿಸಿತ್ತು. ಷಿ ಜಿನ್‌ಪಿಂಗ್ ನಿಸ್ಸಂದೇಹವಾಗಿಯೂ ಶಕ್ತಿಶಾಲಿ ಹೌದು, ಆದರೆ ಅವರು ಪಕ್ಷವನ್ನು ಮಾವೋ ತನ್ನ ಕೊನೆಕಾಲದಲ್ಲಿ ಒಯ್ದ ಹಾದಿಯಲ್ಲಿ ಕೊಂಡೊಯ್ಯುತ್ತಿಲ್ಲ, ಅಥವಾ ಪಕ್ಷವು ಅವರನ್ನು ಹಾಗೆ ಮಾಡಲು ಬಿಡುವುದಿಲ್ಲ ಕೂಡ. 2012 ರಲ್ಲಿ ಸಿಪಿಸಿಯ ಪ್ರಧಾನ ಕಾರ್ಯದರ್ಶಿಯಾಗಿ ಮೊಟ್ಟ ಮೊದಲು ಆಯ್ಕೆಯಾದ ಕೂಡಲೇ ಷಿ ಅವರು ಹೇಳಿದ್ದರು: “ಈಗ ಚೈನಾದಲ್ಲಿ ಅಧಿಕಾರವನ್ನು ನಿಯಮ ಹಾಗೂ ಕಟ್ಟಳೆಗಳ ಪಂಜರದೊಳಗೆ ಭದ್ರವಾಗಿ ಇರಿಸಲಾಗಿದೆ.” ಈ ರೀತಿಯಲ್ಲಿ ನೋಡಿದರೆ, ನರೇಂದ್ರ ಮೋದಿ, ವ್ಲಾಡಿಮಿರ್ ಪುಟಿನ್, ರೆಸೆಪ್ ತಯ್ಯಿಪ್ ಎರ್ದೊಗನ್ ಅಥವಾ ಡೊನಾಲ್ಡ್ ಟ್ರಂಪ್ (ಅಮೆರಿಕಾದ ಅಧ್ಯಕ್ಷನಾಗಿದ್ದಾಗ) ಅವರುಗಳು ವ್ಯಕ್ತಿಗತ ನೆಲೆಯಲ್ಲಿ ತಮ್ಮ ಕೈಯಲ್ಲಿ ಬಹಳ ಹೆಚ್ಚಿನ ಅಧಿಕಾರವನ್ನು ಹೊಂದಿದ್ದಾರೆ.

ಷಿ ಅವರು ಭಾನುವಾರ ಮಾಡಿದ ಭಾಷಣವು ಅವರೊಬ್ಬರದ್ದೇ ಆಗಿರಲಿಲ್ಲ ಎನ್ನುವುದು ಬಹಳ ಜನರಿಗೆ ಅಚ್ಚರಿ ಉಂಟುಮಾಡಬಹುದು. 19 ನೇ ಮಹಾಧಿವೇಶನದಲ್ಲಿ ಐದು ವರ್ಷಗಳ ಹಿಂದೆ ಆಯ್ಕೆಯಾಗಿ ಈಗ ನಿರ್ಗಮಿಸುತ್ತಿರುವ ಕೇಂದ್ರ ಸಮಿತಿಯ ಪರವಾಗಿ ಅವರು ಸಿಪಿಸಿಯ 20 ನೇ ಮಹಾಧಿವೇಶನದಲ್ಲಿ ಅದನ್ನು ಮಂಡಿಸಿದರು. ಈ ಭಾಷಣದ ಸಿದ್ಧತೆಯು ಸರಿಸುಮಾರು ಒಂದು ವರ್ಷದ ಹಿಂದೆಯೇ ಆರಂಭವಾಗಿದೆ, ಮತ್ತು ಬಹಳಷ್ಟು ಮುಖಂಡರು ಅದಕ್ಕೆ ತಮ್ಮ ಕೊಡುಗೆ ನೀಡಿದ್ದಾರೆ ಹಾಗೂ ಹಲವಾರು ಹಂತಗಳಲ್ಲಿ ಅದನ್ನು ಮರುಪರಿಶೀಲನೆಗೆ ಒಡ್ಡಲಾಗಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಚೈನಾದ ನಾಯಕತ್ವವು ಹಲವಾರು ಪ್ರಜಾಪ್ರಭುತ್ವಗಳಿಗಿಂತ ಹೆಚ್ಚು ಸಾಮೂಹಿಕವಾದುದು ಮತ್ತು ಪರಸ್ಪರ ಸಮಾಲೋಚನೆಗೆ ಒಳಪಟ್ಟಿದ್ದಾಗಿದೆ.

ಷಿ ಅವರ ಭಾಷಣದ ವಸ್ತು ಹಾಗೂ ಮಂಡಿಸಿದ ವಿಷಯಕ್ಕೆ ಬಂದರೆ, ಪೂರ್ವಾಗ್ರಹವಿಲ್ಲದ ಯಾವುದೇ ಟೀಕಾಕಾರರು ಮತ್ತೊಂದು ಪ್ರಮುಖವಾದ ಭಿನ್ನತೆಯನ್ನು ಸುಲಭವಾಗಿ ಗಮನಿಸುತ್ತಾರೆ. ಅಲ್ಲಿ ಯಾವುದೇ ರೀತಿಯ ಪುಡಾರಿಕೆ ಇರಲಿಲ್ಲ – ಬಾಹ್ಯ ವಿರೋಧಿಗಳು ಅಥವಾ ಶತ್ರುಗಳ ಬಗ್ಗೆ ಸಂಬಂಧಪಟ್ಟಂತೆ “ಮನೆ ಒಳಗೆ ಹೋಗಿ ಹೊಡೆಯುತ್ತೇವೆ” ಎಂಬ ಭಾವೋತ್ತೇಜಕ ಮಾತುಗಳಿರಲಿಲ್ಲ. ಭಾರತದಲ್ಲಿ ಇಂತಹ ರಾಜಕೀಯ ಸಮ್ಮೇಳನಗಳಲ್ಲಿ ಸಾಮಾನ್ಯವಾಗಿ ನಾವು ಕಾಣುವಂತೆ, ಆಂತರಿಕ ವಿರೋಧಿಗಳನ್ನು ಗುರಿಯಾಗಿಸಿ ಅಲ್ಲಿ ಒಂದೇ ಒಂದು ಶಬ್ದವೂ ಇರಲಿಲ್ಲ. ದಿಟವಾಗಿಯೂ ಅದು, ದಿ ಇಕಾನಾಮಿಸ್ಟ್ ಪತ್ರಿಕೆಯಲ್ಲಿ ಇತ್ತೀಚೆಗೆ ಒಬ್ಬರು ಹೇಳಿದಂತೆ “ಜಗತ್ತಿನ ಅತಿ ದೊಡ್ಡ ಶಕ್ತಿಶಾಲಿ ನೇತಾರ”, ಷಿ ಅವರ ಬಾಷಣವು ನೀರಸವಾಗಿತ್ತು, ಯಾವುದೇ ವಾಗಾಡಂಬರವಿಲ್ಲದೆ ಶೂನ್ಯವಾಗಿತ್ತು.

ಆದಾಗ್ಯೂ ಷಿ ಅವರು ಲಿಖಿತ ವರದಿಯಿಂದ ಓದಿದ ಎರಡು ಗಂಟೆಗಳ ಭಾಷಣದಲ್ಲಿ ಬಹಳಷ್ಟು ಸ್ವಾರಸ್ಯಪೂರ್ಣ ಸಂದೇಶಗಳು ಇದ್ದವು. ಒಂದು ದಶಕದ ಹಿಂದೆ ಷಿ ಅವರು ಪಕ್ಷದ ಮುಖ್ಯಸ್ಥರಾಗಿ “ಹೊಸ ಯುಗ” ಪ್ರಾರಂಭವಾದಾಗಿನಿಂದ ಚೈನಾದಲ್ಲಿ ಆದ ಎಲ್ಲಾ ಸಾಧನೆಗಳನ್ನು ಅದು ಸಮಗ್ರವಾಗಿ ಒಳಗೊಂಡಿತ್ತು. ಆದರೆ ಅದು ದೇಶವು ಇಂದು ಎದುರಿಸುತ್ತಿರುವ ಅಗಾಧ ಸವಾಲುಗಳನ್ನು ಮರೆಮಾಚಲಿಲ್ಲ. “ಭ್ರಷ್ಟಾಚಾರವು ಅತಿ ದೊಡ್ಡ ಕ್ಯಾನ್ಸರ್ ಆಗಿದ್ದು ಅದು ಪಕ್ಷದ ಚೈತನ್ಯವನ್ನು ಮತ್ತು ಹೋರಾಟದ ಶಕ್ತಿಯನ್ನು ಉಡುಗಿಸುತ್ತದೆ.” ಎಂದು ಹೇಳಿದರು. ಭ್ರಷ್ಟಾಚಾರದ ವಿರುದ್ಧದ ಅವರ ರಾಜಿಯಿಲ್ಲದೆ ಸಮರದ ಅವಧಿಯಲ್ಲಿ, ಚೈನಾವು ಸಾವಿರಾರು “ಹುಲಿಗಳನ್ನು” (ಉನ್ನತ ದರ್ಜೆಯ ಅಧಿಕಾರಿಗಳನ್ನು) ಮತ್ತು “ನೊಣಗಳನ್ನು” (ಕೆಳ ಹಂತದ ಕಾರ್ಯಕರ್ತರನ್ನು) ಲಂಚ ಪಡೆದಿದ್ದಕ್ಕೆ ಜೈಲಿಗೆ ಕಳಿಸಿತ್ತು. “ಭ್ರಷ್ಟಾಚಾರ–ವಿರೋಧಿ ಆಂದೋಲನವು ಸ್ವಯಂ–ಕ್ರಾಂತಿಯ ಅತ್ಯಂತ ಶುದ್ಧ ವಿಧಾನವಾಗಿದೆ.” ಎಂದು ಷಿ ಹೇಳಿದರು.

ಷಿ ಅವರ ಭಾಷಣದ ಬಹು ಭಾಗವು ಕಮ್ಯುನಿಸ್ಟ್ ಪಕ್ಷದ “ಸ್ವಯಂ–ಸುಧಾರಣಾ” ಕಾರ್ಯಕ್ಕೆ ಮೀಸಲಾಗಿತ್ತು. ಸಿಪಿಸಿಯ 59 ಲಕ್ಷ ಸದಸ್ಯರು “ಪಕ್ಷದ ಸ್ಥಾಪಕ ಆಕಾಂಕ್ಷೆಗಳು ಮತ್ತು ಮೂಲ ಆಶಯಗಳಿಗೆ” ಸತ್ವನಿಷ್ಠರಾಗಿರಬೇಕೆಂದು ಅವರು ಮತ್ತೆ ಮತ್ತೆ ಹುರಿದುಂಬಿಸಿದರು. ಇದು ಖಂಡಿತವಾಗಿಯೂ ಸುಲಭವಲ್ಲ. 1921 ರಲ್ಲಿ ಸಿಪಿಸಿಯನ್ನು ಸ್ಥಾಪನೆ ಮಾಡಿದಾಗಿನ ಪರಿಸ್ಥಿತಿಯಿಂದ ಅಥವಾ 1949 ರಲ್ಲಿ ಅದು ಕ್ರಾಂತಿಯನ್ನು ಮಾಡಿದಾಗಿನ ಸಮಯದಿಂದ ಇವತ್ತು ಚೈನಾ ಗುರುತಿಸಲಾಗದಷ್ಟು ಬದಲಾಗಿದೆ, 1978 ರಲ್ಲಿ ಡೆಂಗ್ ಷಿಯೋ ಪಿಂಗ್ ಆರಂಭಿಸಿದ “ಸುಧಾರಣೆಗಳು ಮತ್ತು ತೆರೆದುಕೊಳ್ಳುವುದು” ಎಂಬ ದಿಟ್ಟತನದ ನೀತಿಯ ಅವಧಿಗಿಂತಲೂ ಅದು ಬಹಳ ಭಿನ್ನವಾಗಿದೆ. ಪಕ್ಷವು ಹೇಗೆ ಜೀವಂತವಾಗಿ ಹಾಗೂ ಪರಿಣಾಮಕಾರಿಯಾಗಿ ಉಳಿಯಬೇಕು ಮತ್ತು ಕೊಳೆತು ನಾಶವಾಗದಂತೆ (ಸೋವಿಯತ್ ಯೂನಿಯನ್ನಿನ ಕಮ್ಯುನಿಸ್ಟ್ ಪಕ್ಷಕ್ಕಾದಂತೆ ಆಗದೆ) ಇರಬೇಕು? ಕಮ್ಯುನಿಸ್ಟ್ ಪಕ್ಷದ ಆಳ್ವಿಕೆ ಕೊನೆಯಾಗಬೇಕು ಮತ್ತು ಚೈನಾವು ಸೋವಿಯತ್ ಯೂನಿಯನ್ನಿನಂತೆ ವಿಘಟಿತವಾಗಬೇಕು ಎಂದು ಪಾಶ್ಚಾತ್ಯರು ಮಾಡಬಹುದಾದುದನ್ನೆಲ್ಲಾ ಮಾಡುತ್ತಿದ್ದಾರೆ.

ಚೈನಾವು ವಿಘಟಿತವಾಗುವುದಿಲ್ಲ.

ಪುಟ 15 ಕ್ಕೆ

**JANASHAKTHI KANNADA VARA PATRIKE:** Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**